## ಗುರುವಾರ, ೧ನೇ ಮೇ, ೧೯೪೭

ಭಾರತದ ಸಂವಿಧಾನ ರಚನಾ ಸಭೆಯು ಹೊಸ ದಿಲ್ಲಿಯ ಸಂವಿಧಾನ ಸಭಾಂಗಣದಲ್ಲಿ ಮಾನ್ಯ ರಾಜೇಂದ್ರ ಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ಪ್ರಾತಃಕಾಲ ೯ ಗಂಟೆಗೆ ಆರಂಭಗೊಂಡಿತು.

ಮೂಲಭೂತ ಹಕ್ಕುಗಳ ಮೇಲಿನ ಮಧ್ಯಂತರ ವರದಿ (ಮುಂದುವರಿದುದು).

**ಮಾನ್ಯ ಸಭಾಧ್ಯಕ್ಷರು:** ನಾವೀಗ ಉಳಿದ ಖಂಡಗಳ ಮೇಲಿನ ಚರ್ಚೆಯನ್ನು ಮುಂದುವರಿಸೋಣ.

ಖಂಡ ೧೦– ಸ್ವಾತಂತ್ರ್ಯದ ಹಕ್ಕುಗಳು*

**ಗೌರವಾನ್ವಿತ ಸರ್ದಾರ್ ವಲ್ಲಭಭಾಯ್ ಪಟೇಲ್** (ಬಾಂಬೆ : ಸಾಮಾನ್ಯ) : ೧೦ನೇ ಖಂಡವು ಈ ರೀತಿ ಇದೆ:

"ಬೇರೆ ಬೇರೆ ರಾಜ್ಯಗಳ ನಡುವಿನ ಹಾಗೂ ಬೇರೆ ಬೇರೆ ಜನರ ನಡುವಿನ ವ್ಯಾಪಾರ, ವಾಣಿಜ್ಯ ವ್ಯವಹಾರ ಹಾಗೂ ಒಡನಾಟಗಳು ಒಕ್ಕೂಟದ ಕಾನೂನಿನ ನಿಬಂಧನೆಗಳಿಗೆ ಒಳಪಟ್ಟಿರುತ್ತವೆ: ಆದರೆ, ಸಾರ್ವಜನಿಕ ವ್ಯವಸ್ಥೆ, ನೈತಿಕತೆ ಅಥವಾ ಆರೋಗ್ಯದ ದೃಷ್ಟಿಯಿಂದ ಮತ್ತು ತುರ್ತು ಸ್ಥಿತಿಯಲ್ಲಿ ಯಾವುದೇ ರಾಜ್ಯವು ಈ ವಿಷಯದಲ್ಲಿ ಸೂಕ್ತ ನಿರ್ಬಂಧ ಹೇರಬಹುದು".

ಕಂಡಿಕೆ ೨ರಲ್ಲಿದ್ದ 'ವಿವೇಚನಾಯುಕ್ತ' ಎಂಬ ಪದವನ್ನು ತೆಗೆದುಹಾಕಿದ್ದೇವೆ.

"ಅಲ್ಲದೆ, ಈ ಅನುಚ್ಛೇದವು ಇತರ ರಾಜ್ಯಗಳಿಂದ ಆಮದು ಮಾಡಿಕೊಳ್ಳುವ ವಸ್ತುಗಳ ಮೇಲೆ ಮೇಲೆ ಯಾವುದೇ ರಾಜ್ಯವು ತನ್ನ ರಾಜ್ಯದಲ್ಲೇ ಉತ್ಪನ್ನವಾದ ವಸ್ತುಗಳ ಮೇಲೆ ವಿಧಿಸುವಷ್ಟೇ ಸುಂಕವನ್ನು ವಿಧಿಸುವುದಕ್ಕೆ ಯಾವುದೇ ನಿರ್ಬಂಧವನ್ನು ವಿಧಿಸುವುದಿಲ್ಲ"

"ಒಳಪಟ್ಟಿದೆ" ಎಂಬ ಪದದ ನಂತರ "ಮತ್ತು ತಾರತಮ್ಯರಹಿತವಾದ ನಿಬಂಧನೆಗಳು ಮತ್ತು ಷರತ್ತುಗಳ ಅಡಿಯಲ್ಲಿ" ಎಂಬ ಪದಗಳನ್ನು ಸೇರಿಸತಕ್ಕದ್ದು.

ಹೊರ ರಾಜ್ಯಗಳಿಂದ ಆಮದು ಮಾಡಿಕೊಳ್ಳುವ ಪದಾರ್ಥಗಳ ಮೇಲೆ ಕೆಲಮಟ್ಟಿನ ಸುಂಕವನ್ನು ವಿಧಿಸಿ, ಅವುಗಳ ಬೆಲೆಯನ್ನು ತಮ್ಮಲ್ಲಿಯೇ ತಯಾರಿಸಿದ ಅದೇ ಪದಾರ್ಥಗಳ ಮಟ್ಟಕ್ಕೆ ತರುವುದಕ್ಕೆ ರಾಜ್ಯಗಳಿಗೆ ಈ ಅವಕಾಶವನ್ನು ನೀಡಲಾಗುತ್ತಿದೆ. ಹೀಗೆ ಮಾಡದಿದ್ದರೆ, ಒಂದು ರಾಜ್ಯದೊಳಗೆ ಇತರ ರಾಜ್ಯಗಳಲ್ಲಿ ತಯಾರಿಸಿದ ಪದಾರ್ಥಗಳ ಪ್ರವಾಹವೇ ಹರಿದು ಬರುತ್ತದೆ. ಈ ದೃಷ್ಟಿಯಿಂದ ಮಾತ್ರ ಈ ಅನುಬಂಧವನ್ನು ಕಲ್ಪಿಸಲಾಗಿದೆ. ಆದ್ದರಿಂದ ಹೊರ ರಾಜ್ಯಗಳಿಂದ ಬರುವ ವಸ್ತುಗಳ ಮೇಲೆ ಯಾವುದೇ ರಾಜ್ಯವು ಸುಂಕವನ್ನು ವಿಧಿಸಿ ಅವುಗಳ ಬೆಲೆಯು ತನ್ನ ರಾಜ್ಯದಲ್ಲೇ ತಯಾರಾದ ವಸ್ತುಗಳ ಬೆಲೆಯ ಮಟ್ಟಕ್ಕೆ ಇಡಬಹುದಾಗಿದೆ. ಆದರೆ, ಈ ಅವಕಾಶವು ಸ್ವಯಂಪೂರ್ಣವಲ್ಲ. ಇಂತಹ ನಿಬಂಧನೆಗಳು ತಮ್ಮೊಳಗೇ ಉತ್ಪಾದಿಸಲ್ಪಟ್ಟ ವಸ್ತುಗಳಿಗೆ ಅನುಕೂಲವಾಗುವಂತೆ ರಾಜ್ಯಗಳು ಮಾಡುವ ಅವಕಾಶವನ್ನು ಕೂಡ ಒದಗಿಸಿರುವುದರಿಂದ, ರಾಜ್ಯಗಳು ತಾವು ಆಮದು ಮಾಡಿಕೊಳ್ಳುವ ವಸ್ತುಗಳ ಬೆಲೆಯು ಅತಿಯಾಗುವಂತೆ ಮಾಡುವುದನ್ನು ತಡೆಯಲು, "ತಾರತಮ್ಯರಹಿತವಾದ ನಿಬಂಧನೆಗಳ ಮತ್ತು ಷರತ್ತುಗಳ ಅಡಿಯಲ್ಲಿ" ಎಂಬ

ಪದಗಳನ್ನು ಸೇರಿಸಬೇಕಾಯಿತು. ಅಂದರೆ, ಯಾವುದೇ ರಾಜ್ಯವು ತನ್ನಲ್ಲಿ ತಯಾರಾದ ಮತ್ತು ತಾನು ಇತರ ರಾಜ್ಯಗಳಿಂದ ಆಮದು ಮಾಡಿಕೊಂಡ ವಸ್ತುಗಳ ನಡುವೆ ಬೆಲೆಯ ತಾರತಮ್ಯ ಉಂಟು ಮಾಡುವ ನಿಬಂಧನೆಗಳನ್ನು ಮಾಡಬಾರದು ಎಂಬುದು ಇಲ್ಲಿ ಗಮನಿಸಬೇಕಾದ ಅಂಶ.

**ಅಡಿ ಟಿಪ್ಪಣಿ:**

*೧೦. ಕಾನೂನಿನ ನಿಯಂತ್ರಣಕ್ಕೆ ಒಳಪಟ್ಟಂತೆ, ರಾಜ್ಯಗಳ ನಡುವಿನ ವ್ಯಾಪಾರ, ವಹಿವಾಟು ಹಾಗೂ ಜನರ ನಡುವಿನ ವಹಿವಾಟು ಮುಕ್ತವಾಗಿರಬೇಕು:

ಸಾರ್ವಜನಿಕ ವ್ಯವಸ್ಥೆ, ಸದಾಚಾರ ಹಾಗೂ ಆರೋಗ್ಯ ಅಥವಾ ತುರ್ತುಸ್ಥಿತಿಯಲ್ಲಿ ರಾಜ್ಯಗಳು ಕಾನೂನಿನ ಮೂಲಕ ನಿರ್ಬಂಧ ಹೇರಬಹುದು:

ತನ್ನ ರಾಜ್ಯದಲ್ಲಿ ಉತ್ಪಾದನೆಯಾದ ಸರಕುಗಳ ಮೇಲೆ ಹೇರಲಾಗುವ ಸುಂಕವನ್ನು ಬೇರೆ ರಾಜ್ಯದಿಂದ ಬಂದ ಉತ್ಪನ್ನಗಳ ಮೇಲೆಯೂ ಹೇರಬಹುದು:

ವಾಣಿಜ್ಯ ಆದಾಯಕ್ಕೆ ಸಂಬಂಧಪಟ್ಟಂತೆ ಯಾವುದೇ ರಾಜ್ಯವೂ ತನ್ನಲ್ಲಿನ ಉತ್ಪಾದನೆಗಳಿಗೆ ಹೊರ ರಾಜ್ಯಗಳಿಗಿಂತ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡುವಂತಿಲ್ಲ, ತಾರತಮ್ಯ ಕೂಡದು.

**ಶ್ರೀ ಕೆ. ಸಂತಾನಂ** (ಮದ್ರಾಸ್ : ಸಾಮಾನ್ಯ) : ಮಾನ್ಯರೆ, ನಾನು ತಿದ್ದುಪಡಿಯೊಂದಕ್ಕೆ ಸೂಚನೆಯನ್ನು ನೀಡಿದ್ದೇನೆ.

ಇದು ಶ್ರೀ ಮುನ್ಷಿಯವರು ಮಂಡಿಸಿದ ತಿದ್ದುಪಡಿಯನ್ನೇ ಹೆಚ್ಚು ಕಡಿಮೆ ಹೋಲುತ್ತದೆ. ಆದರೆ, ನನ್ನ ಅಭಿಪ್ರಾಯದಲ್ಲಿ ಶ್ರೀ ಮುನ್ಷಿಯವರು ಮಂಡಿಸಿರುವ ತಿದ್ದುಪಡಿಯು ಈ ಚೌಕಟ್ಟಿಗೆ ಸರಿಹೊಂದುವುದಿಲ್ಲ. ಏಕೆಂದರೆ, ನಾನು ಸೂಚಿಸಿರುವ ತಿದ್ದುಪಡಿಯಲ್ಲಿನ ಅಂಶವು ಹೀಗೆ ಹೇಳುತ್ತದೆ: "ಒಂದು ರಾಜ್ಯವು ತನ್ನ ಎಲ್ಲೆಯಲ್ಲಿ ಉತ್ಪಾದನೆಯಾದ ಸುಂಕವನ್ನು ವಿಧಿಸುವ ಜೊತೆಗೆ ಕೆಲವು ನಿಬಂಧನೆಗಳನ್ನು ವಿಧಿಸುವಂತೆಯೇ, ಇತರ ರಾಜ್ಯಗಳಿಂದ ಆಮದಾಗಿ ಬರುವ ವಸ್ತುಗಳೂ ಈ ನಿಯಮಗಳಿಗೆ ಒಳಪಟ್ಟಿರಬೇಕೆಂಬ ನಿಯಮವನ್ನು ವಿಧಿಸಲೂ ಆ ರಾಜ್ಯಕ್ಕೆ ಅವಕಾಶ ಇರಬೇಕು. ಉದಾಹರಣೆಗೆ, ತನ್ನ ರಾಜ್ಯದ ಒಳಗೆ ಉತ್ಪಾದಿಸಲ್ಪಡುವ ವಸ್ತುಗಳ ಪ್ಯಾಕಿಂಗ್, ಲೇಬಲಿಂಗ್, ವಸ್ತುಗಳ ವಿವರಗಳ ಪ್ರದರ್ಶನ ಮೊದಲಾದವನ್ನು ಕುರಿತಂತೆ ಆ ರಾಜ್ಯವು ಕೆಲವೊಂದು ನಿಯಮಗಳನ್ನು ವಿಧಿಸಬಹುದು. ಬೇರೆ ರಾಜ್ಯಗಳಿಂದ ಆಮದು ಮಾಡಿಕೊಳ್ಳುವ ವಸ್ತುಗಳೂ ಈ ವಿಷಯಗಳನ್ನು ಕುರಿತ ಆ ರಾಜ್ಯದ ನಿಯಮಗಳಿಗೆ ಒಳಪಟ್ಟಿರಬೇಕು. ಇಲ್ಲದಿದ್ದರೆ, ಸ್ಥಳೀಯ ಪದಾರ್ಥಗಳಿಗಿಂತ ಹೊರಗಿನಿಂದ ಬಂದ ಪದಾರ್ಥಗಳೇ ರಾಜ್ಯದ ಮಾರುಕಟ್ಟೆಯಲ್ಲಿ ಅನುಕೂಲ ಪರಿಸ್ಥಿತಿಯನ್ನು ಹೊಂದಿರುತ್ತದೆ. ಸ್ಥಳೀಯವಾಗಿ ತಯಾರಾದ ವಸ್ತುಗಳು ಮತ್ತು ಹೊರಗಿನ ವಸ್ತುಗಳ ನಡುವೆ ತಾರತಮ್ಯರಹಿತವಾದ ನಿಬಂಧನೆಗಳನ್ನು ಹೊಂದಿರಬೇಕು ಎಂದು ಶ್ರೀ ಮುನ್ಷಿಯವರ ತಿದ್ದುಪಡಿ ಹೇಳುತ್ತದೆ. ಆದರೆ, ಹೊರ ರಾಜ್ಯಗಳ ವಸ್ತುಗಳ ಮೇಲೆ ಈ ನಿಬಂಧನೆಗಳನ್ನು ವಿಧಿಸುವ ಹಕ್ಕು ರಾಜ್ಯಗಳಿಗೆ ಇದೆ ಎಂದು ಹೇಳುವುದಿಲ್ಲ. ಆದ್ದರಿಂದ, ಅವರ ತಿದ್ದುಪಡಿಯನ್ನು ಈ ಚೌಕಟ್ಟಿಗೆ ಹೊಂದಿಕೊಳ್ಳುವಂತೆ ಮಾಡಲು ಅದನ್ನು ಸೂಕ್ತವಾಗಿ ಮಾರ್ಪಡಿಸಬೇಕು. ಅಥವಾ, ಹತ್ತನೇ ಖಂಡದ ೨ನೇ ನಿಬಂಧನೆಯಲ್ಲಿರುವ "ಅಷ್ಟೇ ಸುಂಕವನ್ನು ಮತ್ತು ತೆರಿಗೆಗಳು' ಎಂಬ ಪದಗಳ ಬದಲಿಗೆ ನನ್ನ ತಿದ್ದುಪಡಿಯಲ್ಲಿರುವ "ಅದೇ ನಿಬಂಧನೆಗಳು, ಸುಂಕ ಹಾಗೂ ತೆರಿಗೆಗಳು' ಎಂಬ ಪದಗಳನ್ನು ಆದೇಶಿಸಿಕೊಳ್ಳಬೇಕು. ತನ್ನ ರಾಜ್ಯಗಳ ಒಳಗೆ ತಯಾರಾದ ವಸ್ತುಗಳ ಮೇಲೆ ರಾಜ್ಯವು ವಿಧಿಸಬಹುದಾದ ನಿಬಂಧನೆಗಳನ್ನು ಹೊರ ರಾಜ್ಯಗಳಿಂದ ಆಮದು ಮಾಡಿಕೊಳ್ಳುವ ಅದೇ ವಸ್ತುಗಳ ಮೇಲೆಯೂ ರಾಜ್ಯ ವಿಧಿಸಬಹುದು ಎಂದು ಹೇಳುವ ಯಾವುದೇ ತಿದ್ದುಪಡಿಯನ್ನು ನಾನು ಒಪ್ಪಿಕೊಳ್ಳಲು ಸಿದ್ಧನಿದ್ದೇನೆ. ಈ ಹಿನ್ನೆಲೆಯಲ್ಲಿ ನಾನು ಈ ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ.

**ಪ್ರೊ. ಕೆ.ಟಿ. ಷಾ** (ಬಾಂಬೆ : ಸಾಮಾನ್ಯ) : ನಾನು ನನ್ನ ಹೆಸರಿನಲ್ಲಿನ ತಿದ್ದುಪಡಿಯನ್ನು ಮಂಡಿಸುತ್ತಿಲ್ಲ.

ಮಾನ್ಯ ಸಭಾಧ್ಯಕ್ಷರು : ನಮ್ಮ ಮುಂದೆ ಶ್ರೀ ಸಂತಾನಂ ಹಾಗೂ ಶ್ರೀ ಮುನ್ಷಿ ಅವರು ಮಂಡಿಸಿದ ಎರಡು ತಿದ್ದುಪಡಿಗಳಿವೆ.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯ್ ಪಟೇಲ್** : ಒಂದು ವಿಷಯದ ಬಗ್ಗೆ ಗಮನ ಸೆಳೆಯುತ್ತಿದ್ದೇನೆ. ವರದಿಯ ೫ನೇ ಪ್ಯಾರಾದಲ್ಲಿ ರಾಜ್ಯಗಳಲ್ಲಿರುವ ಬೇರೆ ಬೇರೆಯ ಸ್ಥಿತಿಗೆ ಅನುಗುಣವಾಗಿ ಅನುಬಂಧಗಳನ್ನು ರೂಪಿಸಬೇಕು ಎಂದು ಉಲ್ಲೇಖಿಸಲಾಗಿದೆ. ಪ್ಯಾರಾ ೫ರಲ್ಲಿ ಹೀಗಿದೆ;

'ರಾಜ್ಯಗಳಿಗೆ ಇರುವ ಹಕ್ಕುಗಳ ಸಂದರ್ಭದಲ್ಲಿ ಸುಂಕಗಳನ್ನು ವಿಧಿಸಲು ತಮ್ಮಲ್ಲಿರುವ ನಿಯಮಗಳನ್ನು ರದ್ದು ಪಡಿಸಲು ಹಾಗೂ ಮುಕ್ತ ವಾಣಿಜ್ಯ ವ್ಯವಹಾರವನ್ನು ಒಕ್ಕೂಟದ ಒಳಗೆ ಜಾರಿಗೆ ತರಲು ಅನುಕೂಲವನ್ನು ಮಾಡಿಕೊಡುವುದಕ್ಕಾಗಿ ಅವುಗಳಿಗೆ ಸಂವಿಧಾನದಲ್ಲಿ ಸೂಚಿಸಬಹುದಾಗಿರುವ ಅಗತ್ಯವಾದ ಗರಿಷ್ಠ ಸಮಯವನ್ನು ನೀಡುವ ಉದ್ದೇಶದ ದೃಷ್ಟಿಯಿಂದ, ಅವುಗಳೊಂದಿಗೆ ಒಕ್ಕೂಟವು ಒಂದು ಒಪ್ಪಂದವನ್ನು ಮಾಡಿಕೊಳ್ಳತಕ್ಕದ್ದು'.

ಶ್ರೀ ಸಂತಾನಂ ಅದು ಮಂಡಿಸಿರುವ ತಿದ್ದುಪಡಿಗೆ ಸಂಬಂಧಿಸಿದಂತೆ ಶ್ರೀ ಮುನ್ಷಿ ಅವರ ತಿದ್ದುಪಡಿಗೆ ನಾನು ಸಮ್ಮತಿಸಲಿದ್ದು, ಅದು ತಾರತಮ್ಯಕ್ಕೆ ಅವಕಾಶ ಮಾಡಿಕೊಡುವುದಿಲ್ಲ. ಈ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚೆ ಅಗತ್ಯವಿಲ್ಲ ಎಂದು ಭಾವಿಸಿದ್ದೇನೆ. ಹೀಗಾಗಿ, ಖಂಡವನ್ನು ಸದನದ ಅಂಗೀಕಾರಕ್ಕಾಗಿ ಮಂಡಿಸುತ್ತಿದ್ದೇನೆ.

೩ನೇ ಅನುಬಂಧದಲ್ಲಿ ಒಂದು ಸಣ್ಣ ತಪ್ಪು ಇದೆ. 'ರಾಜ್ಯವೊಂದರಿಂದ' ಎಂಬ ಪದ ಅನಗತ್ಯ. ಖಂಡ ಹೀಗಿರಲಿದೆ;

'ಆದರೆ, ವಾಣಿಜ್ಯ ಇಲ್ಲವೇ ಕಂದಾಯಕ್ಕೆ ಸಂಬಂಧಿಸಿದಂತೆ ರಾಜ್ಯ ರಾಜ್ಯಗಳ ನಡುವೆ ತಾರತಮ್ಯವನ್ನುಂಟು ಮಾಡಿ, ಒಂದು ರಾಜ್ಯಕ್ಕೆ ಪ್ರಾಶಸ್ತ್ಯ ನೀಡುವಂತಿಲ್ಲ'.

ಮಾನ್ಯ ಸಭಾಧ್ಯಕ್ಷರು: ನಾನು ಈ ಖಂಡವನ್ನು ಮತಕ್ಕೆ ಹಾಕುತ್ತಿದ್ದೇನೆ.

ಕಾನೂನಿನ ನಿಯಂತ್ರಣಕ್ಕೆ ಒಳಪಟ್ಟು ರಾಜ್ಯಗಳು ಹಾಗೂ ಜನಗಳ ನಡುವಿನ ವ್ಯಾಪಾರ, ವಹಿವಾಟು ಮುಕ್ತವಾಗಿರಲಿದೆ.'

ಈ ಖಂಡಕ್ಕೆ ಯಾವುದೇ ತಿದ್ದುಪಡಿ ಇರುವುದಿಲ್ಲ.

ಈ ಖಂಡವನ್ನು ಅಂಗೀಕರಿಸಲಾಗಿದೆ.

**ಮಾನ್ಯ ಸಭಾಧ್ಯಕ್ಷರು** : ಮೊದಲ ಅನುಬಂಧ: ಸಾರ್ವಜನಿಕ ವ್ಯವಸ್ಥೆ, ಸದಾಚಾರ ಹಾಗೂ ಆರೋಗ್ಯ ಅಥವಾ ತುರ್ತುಸ್ಥಿತಿಯಲ್ಲಿ ಯಾವುದೇ ರಾಜ್ಯವು ಕಾನೂನಿನ ಮೂಲಕ ನಿರ್ಬಂಧಗಳನ್ನು ಹೇರಬಹುದು.

ಮಂಡನೆಯಾದ ಅನುಬಂಧದಲ್ಲಿ 'ವಿವೇಚನಾಯುಕ್ತ' ಎಂಬ ಪದವನ್ನು ಕೈ ಬಿಡಲಾಗಿದೆ.

ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ೨ನೇ ಅನುಬಂಧ:

"ತನ್ನ ರಾಜ್ಯದಲ್ಲಿ ಉತ್ಪಾದನೆಯಾದ ಸರಕುಗಳ ಮೇಲೆ ಹೇರುವ ಶುಲ್ಕಗಳನ್ನು ಮತ್ತು ತೆರಿಗೆಗಳನ್ನು ಬೇರೆ ರಾಜ್ಯದ ಸರಕುಗಳ ಮೇಲೆಯೂ ಹೇರುವುದಕ್ಕೆ ಯಾವ ನಿರ್ಬಂಧವೂ ಇರುವುದಿಲ್ಲ," ಅವರು ಮೊದಲು 'ನಿಯಂತ್ರಣ' ಎಂಬ ಪದ ಬಳಸಿದ್ದರು. ಅದರ ಬದಲಿಗೆ 'ನಿರ್ಬಂಧ' ಎಂಬ ಪದವನ್ನು ಉಪಯೋಗಿಸಿದ್ದಾರೆ.

ಶ್ರೀ ಮುನ್ಷಿಯವರ ತಿದ್ದುಪಡಿ ಹೀಗಿದೆ:

'ಅಲ್ಲದೆ, ಯಾವುದೇ ರಾಜ್ಯವು ತನ್ನ ರಾಜ್ಯದಲ್ಲಿ ಉತ್ಪಾದಿಸಲಾಗುವ ವಸ್ತುಗಳ ಮೇಲೆ ವಿಧಿಸುವ ಸುಂಕ, ತೆರಿಗೆಗಳನ್ನು ಹಾಗೂ ನಿರ್ಬಂಧ ನಿಯಮಗಳನ್ನು ಯಾವ ತಾರತಮ್ಯವೂ ಇಲ್ಲದೆ ಹೊರ ರಾಜ್ಯಗಳಿಂದ ಆಮದಾಗುವ ವಸ್ತುಗಳ ಮೇಲೆಯೂ ವಿಧಿಸಬಹುದು'.

**ಶ್ರೀ ಅನಂತಶಯನಂ ಅಯ್ಯಂಗಾರ್** (ಮದ್ರಾಸ್ : ಸಾಮಾನ್ಯ): ಇದಕ್ಕೆ 'ಅಂಥದ್ದೇ' ಎಂಬ ಪದ ಸೇರಿಸಬೇಕಿದೆ. ಇಲ್ಲವಾದಲ್ಲಿ ಇದಕ್ಕೆ ಅರ್ಥವೇ ಇರುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು** : ನನಗೆ ನಿಮ್ಮ (ಅನಂತಶಯನಂ ಅಯ್ಯಂಗಾರ್) ತಿದ್ದುಪಡಿ ಬಂದಿಲ್ಲ.

ಶ್ರೀ ಸಂತಾನಂ ಅವರ ತಿದ್ದುಪಡಿಯನ್ನು ತಿರಸ್ಕರಿಸಲಾಯಿತು.

ಶ್ರೀ ಮುನ್ಷಿಯವರ ತಿದ್ದುಪಡಿಯನ್ನು ಅಂಗೀಕೃತವಾಯಿತು.

**ಮಾನ್ಯ ಸಭಾಧ್ಯಕ್ಷರು** : ಈಗ ಮೂರನೆಯ ಅನುಬಂಧ:

"ಅಲ್ಲದೆ ಯಾವ ರಾಜ್ಯವೂ ತನ್ನ ಯಾವುದೇ ವಾಣಿಜ್ಯ ಅಥವಾ ತೆರಿಗೆ ನಿಯಮದ ಮೂಲಕ ರಾಜ್ಯ ರಾಜ್ಯಗಳ ನಡುವೆ ತಾರತಮ್ಯವನ್ನು ಮಾಡತಕ್ಕದ್ದಲ್ಲ'

ಇದಕ್ಕೆ ಬರವಣಿಗೆಗೆ ಸಂಬಂಧಿಸಿದ ಒಂದು ತಿದ್ದುಪಡಿಯಿದೆ. ಅದರ ಪ್ರಕಾರ, 'ಯಾವುದೇ ರಾಜ್ಯವೂ' ಎಂಬ ಪದ ಅನಗತ್ಯವಾಗಿದ್ದು, ಅದನ್ನು ಕೈ ಬಿಡಬೇಕು. ಹಾಗೆ ಮಾಡಿದರೆ, ಅನುಬಂಧವು ಹೀಗಿರಲಿದೆ.

"ಅಲ್ಲದೆ, ಯಾವುದೇ ವಾಣಿಜ್ಯ ಅಥವಾ ತೆರಿಗೆಯ ನಿಯಮದ ಮೂಲಕ ರಾಜ್ಯ ರಾಜ್ಯಗಳ ನಡುವೆ ತಾರತಮ್ಯವನ್ನು ಮಾಡತಕ್ಕದ್ದಲ್ಲ,'.

ತಿದ್ದುಪಡಿಯಾದ ಅನುಬಂಧವು ಮತಕ್ಕೆ ಹಾಕಲ್ಪಟ್ಟಿತು.

ತಿದ್ದುಪಡಿ ಮಾಡಲ್ಪಟ್ಟ ಅನುಬಂಧವು ಅಂಗೀಕೃತವಾಯಿತು.

**ಮಾನ್ಯ ಸಭಾಧ್ಯಕ್ಷರು:**

ತಿದ್ದುಪಡಿಯಾದ ಇಡೀ ಖಂಡವನ್ನು ಮತಕ್ಕೆ ಹಾಕುತ್ತಿದ್ದೇನೆ. ಶ್ರೀ ರಾಜಗೋಪಾಲಾಚಾರಿಯರ್ ಅವರು ಅನುಕ್ರಮಣಿಕೆಯನ್ನು ಬದಲಿಸಿ, ಮೊದಲ ಎರಡು ಅನುಬಂಧಗಳು ಕೊನೆಯಲ್ಲಿ ಬರಬೇಕು ಎಂದು ಸೂಚಿಸಿದ್ದಾರೆ.ಮೊದಲನೆಯದು ಕೊನೆಗೆ ಬರಬೇಕು, ಇನ್ನೊಂದು ಬದಲಾಗಬೇಕು ಎಂದು ಸಲಹೆ ನೀಡಿದ್ದಾರೆ.

**ಮಾನ್ಯ ಶ್ರೀ ರಾಜಗೋಪಾಲಾಚಾರಿಯರ್** (ಮದ್ರಾಸ್ : ಸಾಮಾನ್ಯ) : ಇದಕ್ಕೆ ಕಾರಣ ಹೀಗಿದೆ. ಸಾರ್ವಜನಿಕ ಆರೋಗ್ಯಕ್ಕೆ ಸಂಬಂಧಿಸಿದಂತೆ ವಿಧಿಸಲಾಗುವ ನಿರ್ಬಂಧಗಳು ರಾಜ್ಯದಿಂದ ರಾಜ್ಯಕ್ಕೆ ಬೇರೆ ಇರುತ್ತವೆ. ತಾರತಮ್ಯದ ನಿರ್ಬಂಧ ಕೂಡದು ಎಂದಾದಲ್ಲಿ, ಸೋಂಕು ರೋಗವೊಂದು ಪತ್ತೆಯಾಗಿರುವ ಒಂದು ರಾಜ್ಯದ ಮೇಲೆ ಹೇರಬೇಕಾಗಿರುವ ನಿರ್ಬಂಧವನ್ನು ಎಲ್ಲ ರಾಜ್ಯಗಳ ಮೇಲೆಯೂ ಹೇರಬೇಕಾಗುತ್ತದೆ. ಹೀಗಾಗಿ, ಈ ಅನುಬಂಧವನ್ನು ಮೊದಲಿಗೆ ಸೇರಿಸುವ ಬದಲು ಕೊನೆಗೆ ಸೇರ್ಪಡೆ ಗೊಳಿಸುವುದು ಸೂಕ್ತ.

**ಮಾನ್ಯ ಸಭಾಧ್ಯಕ್ಷರು** : ಇಡೀ ಖಂಡವನ್ನು ಅನುಕ್ರಮಣಿಕೆಯನ್ನು ಬದಲಿಸಿ ಮಂಡಿಸುತ್ತಿದ್ದೇನೆ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ** (ಮದ್ರಾಸ್ : ಸಾಮಾನ್ಯ) : 'ಇದಲ್ಲದೆ' ಎಂಬ ಪದ ಸೇರ್ಪಡೆಗೊಳಿಸಬೇಕು.

**ಮಾನ್ಯ ಸಭಾಧ್ಯಕ್ಷರು** : ಮೊದಲ ತಿದ್ದುಪಡಿಗೆ 'ಇದಲ್ಲದೆ' ಸೇರಿಸತಕ್ಕದ್ದು. ಈಗ ಮೂರನೆಯ ಅನುಬಂಧ ಆಗತಕ್ಕದ್ದು.

ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಶ್ರೀ ಕೆ.ಎಂ. ಮುನ್ಷಿ** : ಇದು ಅದಲುಬದಲು ಅಷ್ಟೆ. ಈ ಬಗ್ಗೆ ವಾದಿಸಲು ಇಚ್ಛಿಸುವುದಿಲ್ಲ. ಕರಡನ್ನು ಸಿದ್ಧಗೊಳಿಸುವಾಗ ಇದನ್ನು ಸರಿಮಾಡೋಣ.

**ಮಾನ್ಯ ಸಭಾಧ್ಯಕ್ಷರು** : ಸದನದಲ್ಲಿ ತಿದ್ದುಪಡಿಗೊಂಡ ಖಂಡವನ್ನು ಮತಕ್ಕೆ ಹಾಕುತ್ತಿದ್ದೇನೆ.

ತಿದ್ದುಪಡಿ ಮಾಡಲ್ಪಟ್ಟ ಖಂಡವು ಅಂಗೀಕೃತವಾಯಿತು.

ಖಂಡ ೧೧–ಸ್ವಾತಂತ್ರ್ಯದ ಹಕ್ಕುಗಳು

**ಗೌರವಾನ್ವಿತ ಸರ್ದಾರ್ ವಲ್ಲಭಭಾಯ್ ಪಟೇಲ್ :** ೧೧ನೇ ಖಂಡ ಬಲವಂತದ ಕೆಲಸಕ್ಕೆ ಸಂಬಂಧಿಸಿದ್ದು, ಅದು ಹೀಗಿದೆ:

"೧೧ ಎ. ಮನುಷ್ಯರ ಕಳ್ಳಸಾಗಣೆ, ಮತ್ತು

ಬಿ. ನ್ಯಾಯಿಕ ಕ್ರಮದ ಅಡಿಯಲ್ಲಿ ಅಪರಾಧಿಯೆಂದು ತೀರ್ಮಾನವಾಗಿರುವ ಪ್ರಕರಣಗಳನ್ನು ಹೊರತುಪಡಿಸಿ, ಒತ್ತಾಯದಿಂದ ದುಡಿಯುವವರನ್ನು ಹಾಗೂ ಅನೌಪಚಾರಿಕ ರೀತಿಯಲ್ಲಿ ದಾಸ್ಯ ಪದ್ಧತಿಯ ಅಡಿಯಲ್ಲಿ ದುಡಿಯುವವರನ್ನೂ ಒಳಗೊಂಡಂತೆ ಯಾರಿಂದಲೂ, ಯಾವುದೇ ರೀತಿಯಲ್ಲಿಯೂ ಬಲವಂತವಾಗಿ ದುಡಿಸಿಕೊಳ್ಳುವುದನ್ನು ನಿಷೇಧಿಸಲಾಗಿದೆ ಹಾಗೂ ಈ ನಿಷೇಧದ ಉಲ್ಲಂಘನೆ ಅಪರಾಧವಾಗುತ್ತದೆ.

ವಿವರಣೆ:

"ಆದರೆ, ಸರ್ಕಾರವು ಜನಾಂಗ, ಜಾತಿ, ಧರ್ಮ ಹಾಗೂ ವರ್ಗಗಳ ಆಧಾರದ ಮೇಲೆ ತಾರತಮ್ಯವನ್ನು ಮಾಡದೆ ಸಾರ್ವಜನಿಕ ಉದ್ದೇಶಕ್ಕಾಗಿ ಕಡ್ಡಾಯವಾಗಿ ಜನರಿಂದ ದುಡಿಸಿಕೊಳ್ಳುವುದನ್ನು ಈ ಉಪ ಖಂಡವು ಯಾವುದೇ ನಿರ್ಬಂಧವನ್ನು ಹೇರುವುದಿಲ್ಲ"

ನಾವು ಈ ಬಗ್ಗೆ ಚರ್ಚಿಸಿ, ಇದನ್ನು ಅಡಕಗೊಳಿಸಿ, ಈ ಎಲ್ಲವನ್ನೂ ಒಳಗೊಳ್ಳುವ 'ಮಾನವ ಕಳ್ಳಸಾಗಣೆ' ಎಂಬ ಶೀರ್ಷಿಕೆಯಡಿ ಒಂದೇ ಖಂಡವನ್ನು ರಚಿಸಬೇಕು.

**ಮಾನ್ಯ ಸಭಾಧ್ಯಕ್ಷರು :** ಸಂಬಂಧಿಸಿದ ತಿದ್ದುಪಡಿಯನ್ನು ಸದಸ್ಯರಿಗೆ ವಿತರಿಸಿಲ್ಲ, ಅವರಿಗೆ ಯಾವ ಬದಲಾವಣೆ ಸೂಚಿಸಲಾಗಿದೆ ಎಂಬ ಅರಿವಿಲ್ಲ. ಮೊದಲು ಖಂಡವನ್ನು ಮಂಡಿಸಿ, ನಂತರ ತಿದ್ದುಪಡಿಯನ್ನು ಮಂಡಿಸಬೇಕು ಎಂದು ಮನವಿ ಮಾಡುತ್ತೇನೆ.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯ್ ಪಟೇಲ್ :** ನಾನು ಖಂಡವನ್ನು ಮಂಡಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಈ ಖಂಡಕ್ಕೆ ತಿದ್ದುಪಡಿಗಳ ಸೂಚನೆಗಳು ನನಗೆ ಬಂದಿವೆ. ಶ್ರೀ ಮುನ್ಷಿಯವರ ತಿದ್ದುಪಡಿಯನ್ನು ಸದಸ್ಯರಿಗೆ ಇನ್ನೂ ವಿತರಿಸಿಲ್ಲ. ನನ್ನ ಕೈಗೆ ಈ ತಿದ್ದುಪಡಿಯು ಒಂದೆರಡು ನಿಮಿಷಗಳ ಹಿಂದೆ ಸೇರಿತು. ಆದರೂ, ನಾವು ನಮ್ಮ ಕೆಲಸವನ್ನು ಮುಂದುವರಿಸಬಹುದು. ನಾನು ಮೊದಲು ಇತರ ತಿದ್ದುಪಡಿಗಳನ್ನು ಕೈಗೆತ್ತಿಕೊಳ್ಳುತ್ತೇನೆ.

**ಶ್ರೀ ಎಂ.ಆರ್. ಮಸಾನಿ** (ಬಾಂಬೆ : ಸಾಮಾನ್ಯ) : ಶ್ರೀ ಮುನ್ಷಿಯವರು ತಿದ್ದುಪಡಿಯನ್ನು ಮಂಡಿಸುವ ಮೊದಲು ಉಳಿದ ತಿದ್ದುಪಡಿಗಳನ್ನು ಮಂಡಿಸಬಹುದೇ ಎಂಬುದನ್ನು ನಿರ್ಧರಿಸುವುದು ಕಷ್ಟ. ಒಪ್ಪಿತವಾದ ತಿದ್ದುಪಡಿಗಳನ್ನು ಮಂಡಿಸೋಣ ಎಂಬುದು ನನ್ನ ಅಭಿಪ್ರಾಯ.

**ಮಾನ್ಯ ಸಭಾಧ್ಯಕ್ಷರು :** ಒಪ್ಪಿತವಾದ ತಿದ್ದುಪಡಿಗಳು ನನ್ನ ಅರಿವಿಗೆ ಬಂದಿಲ್ಲ.

**ಶ್ರೀ ಕೆ.ಎಂ. ಮುನ್ಷಿ :** ಮಾನ್ಯ ಸಭಾಧ್ಯಕ್ಷರೇ, ನಾನು ತಿದ್ದುಪಡಿಯನ್ನು ಮಂಡಿಸಲಿದ್ದೇನೆ:

"ಖಂಡ ೨ನ್ನು ಕೆಳಗಿನದರಿಂದ ಬದಲಿಸಲಾಗಿದೆ.

"ಮಾನವ ಕಳ್ಳ ಸಾಗಣೆ ಹಾಗೂ ಬೇಗಾರ್ ಸೇರಿದಂತೆ, ಎಲ್ಲ ರೀತಿಯ ಬಲವಂತವಾಗಿ ಕೆಲಸ ಮಾಡಿಸುವುದನ್ನು ನಿಷೇಧಿಸಲಾಗಿದೆ ಹಾಗೂ ನಿಷೇಧದ ಉಲ್ಲಂಘನೆ ಅಪರಾಧವಾಗುತ್ತದೆ'.

ಎರಡೂ ವಿಷಯವನ್ನೂ ಒಂದೇ ವಾಕ್ಯದಲ್ಲಿ ಸೇರ್ಪಡೆಗೊಳಿಸುವುದು ಇದರ ಉದ್ದೇಶ.

ಇಡೀ ವಾಕ್ಯವನ್ನು ಕಿರಿದುಗೊಳಿಸಿರುವುದರಿಂದ, ವಿವರಣೆಯನ್ನು ಕೈ ಬಿಡಲಾಗಿದೆ.

"ಬೇಗಾರ್ ಸೇರಿದಂತೆ ಎಲ್ಲ ರೀತಿಯ ಬಲವಂತವಾಗಿ ಕೆಲಸ ಮಾಡಿಸುವುದನ್ನು ನಿಷೇಧಿಸಲಾಗುತ್ತದೆ. ಮಾನವ ಕಳ್ಳ ಸಾಗಣೆಯನ್ನು ನಿಷೇಧಿಸಲಾಗುತ್ತದೆ. ಆದರೆ, ಬೇರೆ ರೀತಿಯ ಕೆಲಸ, ಉದಾಹರಣೆಗೆ, ಶೈಕ್ಷಣಿಕ ಉದ್ದೇಶಕ್ಕಾಗಿ ಇಲ್ಲವೇ ಸಾರ್ವಜನಿಕ ಸೇವೆಗೆ ಸಂಬಂಧಿಸಿದ ಕೆಲಸವನ್ನು ಶಾಸನದ ಮೂಲಕ

ನಿಯಂತ್ರಿಸಲಾಗುತ್ತದೆ'.

**ಶ್ರೀ ಪಿ.ಆರ್. ಠಾಕೂರ್** (ಬಂಗಾಳ : ಸಾಮಾನ್ಯ) : ಬೇಗಾರ್ ಎಂಬ ಪದ ಓರೆ ಅಕ್ಷರದಲ್ಲಿ ಇರಬೇಕು.

**ಮಾನ್ಯ ಸಭಾಧ್ಯಕ್ಷರು** : ತಿದ್ದುಪಡಿ ಅಂಗೀಕಾರವಾದಲ್ಲಿ, ಖಂಡ ಇಂತಿರಲಿದೆ;

"ಮಾನವ ಕಳ್ಳ ಸಾಗಣೆ ಹಾಗೂ ಬೇಗಾರ್ ಸೇರಿದಂತೆ, ಎಲ್ಲ ರೀತಿಯ ಬಲವಂತದ ಕೆಲಸ ಮಾಡಿಸುವುದನ್ನು ನಿಷೇಧಿಸಲಾಗಿದೆ ಹಾಗೂ ನಿಷೇಧದ ಉಲ್ಲಂಘನೆ ಅಪರಾಧವಾಗುತ್ತದೆ".

ಉಪ ಖಂಡ(ಬಿ)ಯನ್ನು ಬಿಡಲಾಗಿದೆ. ಇದ್ದರಿಂದ ಖಂಡವು ಕಿರಿದಾಗಿ, ಸಮಗ್ರವಾಗಿರಲಿದೆ.

ಈ ಖಂಡದ ತಿದ್ದುಪಡಿಗಾಗಿ ಹಲವು ಸೂಚನೆ ಬಂದಿವೆ. ಒಂದಾದ ನಂತರ ಒಂದನ್ನು ಪರಿಗಣಿಸಲಾಗುತ್ತದೆ.

**ಗೌರವಾನ್ವಿತ ಜಗಜೀವನ ರಾಮ್** (ಬಿಹಾರ್ : ಸಾಮಾನ್ಯ) : ಪೂರಕ ಪಟ್ಟಿ ೨ರ ೨೭ ಮತ್ತು ೨೮ನೇ ತಿದ್ದುಪಡಿಗಳನ್ನು ನಾನು ಮಂಡಿಸುವುದಿಲ್ಲ.

**ಶ್ರೀ ಎಚ್.ವಿ. ಕಾಮತ್** (ಸಿಪಿ ಮತ್ತು ಬೇರಾರ್ : ಸಾಮಾನ್ಯ) : ಶ್ರೀ ಮುನ್ಷಿಯವರ ತಿದ್ದುಪಡಿಯನ್ನು ಸಭೆ ಅಂಗೀಕರಿಸಿದರೆ, ನನ್ನ ತಿದ್ದುಪಡಿಯನ್ನು ಮಂಡಿಸುವ ಅಗತ್ಯವಿಲ್ಲ(ಪೂರಕ ಪಟ್ಟಿ ೨ರ ಸಂಖ್ಯೆ ೨೯). ಒಂದೊಮ್ಮೆ ಅಂಗೀಕೃತವಾಗದಿದ್ದಲ್ಲಿ, ನನ್ನ ತಿದ್ದುಪಡಿಯನ್ನು ಮಂಡಿಸುವ ಹಕ್ಕನ್ನು ಕಾಯ್ದಿರಿಸಿ ಕೊಂಡಿದ್ದೇನೆ.

**ಶ್ರೀ ಎಂ.ಆರ್. ಮಸಾನಿ** : ಮಾನ್ಯ ಸಭಾಧ್ಯಕ್ಷರೇ, ನಾನು ಪೂರಕ ಪಟ್ಟಿ ೨ರಲ್ಲಿನ ೩೦ನೇ ತಿದ್ದುಪಡಿಯನ್ನು ಮಂಡಿಸಲು ಸೂಚನೆ ನೀಡಿದ್ದೆ. ರಾಜ್ಯಕ್ಕೆ ಅಪಾರ ಅಧಿಕಾರ ಇರುವುದರಿಂದ, ಆತ್ಮಸಾಕ್ಷಿಪೂರ್ವಕವಾಗಿ ಭಿನ್ನಾಭಿಪ್ರಾಯ ಹೊಂದಿರುವವರನ್ನು ರಕ್ಷಿಸುವುದು ಇದರ ಉದ್ದೇಶ.

ಆದರೆ, ವಿವರಣೆಯನ್ನು ಕೈಬಿಟ್ಟಿರುವುದರಿಂದ ನನಗೆ ಸಂತೋಷವಾಗಿದೆ. ಅದರಿಂದಾಗಿ, ತಿದ್ದುಪಡಿಯನ್ನು ಮಂಡಿಸಬೇಕೆಂದು ಒತ್ತಾಯ ಮಾಡುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು** : ಈಗ ತಿದ್ದುಪಡಿ ಕುರಿತು ಮುಕ್ತವಾಗಿ ಚರ್ಚಿಸಬಹುದು.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್** (ಬಂಗಾಳ : ಸಾಮಾನ್ಯ): ಉಪ ಖಂಡ (ಎ) ಮತ್ತು (ಬಿ)ಯನ್ನು ಸಂಕ್ಷಿಪ್ತಗೊಳಿಸುವ ದೃಷ್ಟಿಯಿಂದ, ಪುನಾರೂಪಿಸಲು ನನ್ನ ಅಭ್ಯಂತರವಿಲ್ಲ. ಆದರೆ, ಕಡ್ಡಾಯ ಸೇವೆಯನ್ನು ಜಾರಿಗೆ ತರಲು ಹಲವು ರಾಜ್ಯಗಳಿಗೆ ಅಧಿಕಾರ ಇರಬಾರದು ಎಂಬ ಸಲಹಾ ಸಮಿತಿಯ ಬಹುತೇಕ ಸದಸ್ಯರ ಆಶಯಕ್ಕೆ ವಿವರಣೆಯನ್ನು ಕೈಬಿಡುವುದು ಪೂರಕವಾಗಿಲ್ಲ ಎಂಬುದು ನನ್ನ ಅಭಿಪ್ರಾಯ. ಶ್ರೀ ಮುನ್ಷಿ ಅವರ ಪ್ರಕಾರ ಖಂಡವನ್ನು ಪುನಾರಚಿಸಿ ವಿವರಣೆಯನ್ನು ಕೈಬಿಟ್ಟರೆ, ರಾಜ್ಯದಲ್ಲಿ ಮಿಲಿಟರಿ ಸೇವೆಯನ್ನು ಕಡ್ಡಾಯಗೊಳಿಸುವ ಅಧಿಕಾರ ರಾಜ್ಯಗಳಿಗೆ ಸಿಕ್ಕಲಿದೆ. ಉದ್ದೇಶಿತ ಬದಲಾವಣೆ ಬಗ್ಗೆ ಹೆಚ್ಚು ಚಿಂತನೆ ನಡೆಸಲು ನನಗೆ ಸಾಧ್ಯವಾಗಿಲ್ಲ. ಆದರೆ, ಇದನ್ನು ಕೈ ಬಿಟ್ಟರೆ ತದ್ವಿರುದ್ಧ ಹಾಗೂ ಗಂಭೀರ ಪರಿಣಾಮ ಉಂಟಾಗುವ ಸಾಧ್ಯತೆ ಇದೆ. ಏಕೆಂದರೆ, ಬೇಗಾರ್‌ನ್ನು ರಾಜ್ಯವೇ ಹೇರುತ್ತದೆ. ನನಗೆ ಗೊತ್ತಿರುವಂತೆ, ಕೆಲ ಉದ್ದೇಶಗಳಿಗಾಗಿ ರಾಜ್ಯವೇ ಬೇಗಾರ್‌ನ್ನು ಒತ್ತಾಯಿಸುತ್ತದೆ. ಒಂದು ವೇಳೆ ರಾಜ್ಯ ಬೇಗಾರ್‌ನ್ನು ಹೊಂದಿರಬಾರದು ಎಂದಾದಲ್ಲಿ ಕಡ್ಡಾಯ ಮಿಲಿಟರಿ ಸೇವೆ ಕೂಡಾ ಬೇಗಾರ್ ಎಂದು ಯಾರಾದರೂ ವಾದಿಸಬಹುದು. ಆದ್ದರಿಂದ, ವಿವರಣೆಯನ್ನು ಕೈಬಿಡುವ ಬಗೆಗೆ ಈ ಹಂತದಲ್ಲಿ ಸಮ್ಮತಿ ಇಲ್ಲ. ಆದರೆ, ಈ ಬಗೆಗೆ ಸಭೆಯ ಗಮನ ಸೆಳೆಯುತ್ತಿದ್ದೇನೆ. ನನ್ನ ಸಲಹೆ ಏನೆಂದರೆ, ಈ ಹಂತದಲ್ಲಿ ವಿವರಣೆಯನ್ನು ಕೈ ಬಿಡುವುದು ಬೇಡ. ರಾಜ್ಯ ಮತ್ತು ಕೇಂದ್ರದ ಸಂವಿಧಾನ ರಚನೆ ವೇಳೆ ಅದನ್ನು ಪರಿಗಣಿಸೋಣ.

**ಶ್ರೀಮತಿ ದಾಕ್ಷಾಯಿಣಿ ವೇಲಾಯುಧನ್** (ಮದ್ರಾಸ್ : ಜನರಲ್) : ಮಾನ್ಯ ಅಧ್ಯಕ್ಷರೇ, ಹಲವು ಶತಮಾನಗಳಿಂದ ಸಂಕಷ್ಟಕ್ಕೆ ಸಿಲುಕಿರುವ ಸಮುದಾಯಗಳಿಗೆ ಸಂಬಂಧಿಸಿದ ೧೧ನೇ ಖಂಡವನ್ನು ನಾನು

ಶ್ಲಾಘಿಸುತ್ತೇನೆ. ಮಾನ್ಯರೇ, ಇಂದು ಕೂಡ ದೇಶದ ಕೆಲ ಭಾಗಗಳಲ್ಲಿ ಮಾನವ ಕಳ್ಳ ಸಾಗಣೆ ನಡೆಯುತ್ತಿದ್ದು, ಈ ಖಂಡವು ತುಳಿತಕ್ಕೊಳಗಾದವರ ಮೇಲೆ ಭಾರಿ ಪರಿಣಾಮ ಬೀರಲಿದ್ದು, ಧ್ವನಿಯಿಲ್ಲದವರಿಗೆ ಧ್ವನಿಯನ್ನು ಕೊಡುತ್ತದೆ. ಈ ಖಂಡ ಸಮಾಜವಾದದ ವಿರೋಧಿ ಸಾಮಾಜಿಕ ಬಂಧ ಇರುವ ದೇಶದಲ್ಲಿ ಆರ್ಥಿಕ ಕ್ರಾಂತಿಗೆ ಕಾರಣವಾಗಲಿದೆ. ಈ ನೆಲದ ನಿರ್ಲಕ್ಷಿತ ಸಮುದಾಯದ ಅಸಾಮರ್ಥ್ಯಕ್ಕೆ ಆರ್ಥಿಕ ಹಿಂದುಳಿದಿರುವಿಕೆಯೇ ಪ್ರಮುಖ ಕಾರಣ. ಜನಸಂಖ್ಯೆಯ ಒಂದು ಭಾಗವು ತಮ್ಮ ದೈನಂದಿನ ಬದುಕಿನ ನಿರ್ವಹಣೆಗೆ ಯಾವುದೇ ಪ್ರತಿಫಲವಿಲ್ಲದೆ ದುಡಿಯುತ್ತಿರುವುದು ದುರದೃಷ್ಟಕರ. ಜಮೀನು ಇಲ್ಲವೇ ಬೇರೆ ಕಡೆ ದುಡಿಯುತ್ತಿರುವವರೇ ಹೆಚ್ಚು. ಹಗಲು ರಾತ್ರಿ ದುಡಿದರೂ, ಸಂಜೆ ಮನೆಗೆ ವಾಪಸಾಗುವಾಗ ಅವರಿಗೆ ಒಂದು ಪೈಸೆಯೂ ಸಿಗುವುದಿಲ್ಲ. ಅವರಿಗೆ ಕೂಲಿ ಕೇಳುವ ಹಕ್ಕು ಕೂಡ ಇಲ್ಲವಾಗಿದೆ. ಒಂದು ವೇಳೆ ಕರೆದಾಗ ಕೂಲಿಗೆ ಹೋಗದಿದ್ದರೆ, ಅವರಿಗೆ ಶಿಕ್ಷೆ ನೀಡಲಾಗುತ್ತದೆ. ಇದು ದೇಶದ ಕೆಲವು ಪ್ರಾಂತ್ಯಗಳಲ್ಲಿ, ಉದಾಹರಣೆಗೆ ಉತ್ತರ ಪ್ರಾಂತ್ಯದಲ್ಲಿ ಕಂಡು ಬರುವ ದೃಶ್ಯ. ದೇಶದ ಕೆಲವು ಭಾಗಗಳಲ್ಲಿ ಬೇಗಾರ್ ಪದ್ಧತಿ ಇಲ್ಲದಿದ್ದರೂ, ದೇಶದೆಲ್ಲೆಡೆ ಜೀತ ಪದ್ಧತಿ ಬೇರೊಂದು ರೂಪದಲ್ಲಿ ಚಾಲ್ತಿಯಲ್ಲಿದೆ. ಬಹುಸಂಖ್ಯಾತರು ಆರ್ಥಿಕ ಹಾಗೂ ಇನ್ನಿತರ ಶೋಷಣೆಗೆ ತುತ್ತಾಗಿದ್ದಾರೆ. ಈ ನೆಲದ ತುಳಿತಕ್ಕೊಳಗಾದವರಿಗೆ ಅವರ ಬದುಕನ್ನು ಸುಂದರಗೊಳಿಸಿಕೊಳ್ಳುವ ಯಾವುದೇ ಸೌಲಭ್ಯ ಸಿಗುತ್ತಿಲ್ಲ. ಪ್ರಾಂತ್ಯಗಳು ಸ್ವಯಂ ಆಡಳಿತ ಪಡೆಯುವ ಮುನ್ನವೇ ಈ ಪದ್ಧತಿ ತೊಲಗಬೇಕಿತ್ತು. ಕೆಲ ಪ್ರಾಂತ್ಯಗಳಲ್ಲಿ ನಿಯಮಗಳು ಮತ್ತು ನಿಯಂತ್ರಣವಿದ್ದರೂ, ಈ ವ್ಯವಸ್ಥೆ ಚಾಲ್ತಿಯಲ್ಲಿದೆ ಹಾಗೂ ಈ ವ್ಯವಸ್ಥೆಯಲ್ಲಿ ಸಿಲುಕಿದ ತಮ್ಮ ಹಣೆಬರಹವನ್ನು ನಿರ್ಧರಿಸಿಕೊಳ್ಳಲಾಗದ ಇಂಥವರಿಗೆ ಯಾವುದೇ ಧ್ವನಿ ಇಲ್ಲವಾಗಿದೆ. ಆರ್ಥಿಕ ಶೋಷಣೆಗೆ ಸಿಲುಕಿದವರಿಗೆ ಈ ಖಂಡ ಬಿಡುಗಡೆ ನೀಡಲಿದೆ. ಆರ್ಥಿಕ ಶೋಷಣೆಯನ್ನು ತೊಡೆದು ಹಾಕಿದ ಬಳಿಕ ತುಳಿತಕ್ಕೆ ಒಳಗಾದವರು ಮೇಲೆದ್ದು ತಮ್ಮ ಹಕ್ಕನ್ನು ಪ್ರತಿಪಾದಿಸುತ್ತಾರೆ, ತಮ್ಮ ಆತ್ಮಾಭಿಮಾನ, ಗೌರವವನ್ನು ಪಡೆದುಕೊಳ್ಳುತ್ತಾರೆ, ಮೇಲ್ಜಾತಿ, ಮೇಲ್ವರ್ಗದವರಂತೆ ಬದುಕಿನ ಸಂತೋಷವನ್ನು ಅನುಭವಿಸುವ ಹಕ್ಕು ಅವರಿಗೂ ಇದೆ. ಈ ಖಂಡವನ್ನು ಬೆಂಬಲಿಸಲು ನನಗೆ ಸಂತೋಷವಾಗುತ್ತಿದೆ.

**ಶ್ರೀ ಬಿ. ದಾಸ್** (ಒರಿಸ್ಸಾ : ಜನರಲ್) : ೧೧ನೇ ಖಂಡಕ್ಕೆ ಶ್ರೀ ಮುನ್ಷಿಯವರು ಸೂಚಿಸಿರುವ ತಿದ್ದುಪಡಿಯನ್ನು ನಾನು ಸಂತೋಷದಿಂದ ಬೆಂಬಲಿಸುತ್ತೇನೆ. ಖಂಡದ ಹೊಸ ಕರಡನ್ನು ಒಪ್ಪುತ್ತೇನೆ. ಮಾನ್ಯರೇ, ೧೯೨೯ರಿಂದ ಜೀತ ಕುರಿತ ಪ್ರಕರಣಗಳನ್ನು ಅಧ್ಯಯನ ಮಾಡಿದ್ದೇನೆ. ೧೯೨೯ರಲ್ಲಿ ಇದಕ್ಕೆ ಸಂಬಂಧಿಸಿದಂತೆ ಜಿನೇವಾದಲ್ಲಿ ನಡೆದ ಸಮಾವೇಶದಲ್ಲೂ ಪಾಲ್ಗೊಂಡಿದ್ದೆ. ೧೯೩೦ರಲ್ಲಿ ಜಿನೇವಾ ಒಪ್ಪಂದವನ್ನು ಭಾರತ ಅಂಗೀಕರಿಸಿದ್ದರೂ, ಕೆಲವು ರಾಜ್ಯಗಳನ್ನು ಹೊರತುಪಡಿಸಿದರೆ, ಉಳಿದವು ಅದನ್ನು ಅಂಗೀಕರಿಸಿಲ್ಲ. ಈ ಸಭೆಯಲ್ಲಿ ಪ್ರತಿನಿಧಿಗಳಿರುವ ಪ್ರಮುಖ ರಾಜ್ಯಗಳಲ್ಲಿ ಆ ಪದ್ಧತಿ ಜಾರಿಯಲ್ಲಿಲ್ಲ. ಮಾನ್ಯರೇ, ಆದರೆ, ನಾನಿರುವ ಭಾಗದಲ್ಲಿ ಜೀತ ಪದ್ಧತಿ ಜಾರಿಯಲ್ಲಿದ್ದು, ಸಣ್ಣ ರಾಜ್ಯಗಳಲ್ಲಿ ಚಾಲ್ತಿಯಲ್ಲಿದೆ. ಭಾರತ ಸರ್ಕಾರದಿಂದ ರಸ್ತೆ ನಿರ್ಮಾಣಕ್ಕೆ ಹಣ ಪಡೆದು, ವೈಯಕ್ತಿಕ ಬಳಕೆಗೆ ಬಳಸುವ ಸಣ್ಣ ರಾಜ್ಯಗಳಿವೆ. ರಸ್ತೆ ನಿರ್ಮಾಣ ಸೇರಿದಂತೆ ಇನ್ನಿತರ ಸಿವಿಲ್ ಕೆಲಸಗಳಿಗೆ ಯಾವುದೇ ಕೂಲಿ ನೀಡದೆ ಶ್ರಮಿಕರನ್ನು ಬಳಸಿಕೊಳ್ಳಲಾಗುತ್ತಿದೆ. ಆದ್ದರಿಂದ, ನನ್ನ ಸ್ನೇಹಿತರಾದ ಡಾ. ಅಂಬೇಡ್ಕರ್ ಅವರ ತೊಂದರೆ ಆಗಬಹುದೆಂಬ ಶಂಕೆ ನಿರಾಧಾರ ಎಂಬುದು ನನ್ನ ಅಭಿಪ್ರಾಯ. ರಾಷ್ಟ್ರೀಯ ತುರ್ತು ಪರಿಸ್ಥಿತಿಯಲ್ಲಿ, ಬರ ಅಥವಾ ಯುದ್ಧ ಇಲ್ಲವೇ ಕ್ಷಾಮ ಸೇರಿದಂತೆ ಏನೇ ಪರಿಸ್ಥಿತಿ ಇರಲಿ, ರಾಜ್ಯಗಳು ನೆರವಿಗೆ ಮುಂದಾಗಬೇಕು ಹಾಗೂ ಎಲ್ಲ ಪ್ರಜೆಗಳೂ ಕಡ್ಡಾಯವಾಗಿ ದೇಶಕ್ಕಾಗಿ ಕೆಲಸ ಮಾಡಬೇಕು. ಭಾರತೀಯ ಯುವರಾಜರು ಕಾನೂನಿನ ಲೋಪ ಬಳಸಿಕೊಂಡು ಬಲವಂತದ ಶ್ರಮವನ್ನು ಬಳಸಿಕೊಳ್ಳುವಂತೆ ಆಗಬಾರದು.

ಮಾನ್ಯರೇ, ಒಂದು ವಿಷಯ ಕುರಿತು ನನಗೆ ತೃಪ್ತಿಯಾಗಿಲ್ಲ. ಮಾನವ ಕಳ್ಳ ಸಾಗಣೆಯಲ್ಲಿ ಮಹಿಳೆಯರ

ಸಾಗಣೆಯೂ ಸೇರಿದೆಯೇ? ನಮ್ಮಲ್ಲಿ ಕೆಲವರು ಮಹಿಳೆಯರ ಕಳ್ಳಸಾಗಣೆ ಬಗ್ಗೆ ಕಳೆದ ೧೦ ವರ್ಷ ಇಲ್ಲವೇ ಅದಕ್ಕಿಂತ ಹೆಚ್ಚು ಕಾಲ ಅಧ್ಯಯನ ನಡೆಸಿದ್ದೇವೆ. ದುರದೃಷ್ಟವಶಾತ್ ಹೆಚ್ಚು ಹೆಣ್ಣು ಮಕ್ಕಳಿರುವ ಒರಿಸ್ಸಾ ಮತ್ತು ಬಂಗಾಳ ಪ್ರಾಂತ್ಯದಿಂದ ಪ್ರತಿ ವರ್ಷ ಸಾವಿರಾರು ಮಹಿಳೆಯರನ್ನು ದೇಶದ ಇತರ ಭಾಗಗಳಿಗೆ ಸಾಗಿಸಲಾಗುತ್ತಿದೆ. ಕುಟಿಲರು ಹಾಗೂ ಪುಂಡರು ದೇಶದ ನಾನಾ ಭಾಗಗಳಿಗೆ ನಿರಂತರವಾಗಿ ಹೆಣ್ಣು ಮಕ್ಕಳನ್ನು ಸಾಗಿಸುತ್ತಿದ್ದಾರೆ. ಅವರು ಗೃಹಿಣಿಯರೇ ಅಥವಾ ಅಪಮಾನದ ಬದುಕನ್ನು ಬದುಕುವವರೇ ಎಂಬುದು ನನಗೆ ತಿಳಿದಿಲ್ಲ. ಪಂಜಾಬ್ ಮತ್ತು ಗಡಿ ಭಾಗದಲ್ಲಿ ಮಹಿಳೆಯರ ಸಂಖ್ಯೆ ಕಡಿಮೆ ಇರುವುದು ನಮಗೆ ಗೊತ್ತಿದೆ.

ಮಾನ್ಯರೇ, ಬಂಗಾಳದಲ್ಲಿ ಕ್ಷಾಮ ಬಂದಾಗ ಲಕ್ಷಾಂತರ ಮಹಿಳೆಯರನ್ನು ಹೊರಗೆ ಸಾಗಿಸಲಾಯಿತು. ಇವರನ್ನು ಮಹಿಳೆಯರ ಸಂಖ್ಯೆ ಕಡಿಮೆ ಇರುವಲ್ಲಿಗೆ ಸಾಗಿಸಲಾಗುತ್ತಿತ್ತೇ ಅಥವಾ ದೇಶದ ಪೂರ್ವ ಭಾಗದಲ್ಲಿದ್ದ ಬ್ರಿಟಿಷ್ ಸೈನಿಕರಿಗೆ ಪೂರೈಸಲಾಗುತ್ತಿತ್ತೇ ಎಂಬ ಕುರಿತು ಸಾಮಾಜಿಕ ಕಾರ್ಯಕರ್ತರು ಪತ್ತೆ ಹಚ್ಚಬೇಕು. ಆದರೆ, ಮಹಿಳೆಯರ ಅಕ್ರಮ ಸಾಗಣೆ ಎಂದು ಖಂಡದಲ್ಲಿ ನಿರ್ದಿಷ್ಟವಾಗಿ ಉಲ್ಲೇಖವಾಗಿದ್ದರೆ ನನಗೆ ಸಂತೋಷವಾಗುತ್ತಿತ್ತು. ಭಾರತದ ಪೂರ್ವ ಭಾಗದಿಂದ ಬಂದಿರುವ ನಮ್ಮಂತಹವರಿಗೆ, ಮೂಲಭೂತ ಹಕ್ಕುಗಳಲ್ಲಿ ಪ್ರಸ್ತಾವ ಇದ್ದರೂ, ಹಣದಾಸೆಯಿಂದ ಮಹಿಳೆಯರ ಕಳ್ಳ ಸಾಗಣೆ ನಡೆಯುತ್ತದೆ ಎಂಬ ಶಂಕೆ ಇದೆ. ಆದ್ದರಿಂದ ಮಹಿಳೆಯರ ಕಳ್ಳ ಸಾಗಣೆಯನ್ನು ಸ್ಥಗಿತಗೊಳಿಸುವ ಕಾನೂನು ರಚಿಸಲಾಗುವುದು ಎಂಬ ಖಾತ್ರಿಯನ್ನು ಸರ್ದಾರ್ ಪಟೇಲ್ ಅವರು ನೀಡಬೇಕು ಎಂಬುದು ನನ್ನ ಒತ್ತಾಯ.

ಮಾನ್ಯರೇ, ಇಲ್ಲಿರುವ ಜನಪ್ರತಿನಿಧಿಗಳು ಹೆಚ್ಚು ಅಭಿವೃದ್ಧಿ ಹೊಂದದ ರಾಜ್ಯಗಳ ಜನಪ್ರತಿನಿಧಿಗಳ ಮೇಲೆ ಹೇರಿ ಬಲವಂತದ ಕೆಲಸ ಮಾಡಿಸುವುದನ್ನು ನಿಷೇಧಿಸುತ್ತೇವೆ ಎಂಬ ಆಶ್ವಾಸನೆ ನೀಡಬೇಕು.

**ಡಾ. ಪಿ.ಕೆ. ಸೇನ್** (ಬಿಹಾರ : ಸಾಮಾನ್ಯ) : ಮಾನ್ಯರೇ, ಈ ಖಂಡವನ್ನು ಊನಗೊಂಡ ರೀತಿಯಲ್ಲಿ ಮಂಡಿಸಿದರೆ ಎದುರಾಗಬಹುದಾದ ಸಮಸ್ಯೆಗಳ ಬಗ್ಗೆ ವಿವರಿಸಲು ನನಗೆ ಅನುಮತಿ ನೀಡುತ್ತೀರಾ? ಮೊದಲಿಗೆ, ಈ ಬಗ್ಗೆ ಯಾವುದೇ ಪ್ರಶ್ನೆ ಬೇಡ. ಬಲವಂತದ ಕೆಲಸ ಯಾವುದೇ ರೂಪದಲ್ಲಿದ್ದರೂ ತೊಲಗಬೇಕು ಎಂಬ ಬಗೆಗೆ ಒಂದು ಕ್ಷಣವೂ ಅನುಮಾನ ಬೇಡ. ಆದರೆ, ಖಂಡದ ಮೂಲ ರೂಪದಲ್ಲಿ ಕೆಲ ಔಚಿತ್ಯಪೂರ್ಣ ಸಲಹೆಗಳಿದ್ದು, ಅವನ್ನು ಈಗ ತೆಗೆದು ಹಾಕಲಾಗಿದೆ. ಅವುಗಳೆಂದರೆ,

> "ಅಪರಾಧ ಸಾಬೀತಾಗಿ ಶಿಕ್ಷೆ ಅನುಭವಿಸುತ್ತಿರುವವರನ್ನು ಹೊರತುಪಡಿಸಿ ಅನೈಚ್ಛಿಕ ಗುಲಾಮಗಿರಿ' ಎಲ್ಲರಿಗೂ ಗೊತ್ತಿರುವಂತೆ ಸುಧಾರಣೆ ಶಾಲೆಗಳಲ್ಲಿರುವ ಮಕ್ಕಳು ಅಥವಾ ಬೋರ್‌ಸ್ಟಲ್ ವಿದ್ಯಾಲಯಗಳ ತರುಣರು ಮಾತ್ರವಲ್ಲದೆ, ರಾಜ್ಯದ ಆಶ್ರಯದಲ್ಲಿರುವ ವಯಸ್ಕರು ಸೆರೆವಾಸದಲ್ಲಿದ್ದಾಗ, ಸೆರೆಮನೆಯ ನಿಯಮಗಳಂತೆ ದೈಹಿಕ ಶ್ರಮ ಪಡಬೇಕಾಗುತ್ತದೆ,ಇದು ಶಾಸನಬದ್ಧ ಮತ್ತು ಸರಿಯಾದ್ದು.
>
> ಈ ಖಂಡವನ್ನು ಇದೇ ರೀತಿ ಉಳಿಸಿಕೊಂಡಲ್ಲಿ, "ಬೇಗಾರ್ ಅಥವಾ ಬಲವಂತದ ಕೆಲಸ ನಿಷೇಧಿಸಲ್ಪಡಲಿದೆ ಹಾಗೂ ನಿಯಮದ ಉಲ್ಲಂಘನೆ ಶಿಕ್ಷಾರ್ಹ ಅಪರಾಧವಾಗಲಿದೆ'. ಆಗ ಪರಿಸ್ಥಿತಿ ನಿಜವಾಗಿಯೂ ಕಠಿಣವಾಗಲಿದೆ. ನನ್ನ ಮಿತ್ರರಾದ ಡಾ. ಅಂಬೇಡ್ಕರ್ ಅವರ ನಿಲುವನ್ನು ನಾನು ಒಪ್ಪಿದ್ದು, ಇದರಿಂದ ಪಾರಾಗಲು ಇರುವ ಏಕೈಕ ಮಾರ್ಗವೆಂದರೆ "ಸಾರ್ವಜನಿಕ ಉದ್ದೇಶಕ್ಕಾಗಿ' ಎನ್ನುವ ಪದಪ್ರಯೋಗವನ್ನು ಉಳಿಸಿಕೊಳ್ಳುವುದು. ಏಕೆಂದರೆ, ಸೆರೆಮನೆ, ಬಂದೀಖಾನೆ ಅಥವಾ ಇನ್ನಿತರ ಸರಕಾರದ ಆಶ್ರಯದಲ್ಲಿ ಬರುವ ಸಂಸ್ಥೆಗಳಲ್ಲಿ ಬಲವಂತದ ಕೆಲಸ ಶಾಸನಬದ್ಧವಾಗಿದ್ದು, ಇದರಿಂದ ರಾಜ್ಯ ಮತ್ತು ಸೆರೆವಾಸಿಗಳಿಗೂ ಒಳಿತಾಗಲಿದೆ. ಇಷ್ಟರ ಬಳಿಕವೂ ಯಾವುದೇ ಸಂಶಯ ಉಳಿದಿದ್ದರೆ,ನಾವು "ರಾಜ್ಯದ ಆಶ್ರಯದಲ್ಲಿ ಇರುವವರ ಪ್ರಕರಣಗಳಲ್ಲಿ', ಅಥವಾ ಇಂಥದ್ದೇ ಪದ ಬಳಕೆ ಮಾಡಬಹುದು. ಆದರೆ ತಿದ್ದುಪಡಿ ಮಂಡಿಸಿರುವಂತೆ, ಅಂದರೆ," ಮಾನವ ಕಳ್ಳ ಸಾಗಣೆ

ಹಾಗೂ ಬೇಗಾರ್ ಮತ್ತು ಯಾವುದೇ ಬಲವಂತದ ಕೆಲಸವನ್ನು ಈ ಮೂಲಕ ನಿಷೇಧಿಸಲಾಗಿದೆ.....'.

**ಶ್ರೀ ಕೆ.ಎಂ. ಮುನ್ಷಿ :** "ಬೇರೆ ಸಮಾನ ರೂಪಗಳು' ಎಂಬ ಪದವೂ ಇದೆ.

**ಡಾ. ಪಿ.ಕೆ. ಸೇನ್ :** 'ಸಮಾನ' ಎಂಬುದು ಅಸ್ಪಷ್ಟ ಪದ. ವಿವರಣೆಯನ್ನು ಉಳಿಸಿಕೊಳ್ಳಲು ಏನು ತೊಂದರೆ ಅಥವಾ ಆಕ್ಷೇಪ ಎಂದು ನನಗೆ ಊಹಿಸಲು ಆಗುತ್ತಿಲ್ಲ. ಆ ವಿವರಣೆ ಯಾವುದೇ ಕೇಡು ಉಂಟು ಮಾಡದ್ದು ಹಾಗೂ ಕೆಲ ಸಾರ್ವಜನಿಕ ಸಂದರ್ಭಗಳಲ್ಲಿ ಬೇರೆ ದೇಶಗಳಲ್ಲಿರುವಂತೆ ಜನರಿಂದ ಕಡ್ಡಾಯವಾಗಿ ಸೇವೆ ಪಡೆದುಕೊಳ್ಳಬಹುದು ಎಂದು ಹೇಳುತ್ತದೆ. ದೇಶ ಹಾಗೂ ವ್ಯಕ್ತಿಯ ಒಳಿತಿಗೆ ಜನರಿಂದ ಕಡ್ಡಾಯ ಸೇವೆ ಪಡೆಯುವುದು ಅಗತ್ಯ. ಆದ್ದರಿಂದ ನಾನು ವಿವರಣೆಯನ್ನು ಅದೇ ರೀತಿ ಇಲ್ಲವೇ ಕೆಲವು ಬದಲಾವಣೆಗಳೊಂದಿಗೆ ಅಂಗೀಕರಿಸಲು ಸಮ್ಮತಿಸುತ್ತೇನೆ. ಇಲ್ಲವಾದಲ್ಲಿ ನಾನಾ ಸಮಸ್ಯೆ ಎದುರಾಗಬಹುದು.

**ದಿವಾನ್ ಬಹದ್ದೂರ್ ಸರ್ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್** (ಮದ್ರಾಸ್ : ಸಾಮಾನ್ಯ) : ಸಭಾಧ್ಯಕ್ಷರೇ, ವಿವರಣೆಯನ್ನು ಉಳಿಸಿಕೊಳ್ಳಬೇಕೇ, ಬೇಡವೇ ಎಂಬ ಬಗ್ಗೆ ನನಗೆ ಯಾವುದೇ ಸಂದಿಗ್ಧವಿಲ್ಲ. ಮೊದಲ ಉಪಖಂಡಕ್ಕೆ ಸಂಬಂಧಿಸಿದಂತೆ, ಅದು ಮಿಲಿಟರಿ ಸೇವೆಯನ್ನು ನಿಷೇಧಿಸಿಲ್ಲ ಎಂಬುದನ್ನು ಕೈ ಬಿಡಲಾಗಿದೆ. ಸಮಿತಿಯಲ್ಲಿ ಮಿಲಿಟರಿ ಸೇವೆ ಕಡ್ಡಾಯಗೊಳಿಸುವ ಬಗೆಗೆ ವಿಶೇಷ ಖಂಡವನ್ನು ಸೇರ್ಪಡೆಗೊಳಿಸಲಾಗಿತ್ತು. ಅದನ್ನು ಕೈಬಿಡಲಾಗಿದೆ. ಅಮೆರಿಕದ ಸಂವಿಧಾನದಲ್ಲಿ ಗುಲಾಮತನ ಹಾಗೂ ಗುಲಾಮಿ ವಿರೋಧಿ ಖಂಡ ಇದ್ದರೂ, ಮಿಲಿಟರಿ ಸೇವೆಯನ್ನು ಅಳವಡಿಸಲು ತಡೆ ಇರಬಾರದು ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಅಂತರರಾಷ್ಟ್ರೀಯ ಕಾನೂನು ತಜ್ಞರ ಬರಹಗಳನ್ನು ಉಲ್ಲೇಖಿಸಿದ ನ್ಯಾಯಾಧೀಶರುಗಳು, ರಾಜ್ಯವೆಂಬುದು ಮಿಲಿಟರಿ ಬಲವನ್ನು ಆಧರಿಸಿರುತ್ತದೆ. ಗುಲಾಮತನ ಹಾಗೂ ಗುಲಾಮ ವಿರೋಧಿ ಅಥವಾ ದಾಸ್ಯ ಕುರಿತ ಖಂಡಗಳು ಅಮೆರಿಕವು ಮಿಲಿಟರಿ ಸೇವೆಯನ್ನು ಕಡ್ಡಾಯಗೊಳಿಸಲು ಅಡ್ಡಿ ಆಗಲಿವೆ ಎಂದು ಭಾವಿಸಬಾರದು ಎಂದು ಹೇಳಿದ್ದರು. ಇದು ನನ್ನ ನಿಲುವು ಮತ್ತು ಭವಿಷ್ಯದಲ್ಲಿ ಕಾನೂನುಗಳು ಇಂಥ ಖಂಡದ ಮೂಲಕ ಮಿಲಿಟರಿ ಸೇವೆಯನ್ನು ಹೊರತುಪಡಿಸುತ್ತವೆ ಎಂದು ನಾನು ಆಲೋಚಿಸುವುದಿಲ್ಲ. ಖಂಡದಲ್ಲಿ "ಸಮಾನ'ಎಂಬ ಪದವು ಮಿಲಿಟರಿ ಸೇವೆಯನ್ನು ಕಡ್ಡಾಯಗೊಳಿಸುವ ಕಾನೂನು ಇರುವುದಿಲ್ಲ ಎನ್ನುವುದನ್ನು ಸ್ಪಷ್ಟಪಡಿಸಿದೆ. ಆದ್ದರಿಂದ "ಬೇಗಾರ್ ಮತ್ತು ಇತರ ರೀತಿಯ ಬಲವಂತದ ಕೆಲಸದ ನಿರ್ಬಂಧವು ಮಿಲಿಟರಿ ಸೇವೆಯನ್ನು ಹೊರತುಪಡಿಸಿದೆ' ಎಂದು ವ್ಯಾಖ್ಯಾನಿಸಬಾರದು. ಆದ್ದರಿಂದ, ಈ ಬಗ್ಗೆ ಯಾವುದೇ ಶಂಕೆ ಬೇಡ. ಇದರರ್ಥ– ವಿವರಣೆಯನ್ನು ಉಳಿಸಿಕೊಳ್ಳುವುದನ್ನು ನಾನು ವಿರೋಧಿಸುತ್ತೇನೆ ಎಂದಲ್ಲ. ಉಳಿಸಿಕೊಂಡಲ್ಲಿ ನೆನ್ನೆ ಸಮಿತಿಯಲ್ಲಿ ಗುರುತಿಸಿದಂತೆ, ಗ್ರಾಮೀಣ ಅರ್ಥಿಕತೆ ಹಾಗೂ ಗ್ರಾಮೀಣ ಸಂಸ್ಥೆಗಳಲ್ಲಿ ಕೆಲವು ಸಂಕಷ್ಟಗಳಿಗೆ ಕಾರಣವಾಗಬಹುದು. ಈ ಹಿನ್ನೆಲೆಯಲ್ಲಿ ನೆನ್ನೆ ನಡೆದ ಸಭೆಯಲ್ಲಿ ವಿವರಣೆಯನ್ನು ಕೈಬಿಟ್ಟಲ್ಲಿ ಯಾವುದೇ ಹಾನಿಯಾಗದು ಎಂದೇ ಅದನ್ನು ಸಮಿತಿ ಕೈಬಿಟ್ಟಿದೆ. ಒಕ್ಕೂಟವು ತನ್ನ ಅಧಿಕಾರವನ್ನು ಬಳಸಿ ಮಿಲಿಟರಿ ಸೇವೆಯನ್ನು ಈ ಖಂಡದ ಮೂಲಕ ಕಡ್ಡಾಯಗೊಳಿಸಲಿದೆ ಎಂದು ನಾನು ಆಲೋಚಿಸುವುದಿಲ್ಲ.

**ಶ್ರೀ ಎಂ. ಅನಂತಶಯನಂ ಅಯ್ಯಂಗಾರ್ :** ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಅವರ ಅಭಿಪ್ರಾಯವನ್ನು ನಾನು ಅನುಮೋದಿಸುತ್ತೇನೆ. ಪಕ್ಷದ ಸಭೆಯಲ್ಲಿ ಖಂಡದಲ್ಲಿ ಬದಲಾವಣೆಗೆ ನಾನು ಒಪ್ಪಿದ್ದರೂ, ಮರುಪರಿಶೀಲಿಸಿದಾಗ ಮೂಲ ಖಂಡ ಇರಲಿ ಎಂಬುದು ನನ್ನ ಅಭಿಪ್ರಾಯ. ಇದಕ್ಕೆ ನಾನು ಕಾರಣಗಳನ್ನು ಕೊಡುತ್ತೇನೆ. ಅವು ಇದು. ಖಂಡದಲ್ಲಿ ಉಲ್ಲೇಖವಾದ ಎರಡು ಅಂಶಗಳೆಂದರೆ, ಮೊದಲಿಗೆ ಮಾನವ ಕಳ್ಳ ಸಾಗಣೆಯನ್ನು ನಿಷೇಧಿಸಬೇಕು ಹಾಗೂ ಎರಡನೆಯದಾಗಿ, ಬಲವಂತದ ಕೆಲಸಕ್ಕೆ ಅವಕಾಶ ನೀಡಬಾರದು. ದಂಡ ಸಂಹಿತೆಯಲ್ಲಿ ಇವೆರಡೂ ಈಗಾಗಲೇ ಇವೆ. ಭಾರತೀಯ ದಂಡ ಸಂಹಿತೆಯ ೩೭೦ನೇ ವಿಭಾಗವು ಮಾನವ ಅಕ್ರಮ ಸಾಗಣೆಯನ್ನು ನಿಷೇಧಿಸುತ್ತದೆ ಹಾಗೂ ವಿಭಾಗ ೩೭೪ ವ್ಯಕ್ತಿಯ ಇಚ್ಛೆಗೆ ವಿರುದ್ಧ ಕೆಲಸ

ಮಾಡಿಸುವುದು ಶಿಕ್ಷಾರ್ಹ ಅಪರಾಧ ಎಂದು ಹೇಳಿದ್ದು, ಆದರೆ, ಅಲ್ಲಿ "ಕಾನೂನಿಗೆ ವಿರುದ್ಧ' ಎಂಬ ಪದವನ್ನು ಬಳಸಲಾಗಿದೆ. "ಕಾನೂನಿಗೆ ವಿರುದ್ಧ' ಎಂದರೆ ಶಾಸಕಾಂಗವೊಂದು ಈ ನಿರ್ದಿಷ್ಟ ಕಾರಣಕ್ಕಾಗಿ ಕಾನೂನು ರೂಪಿಸುವುದು ಕಾನೂನುಬದ್ಧವಾಗಲಿದೆ. ವ್ಯಕ್ತಿಯೊಬ್ಬ ಅಪರಾಧ ಎಸಗಿ ಶಿಕ್ಷೆಗೆ ಒಳಗಾಗಿದ್ದಲ್ಲಿ ಇಲ್ಲವೇ ಗ್ರಾಮವೊಂದು ಪ್ರವಾಹಕ್ಕೆ ಸಿಲುಕಿದಾಗ ಕೆರೆ ಕೋಡಿಯನ್ನು ನಿರ್ಮಿಸುವಂತೆ, ಗ್ರಾಮದ ಆಡಳಿತವು ಗ್ರಾಮಸ್ಥರನ್ನು ಒಪ್ಪಿಸಿ ಇಲ್ಲವೇ ಬಲವಂತವಾಗಿ ಕೆಲಸ ಮಾಡುವಂತೆ ಕಾನೂನು ರಚಿಸಬಹುದು. ವಿಭಾಗ ೩೭೦ ಮತ್ತು ೩೭೪ ಕ್ಕೆ ಮೂಲಭೂತ ಹಕ್ಕಿನ ಸ್ಥಾನ ಕೊಡಬೇಕೆಂದುಕೊಂಡಿರುವುದರಿಂದ, ಈ ಎರಡೂ ಪ್ರಸ್ತಾವಗಳು ಸಾಮಾನ್ಯ ಕಾನೂನಿನ ಅಡಿಯಲ್ಲಿ ಬರಲಿವೆ. ಹೀಗಾಗಿ, ನಾವು ಸ್ವಲ್ಪ ಎಚ್ಚರ ವಹಿಸಬೇಕಿದೆ. ಮೂಲಭೂತ ಹಕ್ಕಿನ ಸ್ಥಾನಮಾನ ನೀಡುತ್ತಿರುವಾಗ, ರಾಜ್ಯಕ್ಕೆ ಕೆಲವು ವಿನಾಯಿತಿ ನೀಡುವ ವಿವರಣೆಗಳನ್ನು ಈ ಎರಡು ಮೂಲಭೂತ ಹಕ್ಕುಗಳಿಗೆ ಸೇರಿಸದೆ ಹೋದಲ್ಲಿ ನ್ಯಾಯಾಲಯಗಳು ಕೂಡ ಸಾಮಾನ್ಯ ಕಾಯಿದೆಯಿಂದ ಹೊರತೆಗೆದು, ಶಾಸನ ಪುಸ್ತಕದಲ್ಲಿ ಮೂಲಭೂತ ಹಕ್ಕು ಎಂದು ಪರಿಗಣಿಸುತ್ತವೆ. ಆಗ ತುರ್ತುಸ್ಥಿತಿಯಲ್ಲೂ ರಾಜ್ಯ ಬಲವಂತ ಕೆಲಸ ಕುರಿತು ಕಾನೂನು ಮಾಡುವ ಹಕ್ಕನ್ನು ಕಿತ್ತುಕೊಂಡಂತೆ ಆಗಲಿದೆ. ತಿದ್ದುಪಡಿಯನ್ನು ಮಂಡಿಸಿದ ಶ್ರೀ ಮುನ್ಷಿಯವರ ಮನಸ್ಸಿನಲ್ಲಿ ಅಗತ್ಯ ಬಿದ್ದಾಗ ರಾಜ್ಯವು ಬಲವಂತದಿಂದ ಸೇನೆಗೆ ಸೇರ್ಪಡೆಗೊಳಿಸುವುದನ್ನು ಯಾರೂ ಮತ್ತು ಯಾವುದೂ ತಡೆಯಲಾರದು ಎಂದು ಇದ್ದರೂ, ಈ ವಿಷಯವನ್ನು ಇಲ್ಲೇ ಮತ್ತು ಈಗಲೇ ಸ್ಪಷ್ಟಪಡಿಸಿಬಿಡೋಣ. ವಿವರಣೆ ಇಲ್ಲವೇ ಈಗಿರುವಂತೆಯೇ ಮೂಲ ಖಂಡಕ್ಕೆ ನನ್ನ ವಿರೋಧ ಇಲ್ಲ. ತಿದ್ದುಪಡಿಯ ಅಗತ್ಯವೂ ಕಾಣುತ್ತಿಲ್ಲ. ಈ ಬಗ್ಗೆ ನಮ್ಮ ಮನಸ್ಸಿನಲ್ಲಿ ಸ್ಪಷ್ಟತೆ ಇರಲಿ. ಇಲ್ಲವಾದರೆ, ನಾವು ಕೈಬಿಟ್ಟಿದ್ದೇವೆ ಎಂಬ ಅರ್ಥ ಬರಲಿದೆ. ಕಡ್ಡಾಯ ಸೇವೆಗೆ ಸಂಬಂಧಿಸಿದಂತೆ ಯಾವುದೇ ಆಲೋಚನೆ ಇರಲಿ, ಈ ಬಗೆಗೆ ಸ್ಥಳೀಯ ಶಾಸನ ರೂಪಿಸುವುದು ಅಥವಾ ರಾಜ್ಯವೊಂದು ಬಲವಂತದ ಕೆಲಸದ ಮೂಲಕ ನೆರವು ಕೋರುವುದು–ಪರಿಗಣನೆಗಳು ಏನೇ ಇರಲಿ, ಒಂದೊಮ್ಮೆ ಮೂಲಭೂತ ಹಕ್ಕು ಎಂದಾದಲ್ಲಿ ರಾಜ್ಯದ ಹಕ್ಕನ್ನು ಶಾಶ್ವತವಾಗಿ ಕಿತ್ತುಕೊಂಡಂತೆ ಆಗಲಿದೆ.

ಡಾ. ಅಂಬೇಡ್ಕರ್ ಅವರ ವಾದದಲ್ಲಿ ಸತ್ವವಿದೆ ಮತ್ತು ನಾನು ಈ ತಿದ್ದುಪಡಿಯ ಪರ ಇಲ್ಲ. ಮೂಲ ಖಂಡ ಅಂತೆಯೇ ಇರಲಿ. ಕಡ್ಡಾಯವಾಗಿ ಸೇನೆಗೆ ಸೇರ್ಪಡೆ ಇರಬೇಕೇ ಅಥವಾ ಬೇಡವೇ ಎಂಬ ಬಗ್ಗೆ ನಮ್ಮಲ್ಲಿ ಸ್ಪಷ್ಟತೆ ಇರಲಿ. ಇದರ ನಿರ್ಧಾರವನ್ನು ನ್ಯಾಯಾಧೀಶರಿಗೆ ಬಿಡುವುದು ಬೇಡ. ಅಮೆರಿಕದ ನ್ಯಾಯಾಲಯಗಳು ಇದನ್ನು ವ್ಯಾಖ್ಯಾನಿಸಿವೆ ಎಂದು ಸರ್ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಹೇಳಿದರು. ಅಮೆರಿಕದ ಕಾನೂನು ರಚನೆಯಾಗಿ, ಹಲವು ವರ್ಷವಾಗಿದೆ. ಆದ್ದರಿಂದ ಅದನ್ನು ಈ ಕಾಲಕ್ಕೆ ಸೂಕ್ತವಾಗುವಂತೆ ವಿಸ್ತರಿಸಿ, ವ್ಯಾಖ್ಯಾನಿಸಬೇಕಿದೆ. ೧೫೦ ಸಂಪುಟಗಳ ಜಸ್ಟಿನಿಯನ್ ಸಂಹಿತೆಯನ್ನು ೧೨ ಕೋಷ್ಟಕಗಳ ವಿಶ್ಲೇಷಣೆಯಿಂದ ಅಭಿವೃದ್ಧಿಪಡಿಸಲಾಗಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಕಾನೂನನ್ನು ಕಾಲಕಾಲಕ್ಕೆ ಮಾರ್ಪಡಿಸಲು ಜನ ಒಪ್ಪದಿದ್ದರೂ, ವಕೀಲರು ಬೇರೆ ಬೇರೆ ವ್ಯಾಖ್ಯಾನಗಳ ಮೂಲಕ ಕಾಲಕಾಲಕ್ಕೆ ಹೊಸ ಕಾನೂನನ್ನು ಸೃಷ್ಟಿಸುತ್ತಿರುತ್ತಾರೆ. ನಾವು ಈಗ ಕಾನೂನೊಂದನ್ನು ರಚಿಸುತ್ತಿದ್ದೇವೆ. ಅದರ ವಿಶ್ಲೇಷಣೆಯನ್ನು ಭವಿಷ್ಯದಲ್ಲಿ ಮಾಡಬೇಕು ಹಾಗೂ ನ್ಯಾಯಾಧೀಶರಿಗೆ ನಿರ್ಧಾರವನ್ನು ಬಿಡುವುದು ಬೇಡ. ನಾನು ತಿದ್ದುಪಡಿಗೆ ವಿರೋಧವಿದ್ದು, ಮೂಲ ಖಂಡವನ್ನು ಉಳಿಸಿಕೊಳ್ಳುವ ಪರ ಇದ್ದೇನೆ.

**ಡಾ. ಬಿ.ಆರ್. ಅಂಬೇಡ್ಕರ್** : ನಾನೊಂದು ಸಲಹೆ ನೀಡಲೇ? ನಾವು ಸರ್ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಅವರ ವಾದವನ್ನು ಕೇಳಿದ್ದು,ಅವರ ಪ್ರಕಾರ ಅಮೆರಿಕದ ಸುಪ್ರೀಂ ಕೋರ್ಟ್‌ನ ತೀರ್ಪುಗಳಲ್ಲಿ ಯಾವುದೇ ವಿವರಣೆ ಇಲ್ಲದಿದ್ದರೂ, ಕಡ್ಡಾಯ ಮಿಲಿಟರಿ ಸೇವೆಗೆ ರಾಜ್ಯಕ್ಕೆ ಅನುಮತಿ ನೀಡಲಾಗಿದೆ. ಅದೃಷ್ಟವಶಾತ್ ನಾನು ಕೂಡ ಅಲ್ಲಾಡಿ ಅವರು ಪರಿಶೀಲಿಸಿದ ಪ್ರಕರಣಗಳನ್ನು ಪರಿಶೀಲಿಸಿದ್ದೇನೆ. ಸುಪ್ರೀಂಕೋರ್ಟ್‌ನ ತೀರ್ಪುಗಳ ಹಿಂದಿನ ತರ್ಕವನ್ನು ಪರಿಶೀಲಿಸಿದರೆ, ರಾಜಕೀಯ ವ್ಯವಸ್ಥೆಯೊಂದರಲ್ಲಿ

ಸ್ವತಂತ್ರ ಪ್ರಜೆಯು ಸರ್ಕಾರವನ್ನು ಬೆಂಬಲಿಸಬೇಕು. ಪ್ರಜೆಗಳು ಸರ್ಕಾರವನ್ನು ಬೆಂಬಲಿಸಬೇಕಾದ್ದರಿಂದ ಕಡ್ಡಾಯ ಮಿಲಿಟರಿ ಸೇವೆ ಕಾಯ್ದೆಯು ಜನ ತಮ್ಮ ಕರ್ತವ್ಯವನ್ನು ಮಾಡಲು ಕರೆ ನೀಡುತ್ತದೆ ಎಂಬುದು ಈ ತೀರ್ಪುಗಳ ಹಿಂದಿನ ತರ್ಕ. ಇದನ್ನು ಅಲ್ಲಾಡಿ ಅವರು ಒಪ್ಪಬಹುದು ಎಂದುಕೊಂಡಿದ್ದೇನೆ. ಅತ್ಯಂತ ಪ್ರಮುಖವಾದ ಕಡ್ಡಾಯ ಮಿಲಿಟರಿ ಸೇವೆಯಂತಹ ವಿಷಯಕ್ಕೆ ಇದು ಅನಿಶ್ಚಿತ ಅಸ್ತಿಭಾರ ಎಂದು ನಾನು ಒಪ್ಪಿಕೊಳ್ಳುತ್ತೇನೆ.

ಭಾರತದ ಸುಪ್ರೀಂ ಕೋರ್ಟ್ ಯಾವ ರೀತಿ ತರ್ಕಿಸುತ್ತದೆ, ತರ್ಕಿಸುವುದಿಲ್ಲ ಎಂಬ ಬಗ್ಗೆ ನಾವು ಚಿಂತನೆ ನಡೆಸಬೇಕು ಎಂಬುದನ್ನು ನಾನು ಒಪ್ಪುತ್ತೇನೆ. ಆದ್ದರಿಂದ ನನ್ನ ಸಲಹೆ ಏನೆಂದರೆ, ಬೇರೆ ಖಂಡಗಳ ಬಗ್ಗೆ ನಿರ್ಧರಿಸುವಾಗ ಹೆಚ್ಚುವರಿ ಪರಿಶೀಲನೆಗೆ ಸಣ್ಣ ಸಮಿತಿಯೊಂದನ್ನು ನೇಮಿಸಿ, ವರದಿ ಪಡೆದುಕೊಳ್ಳಲಾಗಿತ್ತು. ಅದೇ ರೀತಿ ವಿವರಣೆಯನ್ನು ಉಳಿಸಿಕೊಳ್ಳಬೇಕೇ, ಬೇಡವೇ ಎಂಬ ಪ್ರಶ್ನೆಯನ್ನು ನಿರ್ಧರಿಸಲು ಸಮಿತಿಯೊಂದನ್ನು ರಚಿಸೋಣ. ಸಮಿತಿಯ ವರದಿಯನ್ನು ಆಧರಿಸಿ, ಈ ಕುರಿತು ಸೂಕ್ತ ನಿರ್ಧಾರ ತೆಗೆದುಕೊಳ್ಳಬಹುದು.

**ಮಾನ್ಯ ಸಭಾಧ್ಯಕ್ಷರು :** ಡಾ ಅಂಬೇಡ್ಕರ್ ಅವರ ಸಲಹೆಯನ್ನು ಸಭೆ ಒಪ್ಪಿದಲ್ಲಿ, ಈ ಕುರಿತು ಚರ್ಚೆ ಅಗತ್ಯವಿಲ್ಲ ಎಂಬುದು ನನ್ನ ಅನಿಸಿಕೆ.

**ಶ್ರೀ ಆರ್.ಕೆ. ಸಿಧ್ವಾ** (ಸಿ.ಪಿ. ಬೇರಾರ್ : ಸಾಮಾನ್ಯ) : ಕಡ್ಡಾಯ ಮಿಲಿಟರಿ ಸೇವೆ ಕುರಿತ ಪ್ರಶ್ನೆಯನ್ನು ಚರ್ಚಿಸಬಹುದು.

**ಮಾನ್ಯ ಸಭಾಧ್ಯಕ್ಷರು :** ಕಡ್ಡಾಯ ಸೇನೆ ಸೇವೆ ಇರಬೇಕೇ ಬೇಡವೇ ಎಂಬ ಬಗ್ಗೆ ನಾವು ನಿರ್ಧರಿಸುತ್ತಿಲ್ಲ. ಬದಲಿಗೆ, ಮೂಲಭೂತ ಹಕ್ಕಿನಡಿ ಕಡ್ಡಾಯ ಸೇನೆ ಸೇವೆ ನಿಷಿದ್ಧವೇ ಎಂಬುದು ಪ್ರಶ್ನೆ. ಇದನ್ನು ಸಣ್ಣ ಸಮಿತಿಯೊಂದಕ್ಕೆ ಒಪ್ಪಿಸುವುದು ಸೂಕ್ತ ಎನ್ನುವುದು ನನ್ನ ಆಲೋಚನೆ.

**ಗೌರವಾನ್ವಿತ ಸದಸ್ಯ :** ಇಡೀ ೧೧ನೇ ಖಂಡವನ್ನು ಪರಿಶೀಲನೆಗೆ ಕಳಿಸುವುದೇ?

**ಮಾನ್ಯ ಸಭಾಧ್ಯಕ್ಷ :** ಹೌದು. ಸಂಪೂರ್ಣ ಖಂಡವನ್ನು ಪರಿಶೀಲನೆಗೆ ಕಳಿಸಲಾಗುವುದು.

ಇಡೀ ಖಂಡವನ್ನು ಪರಿಶೀಲನೆಗೆ ಕಳಿಸಲಾಯಿತು.

## ಖಂಡ ೧೨*

**ಮಾನ್ಯ ಸಭಾಧ್ಯಕ್ಷರು :** ಖಂಡ ೧೨*

**ಗೌರವಾನ್ವಿತ ಸರ್ದಾರ್ ವಲ್ಲಭಭಾಯ್ ಪಟೇಲ್ :** ನಾನು ೧೨ನೇ ಖಂಡವನ್ನು ಮಂಡಿಸುತ್ತಿದ್ದೇನೆ. ಖಂಡ ಹೇಳುತ್ತದೆ:

"೧೪ ವರ್ಷದ ಕೆಳಗಿನ ಮಕ್ಕಳನ್ನು ಕಾರ್ಖಾನೆ, ಗಣಿ ಇಲ್ಲವೇ ಅಪಾಯಕಾರಿ ಕೆಲಸಕ್ಕೆ ನೇಮಿಸಿಕೊಳ್ಳಬಾರದು".

ವಿವರಣೆಯನ್ನು ಕೈ ಬಿಡಲು ಉದ್ದೇಶಿಸಲಾಗಿದೆ. ಆದರೆ, ಖಂಡವನ್ನು ಇದ್ದಂತೆಯೇ ಮಂಡಿಸುತ್ತಿದ್ದು, ಕೈಬಿಡುವ ವಿವರಣೆಯನ್ನು ತಿದ್ದುಪಡಿಯಾಗಿ ಮಂಡಿಸಬಹುದು.

ಫೂಟ್‌ನೋಟ್ ಆಗಿ ಬರಬೇಕು

*೧೨. ೧೪ ವರ್ಷದ ಕೆಳಗಿನ ಯಾವುದೇ ಮಕ್ಕಳನ್ನು ಕಾರ್ಖಾನೆ, ಗಣಿ ಅಥವಾ ಅಪಾಯಕಾರಿ ಉದ್ಯಮದಲ್ಲಿ ನೇಮಿಸಿಕೊಳ್ಳಬಾರದು.

ವಿವರಣೆ ಹೇಳುತ್ತದೆ: ಕಡ್ಡಾಯ ಶ್ರಮ ಅಗತ್ಯ ಇರುವ ಚಟುವಟಿಕೆ ಅಥವಾ ಶೈಕ್ಷಣಿಕ ಕಾರ್ಯಕ್ರಮಕ್ಕೆ ಇದರಿಂದ ಪಕ್ಷಪಾತ ಆಗಕೂಡದು.

**ಶ್ರೀ ಕೆ.ಎಂ. ಮುನ್ಷಿ :** ತೆಗೆದು ಹಾಕಬೇಕಾದ ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ.

**ವಿವರಣೆ ಹೇಳುತ್ತದೆ:** "ಕಡ್ಡಾಯ ಶ್ರಮ ಅಗತ್ಯ ಇರುವ ಚಟುವಟಿಕೆ ಅಥವಾ ಶೈಕ್ಷಣಿಕ ಕಾರ್ಯಕ್ರಮಕ್ಕೆ ಇದರಿಂದ ಪಕ್ಷಪಾತ ಆಗಕೂಡದು'.

ಇದಕ್ಕೂ, ಖಂಡಕ್ಕೂ ಯಾವುದೇ ಸಂಬಂಧವಿಲ್ಲ. ಹೀಗಾಗಿ ತೆಗೆದುಹಾಕಲು ಸಮ್ಮತಿಸುತ್ತಿದ್ದೇನೆ.

**ಮಾನ್ಯ ಸಭಾಧ್ಯಕ್ಷರು :** ಶ್ರೀ ಕಾಮತ್ ಅವರೇ, ೩೭ನೇ ತಿದ್ದುಪಡಿ.

**ಶ್ರೀ ಎಚ್.ವಿ. ಕಾಮತ್ :** ೧೪ ವರ್ಷ ಕೆಳಗಿನ ಮಕ್ಕಳ ಬಗ್ಗೆ ಖಂಡ ಇದ್ದು, ಇದರಿಂದ ಗರ್ಭಿಣಿಯರು ಹಾಗೂ ವಯೋವೃದ್ಧರು ಹೊರತಾಗಲಿದ್ದಾರೆ. ನಂತರದ ಹಂತದಲ್ಲಿ ತಿದ್ದುಪಡಿಯನ್ನು ಮಂಡಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿದ್ದೇನೆ. ಈಗ ತಿದ್ದುಪಡಿಯನ್ನು ಮಂಡಿಸುವುದಿಲ್ಲ.

**ಶ್ರೀ ಬಿ.ಕೆ. ಸಿಧ್ವಾ :** ೪೩ನೇ ತಿದ್ದುಪಡಿಗೆ ಸಂಬಂಧಿಸಿದಂತೆ, ಇವೆಲ್ಲವೂ ಹೊಸ ಖಂಡಗಳು. ನೆನ್ನೆ ಗೌರವಾನ್ವಿತ ಸದನ ನಿರ್ಧರಿಸಿದಂತೆ, ಎಲ್ಲ ಖಂಡಗಳ ಬಳಿಕ ಇದನ್ನು ತೆಗೆದುಕೊಳ್ಳುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಇವು ತಿದ್ದುಪಡಿಗಳು. ನಾನು ಶ್ರೀ ಮುನ್ಷಿಯವರ ವಿವರಣೆಯನ್ನು ತೆಗೆದು ಹಾಕುವ ತಿದ್ದುಪಡಿಯನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

ತಿದ್ದುಪಡಿಗೊಂಡ ೧೨ನೇ ಖಂಡವನ್ನು ಅಂಗೀಕರಿಸಲಾಯಿತು.

## ಖಂಡ ೧೩–ಧಾರ್ಮಿಕ ಹಕ್ಕುಗಳು

**ಗೌರವಾನ್ವಿತ ಸರ್ದಾರ್ ವಲ್ಲಭಭಾಯ್ ಪಟೇಲ್ :** ೧೩ನೇ ಖಂಡವನ್ನು ಮಂಡಿಸುತ್ತಿದ್ದೇನೆ:

"ಎಲ್ಲರಿಗೂ ಸಮಾನವಾಗಿ ಆತ್ಮಸಾಕ್ಷಿಯ ಸ್ವಾತಂತ್ರ್ಯವಿದೆ ಹಾಗೂ ಧರ್ಮದ ಆಚರಣೆ, ಬೋಧನೆ ಮತ್ತು ಪ್ರಸಾರದ ಹಕ್ಕು ಇದೆ. ಆದರೆ, ಆದರಿಂದ ಸಾರ್ವಜನಿಕ ಸುವ್ಯವಸ್ಥೆ, ನೈತಿಕತೆ ಇಲ್ಲವೇ ಆರೋಗ್ಯಕ್ಕೆ ಹಾಗೂ ಈ ಭಾಗದ ಇತರ ಪ್ರಸ್ತಾವಗಳಿಗೆ ಇದರಿಂದ ಯಾವುದೇ ಧಕ್ಕೆ ಆಗಬಾರದು".

ವಿವರಣೆ ೧: ಸಿಖ್ಖರು ಕಿರ್ಪಾಣವನ್ನು ಧರಿಸುವುದು ಹಾಗೂ ತೆಗೆದುಕೊಂಡು ಹೋಗುವುದನ್ನು ಸಿಖ್ ಧರ್ಮದ ಆಚರಣೆ ಎಂದು ಪರಿಗಣಿಸಲಾಗಿದೆ.

ವಿವರಣೆ ೨: ಧಾರ್ಮಿಕ ಆಚರಣೆಗೆ ಸಂಬಂಧಿಸಿದೆ ಎನ್ನಲಾಧ ಆರ್ಥಿಕ, ಹಣಕಾಸು, ರಾಜಕೀಯ ಇಲ್ಲವೇ ಇತರ ಜಾತ್ಯತೀತ ಚಟುವಟಿಕೆಗಳನ್ನು ಮೇಲಿನ ಹಕ್ಕು ಒಳಗೊಂಡಿಲ್ಲ.

ವಿವರಣೆ ೩: ಸಾಮಾಜಿಕ ಕಲ್ಯಾಣ ಹಾಗೂ ಸುಧಾರಣೆಗೆ ಸಂಬಂಧಿಸಿದಂತೆ ಕಾನೂನು ರೂಪಿಸಲು ರಾಜ್ಯಕ್ಕೆ ಈ ಧಾರ್ಮಿಕ ಸ್ವಾತಂತ್ರ್ಯದ ಹಕ್ಕುಗಳು ಯಾವುದೇ ತಡೆಯುಂಟು ಮಾಡುವುದಿಲ್ಲ.

ಈ ಖಂಡಕ್ಕೆ ಹಲವು ತಿದ್ದುಪಡಿಗಳಿವೆ. ಅವುಗಳನ್ನು ಮಂಡಿಸಿದಾಗ, ಆ ಬಗ್ಗೆ ಮಾತನ್ನಾಡುತ್ತೇನೆ ಮತ್ತು ಒಪ್ಪಿಕೊಳ್ಳುವಂಥದ್ದು ಏನಾದರೂ ಇದ್ದರೆ ಒಪ್ಪಿಕೊಳ್ಳಲಾಗುತ್ತದೆ.

**ಶ್ರೀ ಕೆ.ಎಂ. ಮುನ್ಷಿ :** ಮಾನ್ಯರೇ, ಕೊನೆಯ ವಿವರಣೆ ಬಳಿಕ ಕೆಳಕಂಡ ವಾಕ್ಯವನ್ನು ಸೇರ್ಪಡೆಗೊಳಿಸಬೇಕೆಂದು ತಿದ್ದುಪಡಿ ಮಂಡಿಸುತ್ತೇನೆ.

"ಸಾರ್ವಜನಿಕ ಗುಣ ಸ್ವಭಾವದ ಹಿಂದೂ ಧಾರ್ಮಿಕ ಸಂಸ್ಥೆಗಳನ್ನು ಹಿಂದೂ ಸಮುದಾಯದ ಎಲ್ಲ ವರ್ಗಕ್ಕೂ ಮುಕ್ತಗೊಳಿಸಬೇಕು."

ಮೇಲಿನ ವಿವರಣೆಯನ್ನು ರಚಿಸಿದ ಬಳಿಕ ಸಾಮಾಜಿಕ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಕಾನೂನು ರೂಪಿಸುವ ಶಾಸನಸಭೆಯ ಹಕ್ಕಿಗೆ ಧಾರ್ಮಿಕ ಆಚರಣೆಗಳಿಂದ ಚ್ಯುತಿ ಆಗಬಾರದೆಂಬ ಯೋಚನೆಯಿಂದ ಈ ಸೇರ್ಪಡೆ ನಡೆದಿದೆ. ಹಿಂದೂ ಸಮಾಜದ ಎಲ್ಲ ವರ್ಗದವರಿಗೂ ದೇವಾಲಯದ ಬಾಗಿಲು

ತೆರೆದಿರಬೇಕೆಂಬುದು ಧಾರ್ಮಿಕ ಆಚರಣೆಯೇ ಎಂಬ ಪ್ರಶ್ನೆ ಉದ್ಭವವಾಯಿತು. ಇಂಥ ಖಂಡದ ರೂಪುಗೊಳಿಸುವಿಕೆಯನ್ನು ತಡೆಯಲು,ಹಿಂದೂಗಳ ಧಾರ್ಮಿಕ ಸಂಸ್ಥೆಗಳನ್ನು ಎಲ್ಲ ವರ್ಗದವರಿಗೂ ಮುಕ್ತಗೊಳಿಸಬೇಕು ಎಂಬುದು ಹಿಂದೂ ಧರ್ಮದ ಆಚರಣೆಗೆ ವಿರುದ್ಧವಲ್ಲ ಎಂದು ನಿರ್ಧರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :** ಅಧಿಸೂಚನೆ ಕೊಟ್ಟ ಸದಸ್ಯರು ಈ ಖಂಡಕ್ಕೆ ತಿದ್ದುಪಡಿಯನ್ನು ಮಂಡಿಸಬಹುದು.......(ಸ್ವಲ್ಪ ಕಾಲ ತಡೆದು) ಈ ಖಂಡಕ್ಕೆ ಯಾವುದೇ ತಿದ್ದುಪಡಿ ಮಂಡನೆಯಾಗದ ಕಾರಣ ಈ ಖಂಡವನ್ನು ಮತಕ್ಕೆ ಹಾಕುತ್ತೇನೆ.

**ಶ್ರೀ ಎಚ್.ಜೆ. ಖಾಂಡೇಕರ್** (ಸಿ.ಪಿ. ಮತ್ತು ಬೇರಾರ್) : ಮಾನ್ಯರೇ, ಒಂದೊಮ್ಮೆ ಈ ಖಂಡಕ್ಕೆ ಶ್ರೀ ಮುನ್ಷಿಯವರ ತಿದ್ದುಪಡಿಯನ್ನು ಅಂಗೀಕರಿಸಿದಲ್ಲಿ, "ಸಾರ್ವಜನಿಕ ಪೂಜಾ ಸ್ಥಳ' ಎಂದರೆ ಏನು ಎಂಬ ವಿವರಣೆಯನ್ನು ನೀಡಬೇಕಾಗುತ್ತದೆ. ಇಲ್ಲದೇ ಹೋದಲ್ಲಿ ಯಾವುದು ಸಾರ್ವಜನಿಕ ಪೂಜಾಸ್ಥಳ ಎಂದು ತಿಳಿಯಲು ಜನರಿಗೆ ಕಷ್ಟವಾಗಲಿದೆ. ಎಲ್ಲ ವರ್ಗದವರಿಗೆ ತೆರೆದ ದೇವಾಲಯದಲ್ಲೂ ಅಸ್ಪೃಶ್ಯ ವರ್ಗದವರಿಗೆ ಪ್ರವೇಶ ನಿರಾಕರಿಸಲಾಗುತ್ತಿದೆ. ಈ ವರ್ಗದವರಿಗೆ ಪ್ರವೇಶ, ಪೂಜೆಗೆ ಅವಕಾಶ ಇದೆ ಎಂದು ಲಿಖಿತ ದಾಖಲೆ ಇರುವಲ್ಲೂ ಅರ್ಚಕರು ಅಡೆತಡೆ ಒಡ್ಡುತ್ತಾರೆ. ಇದು ಖಾಸಗಿ ದೇವಾಲಯ, ಅಸ್ಪೃಶ್ಯರಿಗೆ ಪ್ರವೇಶವಿಲ್ಲ ಎನ್ನುತ್ತಾರೆ. ಆದ್ದರಿಂದ ಮಾನ್ಯರೇ, ಸಾರ್ವಜನಿಕ ಪೂಜಾ ಸ್ಥಳದ ವಿವರಣೆ ಇದ್ದಲ್ಲಿ, ಯಾವುದೇ ಸಮಸ್ಯೆ ಉಂಟಾಗದು. 'ಸಾರ್ವಜನಿಕ ಪೂಜಾ ಸ್ಥಳ'ದ ವಿವರಣೆ ಇರಬೇಕೆಂದು ಸಲಹೆ ನೀಡುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಈ ಪದ ಯಾವ ಖಂಡದಲ್ಲಿದೆ ಎಂದು ತಿಳಿದುಕೊಳ್ಳಬಹುದೇ?

**ಶ್ರೀ ಎಚ್.ಜೆ. ಖಾಂಡೇಕರ್ :** ವಿವರಣೆ ೩ರಲ್ಲಿ

**ಮಾನ್ಯ ಸಭಾಧ್ಯಕ್ಷರು :** ಅಲ್ಲಿ ಆ ಪದ ಇಲ್ಲ. "ಸಾರ್ವಜನಿಕ ಪೂಜಾ ಸ್ಥಳ' ದ ಉಲ್ಲೇಖವಿಲ್ಲ.

**ಶ್ರೀ ಎಚ್.ಜೆ. ಖಾಂಡೇಕರ್ :** "ಸಾರ್ವಜನಿಕ ಗುಣಲಕ್ಷಣವಿರುವ ಧಾರ್ಮಿಕ ಸಂಸ್ಥೆ' ಎಂಬ ಪದಕ್ಕೆ ವಿವರಣೆ ಬೇಕು.

**ಮಾನ್ಯ ಸಭಾಧ್ಯಕ್ಷರು :** ಶ್ರೀ ಖಾಂಡೇಕರ್ ಅವರಿಗೆ "ಸಾರ್ವಜನಿಕ ಗುಣಲಕ್ಷಣವಿರುವ ಧಾರ್ಮಿಕ ಸಂಸ್ಥೆ' ಎಂಬ ಪದದ ವಿವರಣೆ ಬೇಕಂತೆ. ಇದರಿಂದ ಧಾರ್ಮಿಕ ಸಂಸ್ಥೆಗಳು ಯಾವುವು ಎಂಬುದು ಸ್ಪಷ್ಟವಾಗಲಿದೆ.

**ಶ್ರೀ ಎಲ್. ಲಕ್ಷ್ಮಣ ಸ್ವಾಮಿ ಭಾರತಿ :** ಮಾನ್ಯರೇ, ಈ ಖಂಡದಲ್ಲಿ "ಅಧ್ಯಾಯದ ಬೇರೆ ಪ್ರಸ್ತಾವ' ಎಂದು ಇದೆ. "ಈ ಭಾಗದ ಇತರ ಪ್ರಸ್ತಾವಗಳು' ಎಂದಾಗಬೇಕು.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯ್ ಪಟೇಲ್ :** 'ಅಧ್ಯಾಯ' ಎಂಬ ಪದವನ್ನು 'ಭಾಗ' ಎಂದು ಬದಲಿಸಲಾಗಿದೆ.

ಶ್ರೀ ಮುನ್ಷಿಯವರ ತಿದ್ದುಪಡಿಯನ್ನು ನಾನು ಅಂಗೀಕರಿಸಿದ್ದು, ಈ ವಿವಾದಾತ್ಮಕ ವಿಷಯವನ್ನು ಅಂಗೀಕರಿಸಲು ಒಪ್ಪಿರುವ ಎಲ್ಲರಿಗೂ ವಂದನೆ ಅರ್ಪಿಸುತ್ತೇನೆ. ಇದು ಹಲವು ಸಮಿತಿಗಳ ಮೂಲಕ ಹಾಯ್ದುಬಂದಿದ್ದಲ್ಲದೆ, ದೀರ್ಘ ಕಾಲ ತೆಗೆದುಕೊಂಡಿತ್ತು. ಅಭಿಪ್ರಾಯ ಭೇದ ಇರಬಹುದು. ಆದರೆ, ಸಮಾಜದ ಎಲ್ಲ ವರ್ಗದವರನ್ನೂ ಒಳಗೊಳ್ಳಲು ಪ್ರಯತ್ನಿಸಿದ್ದೇವೆ. ಈಗ ತಿದ್ದುಪಡಿಗೊಂಡ ಖಂಡವನ್ನು ಮಂಡಿಸುತ್ತಿದ್ದೇನೆ.

**ಮಾನ್ಯ ಸಭಾಧ್ಯಕ್ಷರು :** ವಿವರಣೆ ೩ಕ್ಕೆ ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ. ತಿದ್ದುಪಡಿ ಏನೆಂದರೆ, 'ಸಾರ್ವಜನಿಕ ಗುಣಲಕ್ಷಣವಿರುವ ಹಿಂದೂ ಧಾರ್ಮಿಕ ಸಂಸ್ಥೆಗಳನ್ನು ಹಿಂದೂ ಸಮಾಜದ ಎಲ್ಲ ವರ್ಗ ಇಲ್ಲವೇ ವಿಭಾಗಕ್ಕೆ ತೆರೆಯಬೇಕು ಎಂಬುದನ್ನು ವಿವರಣೆ ೩ರ ಅಂತ್ಯದಲ್ಲಿ ಸೇರಿಸಬೇಕು'.

ತಿದ್ದುಪಡಿ ಅಂಗೀಕೃತವಾಯಿತು.

**ಮಾನ್ಯ ಸಭಾಧ್ಯಕ್ಷರು** : ತಿದ್ದುಪಡಿಗೊಂಡ ಖಂಡವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ತಿದ್ದುಪಡಿಗೊಂಡ ೧೩ನೇ ಖಂಡವನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಮುಂದಿನ ಖಂಡಕ್ಕೆ ಹೋಗೋಣ.

## ಖಂಡ ೧೪

**ಗೌರವಾನ್ವಿತ ಸರ್ದಾರ್ ವಲ್ಲಭಭಾಯ್ ಪಟೇಲ್** : ೧೪ನೇ ಖಂಡವನ್ನು ಮಂಡಿಸುತ್ತಿದ್ದೇನೆ.

"ಧರ್ಮಕ್ಕೆ ಸಂಬಂಧಿಸಿದಂತೆ ತನ್ನ ವ್ಯವಹಾರಗಳನ್ನು ನಡೆಸಲು ಎಲ್ಲ ಧಾರ್ಮಿಕ ಪಂಗಡಕ್ಕೂ ಹಕ್ಕು ಇದೆ. ಸಾಮಾನ್ಯ ಕಾನೂನಿಗೆ ಒಳಪಟ್ಟಂತೆ ಚರ, ಸ್ಥಿರ ಆಸ್ತಿಯನ್ನು ಹೊಂದುವುದು, ಒಡೆತನ ಹೊಂದುವುದು ಹಾಗೂ ನಿರ್ವಹಣೆಯ ಹಕ್ಕು, ಧಾರ್ಮಿಕ ಇಲ್ಲವೇ ಧರ್ಮಾರ್ಥದ ಕೆಲಸಗಳಿಗಾಗಿ ಸಂಸ್ಥೆಗಳನ್ನು ಸ್ಥಾಪಿಸುವ ಹಾಗೂ ನಿರ್ವಹಿಸುವ ಹಕ್ಕು ಇದೆ.'

ಒಂದು ಸಣ್ಣ ಸೇರ್ಪಡೆಯಿದ್ದು, ಶ್ರೀ ಮುನ್ಷಿ ಅವರು ತಿದ್ದುಪಡಿ ಮೂಲಕ ಮಂಡಿಸಲಿದ್ದಾರೆ. ನಾನು ಖಂಡವನ್ನು ಸಭೆ ಅಂಗೀಕರಿಸಲಿ ಎಂದು ಮಂಡಿಸುತ್ತಿದ್ದೇನೆ.

**ಶ್ರೀ ಕೆ.ಎಂ. ಮುನ್ಷಿ** : ಖಂಡ ೧೪ರಲ್ಲಿ 'ಅಥವಾ ಅದರ ವಿಭಾಗದಿಂದ' ಎಂಬುದನ್ನು "ಪಂಗಡ' ಮತ್ತು "ಬಹುದು' ನಡುವೆ ಸೇರ್ಪಡೆಗೊಳಿಸಬೇಕು. 'ಧಾರ್ಮಿಕ ಪಂಗಡ' ಎಂಬ ಪದದ ಬಳಕೆಯು ಪಂಗಡವೊಂದರ ವಿಭಾಗವನ್ನು ರಕ್ಷಣೆಯಿಂದ ಹೊರತಾಗಿಸಬಹುದು ಎಂಬ ಭಾವನೆಯಿದೆ.

**ಶ್ರೀ ಕೆ.ಎಂ. ಸಂತಾನಂ** : "ಸಾಮಾನ್ಯ ಕಾಯಿದೆ' ಎಂದರೇನು?

**ಶ್ರೀ ಕೆ.ಎಂ. ಮುನ್ಷಿ** : ವಿಶೇಷ ಶಾಸನಗಳಲ್ಲದೆ, ದೇಶವೊಂದರ ಸಾಮಾನ್ಯ ಕಾಯಿದೆಯೊಂದು ಇರುತ್ತದೆ. "ಕಾನೂನು' ಎಂಬ ಪದ ಬಳಕೆಯಾದಾಗ, ಕಾನೂನನ್ನು ಯಾರು ಚಲಾಯಿಸುತ್ತಾರೆ ಎಂಬುದನ್ನು ಆಧರಿಸಿ, ರಾಜ್ಯ ಅಥವಾ ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದ್ದು ಎಂದು ಅರ್ಥೈಸಬೇಕು. ಕೇಂದ್ರಕ್ಕೆ ಸಂಬಂಧಿಸಿದ ವಿಷಯವಾದರೆ ಕೇಂದ್ರದ ಕಾನೂನು, ಒಂದು ವೇಳೆ ರಾಜ್ಯಕ್ಕೆ ಸಂಬಂಧಿಸಿದ ವಿಷಯವಾಗಿದ್ದರೆ ರಾಜ್ಯದ ಕಾನೂನು ಎಂದಾಗಲಿದೆ.

**ಮಾನ್ಯ ಸಭಾಧ್ಯಕ್ಷರು** : "ಸಾಮಾನ್ಯ' ಎಂಬ ಪದಕ್ಕೆ ಏನಾದರೂ ವಿಶೇಷತೆ ಇದೆಯೇ? ಕಾನೂನು ಎಂದರೆ ಕಾನೂನು ಅಲ್ಲವೇ?

**ಶ್ರೀ ಕೆ.ಎಂ. ಮುನ್ಷಿ** : ನಿರ್ದಿಷ್ಟ ಕಾನೂನುಗಳನ್ನು ಹೊರಗಿಡಬೇಕು ಎಂಬುದು ಉದ್ದೇಶ. ಕೆಲ ವರ್ಗದವರಿಗಾಗಿಯೇ ಇರುವ ವಿಶೇಷ ಕಾನೂನುಗಳಿವೆ. "ಕಾನೂನು' ಎಂದೇ ಇರಬೇಕು ಎಂದು ಸದನ ಹೇಳಿದಲ್ಲಿ ನನ್ನ ಆಕ್ಷೇಪ ಇಲ್ಲ.

**ಕೆಲ ಗೌರವಾನ್ವಿತ ಸದಸ್ಯರು** : '......... ಕಾನೂನಿಗೆ' ಅನ್ವಯಿಸಿದಂತೆ.

**ಮಾನ್ಯ ಸಭಾಧ್ಯಕ್ಷರು** : ಶ್ರೀ ಸಂತಾನಂ ಅವರೇ, ನೀವು ಸಲ್ಲಿಸಿದ ತಿದ್ದುಪಡಿ ಒಂದಿದೆ. ತಿದ್ದುಪಡಿ ೬೩. ಅದನ್ನು ಮಂಡಿಸಬೇಕಿದೆ

**ಶ್ರೀ ಕೆ. ಸಂತಾನಂ** : ಇಲ್ಲ ಮಾನ್ಯರೇ, ನಾನು ಅದನ್ನು ಮಂಡಿಸುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು** : ಶ್ರೀ ರಾಜಗೋಪಾಲಾಚಾರಿಯರ್, ನಿಮ್ಮದೊಂದು ತಿದ್ದುಪಡಿ ಇದೆ.

**ಮಾನ್ಯ ರಾಜಗೋಪಾಲಾಚಾರಿಯರ್** : ಇಲ್ಲ ಮಾನ್ಯರೇ, ನಾನು ಅದನ್ನು ಮಂಡಿಸುತ್ತಿಲ್ಲ.

**ಮಾನ್ಯ ಸಭಾಧ್ಯಕ್ಷರು** : ಖಂಡ ಹಾಗೂ ತಿದ್ದುಪಡಿಗಳು ಈಗ ಚರ್ಚೆಗೆ ಮುಕ್ತವಾಗಿದೆ.

**ಶ್ರೀ ಅನಂತಶಯನಂ ಅಯ್ಯಂಗಾರ್** : 'ಸಾಮಾನ್ಯ' ಎಂಬ ಪದವನ್ನು ಕೈಬಿಟ್ಟಿರುವುದನ್ನು ನಾನು ವಿರೋಧಿಸುತ್ತೇನೆ. ಬ್ರಿಟಿಷ್ ಇಂಡಿಯಾದ ನಿರ್ದಿಷ್ಟ ಭಾಗ ಅಥವಾ ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿದಂತೆ

ಭಾರತೀಯ ದಂಡ ಸಂಹಿತೆಯಲ್ಲಿ ವಿವರಿಸಿದ ಸ್ಥಳೀಯ ಅಥವಾ ವಿಶೇಷ ಕಾಯಿದೆಗೆ ಇದು ವಿರುದ್ಧವಾಗಿದೆ. ಯಾವುದೇ ವಿಶೇಷ ಕಾಯಿದೆಯಡಿಯಾದರೂ ಧಾರ್ಮಿಕ ಸಂಸ್ಥೆಗಳ ಹಕ್ಕುಗಳು ಮತ್ತು ಆಸ್ತಿಯನ್ನು ಹೊಂದಲು ನಿರ್ಬಂಧ ಇರಬಾರದು. ವಿಶೇಷ ಮತ್ತು ಸ್ಥಳೀಯ ಕಾಯಿದೆಗಳಿಗೆ ಸಂಬಂಧಿಸಿದ ವಿವರಣೆಯು ಸಾಮಾನ್ಯ ಖಂಡಗಳ ಕಾಯಿದೆಯಲ್ಲೂ ಇದೆ. ಹೀಗಾಗಿ, ಸಾಮಾನ್ಯ ಎಂಬ ಪದ ಇರಲಿ ಎಂದು ನಾನು ಹೇಳುತ್ತೇನೆ. ಈ ಖಂಡವನ್ನು ರಚಿಸಿದವರು ಅದನ್ನು ಸೇರಿಸಿದ್ದು ಸರಿಯಾದ ಕೆಲಸ ಎನ್ನುವುದು ನನ್ನ ಚಿಂತನೆ

**ಸರ್ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ :** ಸಾಮಾನ್ಯ ಖಂಡಗಳ ಕಾಯಿದೆ ಹಾಗೂ ದಂಡ ಸಂಹಿತೆಗಳು ನಮ್ಮ ಸಂವಿಧಾನದ ವ್ಯಾಖ್ಯಾನಕ್ಕೆ ಅನ್ವಯಿಸುವುದಿಲ್ಲ. ನಮ್ಮ ಸಂವಿಧಾನ ಅಂತಿಮಗೊಂಡ ಬಳಿಕ ಅದರಲ್ಲಿ ವ್ಯಾಖ್ಯಾನ ಖಂಡ ಇರಬೇಕು.

**ಶ್ರೀ ಎಚ್.ವಿ. ಕಾಮತ್ :** ಮಾನ್ಯರೇ, ಶ್ರೀ ಅಲ್ಲಾಡಿ ಅವರು ಹೇಳಿದ್ದು ನನಗೆ ಕೇಳಿಸಲಿಲ್ಲ.

**ಮಾನ್ಯ ಸಭಾಧ್ಯಕ್ಷರು :** ಸಾಮಾನ್ಯ ಖಂಡಗಳ ಕಾಯಿದೆ ಹಾಗೂ ದಂಡ ಸಂಹಿತೆಯು ನಮ್ಮ ಸಂವಿಧಾನಕ್ಕೆ ಅನ್ವಯಿಸುವುದಿಲ್ಲ. ಆದ್ದರಿಂದ ಅವುಗಳಿಗೆ ಪ್ರಾಮುಖ್ಯತೆ ನೀಡಬೇಕಿಲ್ಲ ಎಂಬುದು ಮಾನ್ಯ ಅಲ್ಲಾಡಿ ಅವರ ಅಭಿಪ್ರಾಯ.

**ಶ್ರೀ ಡಿ.ಎನ್. ದತ್ತ** (ಬಂಗಾಳ : ಸಾಮಾನ್ಯ) : 'ಹಾಲಿ ಭಾರತೀಯ ಕಾನೂನು' ಎಂಬ ಪದ ಇದ್ದರೆ, ಸಾಮಾನ್ಯ ಖಂಡಗಳ ಕಾಯಿದೆ ಅನ್ವಯವಾಗಲಿದೆ.

**ಮಾನ್ಯ ಸಭಾಧ್ಯಕ್ಷರು :** ಮಾನ್ಯ ಅಲ್ಲಾಡಿ ಅವರ ಅಭಿಪ್ರಾಯಕ್ಕೆ ಒಪ್ಪದಿರುವ ಸ್ವಾತಂತ್ರ್ಯ ನಿಮಗಿದೆ.

**ಗೌರವಾನ್ವಿತ ಸಿ. ರಾಜಗೋಪಾಲಾಚಾರಿಯರ್ :** ಪದಗಳನ್ನು ಹೇಗೆ ವ್ಯಾಖ್ಯಾನಿಸಬೇಕು ಎಂಬ ಪ್ರಶ್ನೆಯ ಜೊತೆಗೆ, ಧಾರ್ಮಿಕ ಪಂಗಡಗಳಿಗೆ ನೀಡುತ್ತಿರುವ ವಿಶೇಷ ಹಕ್ಕುಗಳು ನಾವು ರೂಪಿಸಲಿರುವ ಎಲ್ಲ ಕಾನೂನುಗಳಿಗೆ ಅನ್ವಯವಾಗುವ ಅಗತ್ಯವಿದೆ. ಆದ್ದರಿಂದ ಅದು 'ಕಾನೂನು' ಎಂದಿರಬೇಕೇ ಹೊರತು, ಕಾನೂನಿನ ಯಾವುದೇ ಒಂದು ಭಾಗ ಎಂದಲ್ಲ.

**ಶ್ರೀ ಅನಂತಶಯನಂ ಅಯ್ಯಂಗಾರ್ :** ನಾವು ಇವನ್ನು ಶಾಸನಗಳ ಪುಸ್ತಕದಲ್ಲಿ ಅಳವಡಿಸಲು ಯತ್ನಿಸುತ್ತಿದ್ದೇವೆ. ಇಂಥ ತಾಂತ್ರಿಕ ಆಕ್ಷೇಪಗಳಿಗೆ ಅರ್ಥವಿದೆಯೇ?

**ಮಾನ್ಯ ಸಭಾಧ್ಯಕ್ಷರು :** ಈ ಅಂಶದ ಬಗ್ಗೆ ಈಗಾಗಲೇ ಚರ್ಚಿಸಲಾಗಿದೆ. ಇನ್ನೇನಾದರೂ ಇದ್ದರೆ, ಅದನ್ನು ಕರಡು ಸಮಿತಿ ಪರಿಶೀಲಿಸಲಿದೆ.

ನಾನು ಈಗ ನಾನಾ ತಿದ್ದುಪಡಿಗಳನ್ನು ಮಂಡಿಸುತ್ತಿದ್ದೇನೆ. ಮೊದಲನೆಯದು, 'ಇಲ್ಲವೇ ವಿಭಾಗ'ದ ನಡುವೆ 'ಪಂಗಡ' ಮತ್ತು 'ಬಹುದು' ಸೇರ್ಪಡೆ ಗೊಳಿಸಬೇಕು. ಖಂಡದ ಈ ಭಾಗ ಹೀಗಿರಲಿದೆ:

'ಎಲ್ಲ ಧಾರ್ಮಿಕ ಪಂಗಡಗಳು ಇಲ್ಲವೇ ಅವುಗಳ ವಿಭಾಗಗಳು ತಮ್ಮ ಕಾರ್ಯಗಳನ್ನು ನಿರ್ವಹಿಸುವ ಹಕ್ಕುಗಳನ್ನು ಹೊಂದಿವೆ' ಇತ್ಯಾದಿ.

ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

ಮಾನ್ಯ ಸಭಾಧ್ಯಕ್ಷರು : ಮುಂದಿನ ತಿದ್ದುಪಡಿಯನ್ನು ಕೈಬಿಡಲಾಗಿದೆ.

ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

ಮಾನ್ಯ ಸಭಾಧ್ಯಕ್ಷರು : ತಿದ್ದುಪಡಿಯಾದ ಖಂಡ ಹೀಗಿರಲಿದೆ;

'ಎಲ್ಲ ಧಾರ್ಮಿಕ ಪಂಗಡಗಳು ಇಲ್ಲವೇ ಅದರ ವಿಭಾಗಗಳು ಧರ್ಮಕ್ಕೆ ಸಂಬಂಧಿಸಿದಂತೆ ತಮ್ಮ ವ್ಯವಹಾರವನ್ನು ನಿರ್ವಹಣೆ ಮಾಡಿಕೊಳ್ಳುವ ಹಕ್ಕು ಹೊಂದಿವೆ ಹಾಗೂ ಕಾನೂನಿಗೆ ಅನುಗುಣವಾಗಿ ಚರ, ಸ್ಥಿರ ಆಸ್ತಿಯನ್ನು ಹೊಂದುವ ಹಾಗೂ ನಿರ್ವಹಿಸುವ ಮತ್ತು ಧಾರ್ಮಿಕ ಇಲ್ಲವೇ ಧರ್ಮಾರ್ಥದ

ಉದ್ದೇಶಕ್ಕಾಗಿ ಸಂಸ್ಥೆಗಳನ್ನು ಸ್ಥಾಪಿಸುವ ಹಾಗೂ ನಿರ್ವಹಿಸುವ ಹಕ್ಕು ಹೊಂದಿವೆ'.

ತಿದ್ದುಪಡಿಗೊಂಡ ಖಂಡವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ತಿದ್ದುಪಡಿಯನ್ನೊಳಗೊಂಡ ೧೪ನೇ ಖಂಡವನ್ನು ಸಭೆ ಅಂಗೀಕರಿಸಿತು.

## ಖಂಡ ೧೫

**ಗೌರವಾನ್ವಿತ ಸರ್ದಾರ್ ವಲ್ಲಭಭಾಯ್ ಪಟೇಲ್** : ೧೫ನೇ ಖಂಡ:

"ನಿರ್ದಿಷ್ಟ ಧರ್ಮ ಇಲ್ಲವೇ ಪಂಗಡದ ಬೆಳವಣಿಗೆಗೆ ಇಲ್ಲವೇ ನಿರ್ವಹಣೆಗೆ ಯಾವುದೇ ವ್ಯಕ್ತಿಯನ್ನು ತೆರಿಗೆ ನೀಡು ಎಂದು ಜುಲುಮೆ ಮಾಡುವಂತಿಲ್ಲ".

ಈ ಖಂಡಕ್ಕೆ ಯಾವುದೇ ತಿದ್ದುಪಡಿ ಇಲ್ಲ. ಹೀಗಾಗಿ, ಸದನದ ಮುಂದೆ ಮಂಡಿಸುತ್ತಿದ್ದೇನೆ.

**ಮಾನ್ಯ ಸಭಾಧ್ಯಕ್ಷರು** : ಖಂಡಕ್ಕೆ ಯಾವುದೇ ತಿದ್ದುಪಡಿಗಳಿಲ್ಲದ ಕಾರಣ, ಅದನ್ನು ಮತಕ್ಕೆ ಹಾಕುತ್ತಿದ್ದೇನೆ.

೧೫ನೇ ಖಂಡವನ್ನು ಅಂಗೀಕರಿಸಲಾಯಿತು.

## ಖಂಡ ೧೬

**ಗೌರವಾನ್ವಿತ ಸರ್ದಾರ್ ವಲ್ಲಭಭಾಯ್ ಪಟೇಲ್** : ೧೬ನೇ ಖಂಡವನ್ನು ಸಲಹಾ ಸಮಿತಿ ಅಂಗೀಕರಿಸಿದೆ. ಆದರೆ, ಇದರಲ್ಲಿ ಕೆಲವು ಕಠಿಣ ಸಮಸ್ಯೆ ಇರುವುದರಿಂದ ಮತ್ತೆ ಸಲಹಾ ಸಮಿತಿಗೆ ಕಳಿಸಬೇಕೆಂದು ಸೂಚಿಸಲಾಗಿದೆ. ಹೀಗಾಗಿ ಪರಿಶೀಲನೆಗೆ ಕಳಿಸಬೇಕು ಎಂದಿದೆ. ಇದಕ್ಕೆ ಸಭೆ ಕೂಡಾ ಸಮ್ಮತಿಸಿರುವುದರಿಂದ, ಖಂಡವನ್ನು ಸಲಹಾ ಸಮಿತಿಗೆ ವಾಪಸ್ ಕಳಿಸಲಾಗುತ್ತಿದೆ.

**ಮಾನ್ಯ ಸಭಾಧ್ಯಕ್ಷರು** : ಹಾಗಾದರೆ, ಅದನ್ನು ಮಂಡಿಸಿ.

**ಗೌರವಾನ್ವಿತ ವಲ್ಲಭಭಾಯ್ ಪಟೇಲ್** : ಔಪಚಾರಿಕವಾಗಿ ಮಂಡಿಸುತ್ತಿದ್ದೇನೆ:

'ಸಾರ್ವಜನಿಕರ ಹಣವನ್ನು ಸ್ವೀಕರಿಸುತ್ತಿರುವ ಇಲ್ಲವೇ ಸಾರ್ವಜನಿಕ ನಿರ್ವಹಣೆಯಲ್ಲಿರುವ ಶಾಲೆಯಲ್ಲಿ ಕಲಿಯುತ್ತಿರುವ ವ್ಯಕ್ತಿಯನ್ನು ಧಾರ್ಮಿಕ ಶಿಕ್ಷಣ ಪಡೆದುಕೊಳ್ಳಬೇಕು ಎಂದು ಅಥವಾ ಶಾಲೆಯಲ್ಲಿ ನಡೆಯುವ ಧಾರ್ಮಿಕ ವಿಧಿಗಳಲ್ಲಿ ಭಾಗವಹಿಸಬೇಕು ಎಂದು ಒತ್ತಾಯ ಮಾಡುವಂತಿಲ್ಲ'.

**ಮಾನ್ಯ ಸಭಾಧ್ಯಕ್ಷರು** : ಸದನದ ಸೂಚನೆ ಮೇರೆಗೆ ಖಂಡವನ್ನು ಸಲಹಾ ಸಮಿತಿಗೆ ವಾಪಸ್ ಮಾಡಲಾಗಿದೆ.

## ಖಂಡ ೧೭

**ಗೌರವಾನ್ವಿತ ಸರ್ದಾರ್ ವಲ್ಲಭಭಾಯ್ ಪಟೇಲ್** : ಮಾನ್ಯರೇ, ೧೭ನೇ ಖಂಡವನ್ನು ಮಂಡಿಸುತ್ತಿದ್ದೇನೆ.

'ಒಂದು ಧರ್ಮದಿಂದ ಇನ್ನೊಂದು ಧರ್ಮಕ್ಕೆ ಬಲವಂತ ಇಲ್ಲವೇ ಆಮಿಷವೊಡ್ಡಿ ನಡೆಸಿದ ಮತಾಂತರವನ್ನು ಕಾನೂನು ಮನ್ನಿಸಬಾರದು'

**ಶ್ರೀ ಕೆ.ಎಂ ಮುನ್ಷಿ** : ಮಾನ್ಯರೇ, ಇದಕ್ಕೆ ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ.

'೧೭ನೇ ಖಂಡವನ್ನು ಕೆಳಕಂಡ ಖಂಡದಿಂದ ಬದಲಿಸಲಾಗುತ್ತದೆ:

'ವಂಚನೆ, ಒತ್ತಾಯ ಇಲ್ಲವೇ ನ್ಯಾಯವಲ್ಲದ ಪ್ರಭಾವ ಬಳಸಿ ಅಥವಾ ೧೮ ವರ್ಷ ಕೆಳಗಿನ ವಯೋಮಾನದ ಅಪ್ರಬುದ್ಧನನ್ನು ಒಂದು ಧರ್ಮದಿಂದ ಇನ್ನೊಂದು ಧರ್ಮಕ್ಕೆ ಮತಾಂತರಗೊಳಿಸುವುದನ್ನು ಕಾನೂನು ಮನ್ನಿಸಬಾರದು'.

'ನ್ಯಾಯವಲ್ಲದ ಒತ್ತಾಯ' ಮತ್ತು 'ಮಿತಿ ಮೀರಿದ ಪ್ರಭಾವ' ಪದಗಳ ಜತೆಗೆ 'ವಂಚನೆ'ಯನ್ನು

ಸೇರ್ಪಡೆಗೊಳಿಸಲಾಗಿದೆ. ಇನ್ನೊಂದು ಪ್ರಾಯಕ್ಕೆ ಬಾರದವರ ಮತಾಂತರಕ್ಕೆ ಸಂಬಂಧಿಸಿದ ಪದಗಳು. ವಾಸ್ತವವೆಂದರೆ, ಬೇರೆ ಸಮಿತಿಯೊಂದು ಇದನ್ನು ಇನ್ನೊಂದು ಇಲ್ಲವೇ ಬೇರೆ ರೂಪದಲ್ಲಿ ಪ್ರಸ್ತಾಪಿಸಿತ್ತು. ಈ ಖಂಡವನ್ನು ಈ ರೂಪದಲ್ಲಿ ಇರಿಸಬೇಕೆಂಬ ಸಾಮಾನ್ಯ ಭಾವನೆ ಇದ್ದುದರಿಂದ, ೧೮ ವರ್ಷಕ್ಕಿಂತ ಕಡಿಮೆ ವಯಸ್ಸಿನ ಅಪ್ರಬುದ್ಧರ ಮತಾಂತರವನ್ನು ಕಾನೂನು ಮನ್ನಿಸಬಾರದು ಎಂದು ಉಳಿಸಲಾಯಿತು. ಒಂದೊಮ್ಮೆ ವಂಚನೆ, ಮಿತಿಮಿರಿದ ಒತ್ತಡ ಇಲ್ಲವೇ ಪ್ರಭಾವ ಬೀರಿ, ವಯಸ್ಕನಲ್ಲದವನನ್ನು ಬೇರೆ ಧರ್ಮಕ್ಕೆ ಮತಾಂತರಗೊಳಿಸಿದರೆ, ಕಾನೂನಿನ ಪ್ರಕಾರ ಆತ ಹಳೆಯ ಧರ್ಮದಲ್ಲೇ ಇರುತ್ತಾನೆ ಹಾಗೂ ಆತನ ಶಾಸನಬದ್ಧ ಹಕ್ಕುಗಳಿಗೆ ಮತಾಂತರದಿಂದ ಧಕ್ಕೆ ಉಂಟಾಗುವುದಿಲ್ಲ. ಈ ಪ್ರಸ್ತಾವದ ಹಿಂದಿನ ಉದ್ದೇಶವೆಂದರೆ, ಪ್ರಬುದ್ಧಾವಸ್ಥೆ ತಲುಪದವರನ್ನು ವಂಚನೆ ಇಲ್ಲವೇ ನ್ಯಾಯವಲ್ಲದ ಒತ್ತಡ ಬಳಸಿ ಮತಾಂತರಗೊಳಿಸಿದಾಗ ಅವರ ಶಾಸನಬದ್ಧ ಸ್ಥಾನಮಾನದಲ್ಲಿ ಕೆಲವು ಬದಲಾವಣೆ ಆಗುತ್ತದೆ, ಕೆಲವು ಹಕ್ಕುಗಳ ಹರಣ ಆಗುತ್ತದೆ. ಮತಾಂತರದಿಂದ ಹಕ್ಕುಗಳಿಗೆ ಧಕ್ಕೆ ಉಂಟಾಗುವುದನ್ನು ತಡೆಯುವುದು ಇದರ ಉದ್ದೇಶ.

**ಶ್ರೀಜುತ್ ರೋಹಿಣಿ ಕುಮಾರ್ ಚೌಧರಿ** (ಅಸ್ಸಾಂ : ಸಾಮಾನ್ಯ) : 'ಮಿತಿಮೀರಿದ ಪ್ರಭಾವ' ಎಂದರೇನು ಎಂದು ವಿವರಿಸುವಿರಾ? ಗುತ್ತಿಗೆ ಕಾಯ್ದೆಯಲ್ಲಿ ಬಳಸಿದಂತೆ ಅಥವಾ ಸಾಮಾನ್ಯ ಅರ್ಥದಲ್ಲಿ ಅದನ್ನು ಬಳಸಲಾಗಿದೆಯೇ?

**ಶ್ರೀ ಕೆ.ಎಂ. ಮುನ್ಷಿ** : ಅದನ್ನು ವಿವರಿಸುವುದು ಕಷ್ಟ. ಆದರೆ, ವಂಚನೆ ಜಗತ್ತಿನ ಯಾವ ಭಾಗದಲ್ಲಿ ನಡೆದರೂ ಮತ್ತು ಎಲ್ಲ ನ್ಯಾಯಶಾಸ್ತ್ರದಡಿಯೂ ಅದು ವಂಚನೆಯೇ. ಜುಲುಮೆ ಹಾಗೂ ಮಿತಿಮೀರಿದ ಪ್ರಭಾವ ಎಂಬ ಪದಗಳ ನಡುವೆ ಭಾರತ ಮತ್ತು ಇತರ ದೇಶಗಳಲ್ಲಿ ಹೆಚ್ಚೇನೂ ವ್ಯತ್ಯಾಸವಿಲ್ಲ. ಕೆಲ ಮಟ್ಟಿನ ವ್ಯತ್ಯಾಸವಿದ್ದು, ಸ್ವತಂತ್ರ ಭಾರತ ಈ ಪದಗಳಿಗೆ ತನ್ನದೇ ಆದ ವಿವರಣೆಗಳನ್ನು ಕಂಡುಕೊಳ್ಳಲಿದೆ. ಆಕ್ಸ್‌ಫರ್ಡ್ ಪದಕೋಶದಲ್ಲಿರುವ ಅರ್ಥವಿವರಣೆಗೆ ಅನುಗುಣವಾಗಿರಲಿದೆ.

**ಶ್ರೀ ಫೂಲ್‌ಸಿಂಗ್** (ಯುಪಿ : ಸಾಮಾನ್ಯ) : ಶ್ರೀ ಮುನ್ಷಿಯವರು ಮಂಡಿಸಿದ ತಿದ್ದುಪಡಿಯ ಮಂಡನೆ ಬಳಿಕ, ನನ್ನ ತಿದ್ದುಪಡಿ ಬೇಕಿಲ್ಲ. ಆದರೆ ಒಂದು ಸಲಹೆ. ಮಾನ್ಯರೇ, ಬಲವಂತದ ಮತಾಂತರವು ಶಿಕ್ಷಾರ್ಹ ಅಪರಾಧ ಆಗಬೇಕು. ಇದಕ್ಕಾಗಿ ತಿದ್ದುಪಡಿಯೊಂದನ್ನು ಅವರು ಮಂಡಿಸಬೇಕು ಎಂಬುದು ನನ್ನ ಸಲಹೆ.

**ಗೌರವಾನ್ವಿತ ಜಗಜೀವನರಾಮ್** : ನಾನು ನನ್ನ ತಿದ್ದುಪಡಿ(ಪೂರಕ ಪಟ್ಟಿ ೨ರ ೭೨ನೇ ತಿದ್ದುಪಡಿ)ಯನ್ನು ಮಂಡಿಸುತ್ತಿಲ್ಲ.

**ಮಾನ್ಯ ಸಭಾಧ್ಯಕ್ಷರು** : ಪೂರಕ ಪಟ್ಟಿ ೨ರ ೭೩ನೇ ತಿದ್ದುಪಡಿ.

**ಶ್ರೀ ಆರ್.ಕೆ. ಸಿಧ್ವಾ** : ಇದು ಹೊಸ ಖಂಡ. ಇದನ್ನು ಬಳಿಕ ತೆಗೆದುಕೊಳ್ಳಬಹುದು.

**ಶ್ರೀ ಎಫ್.ಆರ್. ಆಂಥನಿ** (ಬಂಗಾಳ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೇ, ನನ್ನ ತಿದ್ದುಪಡಿಯು 'ಇಲ್ಲವೇ ೧೮ ವರ್ಷ ಕೆಳಗಿನ ಅಪ್ರಬುದ್ಧ' ಎಂಬ ಶ್ರೀ ಮುನ್ಷಿಯವರ ತಿದ್ದುಪಡಿಗೆ ಸಂಬಂಧಿಸಿದ್ದು. ಖಂಡದ ಈ ಭಾಗಕ್ಕೆ 'ಒಂದು ವೇಳೆ ಪೋಷಕರು ಇಲ್ಲವೇ ಉಳಿದ ಪೋಷಕರು ಮತಾಂತರ ಹೊಂದಿದ್ದರೆ ಹಾಗೂ ಮಗು ತನ್ನ ಮೂಲಧರ್ಮಕ್ಕೆ ಅಂಟಿಕೊಳ್ಳಲು ಇಚ್ಛಿಸದಿದ್ದರೆ' ಎಂದು ಸೇರ್ಪಡೆಗೊಳಿಸಬೇಕು ಎಂಬುದು ಅಭಿಪ್ರಾಯ. ಅಲ್ಪಸಂಖ್ಯಾತರ ಉಪ ಸಮಿ ತಿಯು ಇಂಥದ್ದನ್ನು ಹೆಚ್ಚು ಕಡಿಮೆ ಅಂಗೀಕರಿಸಿದೆ. ಈ ಬಗ್ಗೆ ನಾವು ದೀರ್ಘ ಚರ್ಚೆ ನಡೆಸಿದ್ದು ಮತ್ತು ಈ ರೂಪದಲ್ಲಿ ಇದರಿಂದ ಸಂಬಂಧಿಸಿದವರ ಹಿತಾಸಕ್ತಿ ರಕ್ಷಣೆಯಾಗಲಿದೆ.

ಒತ್ತಾಯ, ವಂಚನೆ, ಜುಲುಮೆಯಿಂದ ನಡೆಸಿದ ಮತಾಂತರವನ್ನು ಕಾನೂನು ಪರಿಗಣಿಸಬಾರದು

ಎಂಬುದನ್ನು ನಾನು ಒಪ್ಪುತ್ತೇನೆ. ಮಾನ್ಯರೇ, ನಾನು ಈ ಪ್ರಶ್ನೆ ಬಗೆಗೆ ತಾತ್ತ್ವಿಕ ಆಸಕ್ತಿ ಹೊಂದಿದ್ದೇನೆ. ನನ್ನ ಸಮುದಾಯ ಧರ್ಮಪ್ರಚಾರ ನಡೆಸುವುದಿಲ್ಲ, ಮತಾಂತರ ಮಾಡುವುದಿಲ್ಲ ಇಲ್ಲವೇ ಮತಾಂತರ ಹೊಂದುವುದಿಲ್ಲ. ಆದರೆ, ಲಕ್ಷಾಂತರ ಕ್ರಿಶ್ಚಿಯನ್ನರು ಮತಧರ್ಮ ಪ್ರಚಾರದ ಹಕ್ಕು ತಮಗಿದೆ ಎಂದು ಆಳವಾಗಿ, ಭಾವನಾತ್ಮಕವಾಗಿ ನಂಬಿದ್ದಾರೆ. 'ಧರ್ಮಾಚರಣೆ ಮತ್ತು ಧರ್ಮಪ್ರಚಾರ' ಎಂಬ ವಾಕ್ಯ ವಿವಾದಾತ್ಮಕವಾಗಿದ್ದರೂ, ಉಳಿಸಿಕೊಂಡಿರುವುದು ಪ್ರಶಂಸಾರ್ಹ. ಕ್ರಿಶ್ಚಿಯನ್ನರ ಮೂಲಭೂತ ಹಕ್ಕು ಎನ್ನಲಾದ ಮತಾಂತರವನ್ನು ಒಂದು ಕೈಯಿಂದ ನೀಡಿ, 'ಅಥವಾ ೧೮ ವರ್ಷಕ್ಕಿಂತ ಕೆಳಗಿನ ಅಪ್ರಬುದ್ಧ' ಎಂಬ ಪ್ರಸ್ತಾವದ ಮೂಲಕ ಕಿತ್ತುಕೊಳ್ಳಲಾಗಿದೆ. ಈ ನಿರ್ದಿಷ್ಟ ಪ್ರಸ್ತಾವದ ಮೂಲಕ ಇಲ್ಲವೇ ಅಪ್ರಬುದ್ಧರ ಮೇಲೆ ಮತಾಂತರದ ಮೇಲೆ ನಿಷೇಧ ಹೇರಿದರೆ, ಮತಾಂತರದ ಹಕ್ಕಿನ ಮೇಲೆಯೇ ನಿಷೇಧ ಹೇರಿದಂತೆ ಆಗಲಿದೆ. ಏಕೆಂದರೆ, ಮಕ್ಕಳಿರುವ ಯಾವ ಪ್ರಬುದ್ಧರೂ, ಅವರು ಎಷ್ಟೇ ಭಾವನಾತ್ಮಕವಾಗಿ, ತೀವ್ರವಾಗಿ ನಂಬಿಕೊಂಡಿದ್ದರೂ, ಕ್ರಿಶ್ಚಿಯನ್ ಧರ್ಮವನ್ನು ಸ್ವೀಕರಿಸುವುದಿಲ್ಲ. ಏಕೆಂದರೆ, ಈ ಖಂಡವು ಪೋಷಕರಿಂದ ಮಕ್ಕಳನ್ನು ಕಡಿದು ಹಾಕುತ್ತದೆ. ಜೊತೆಗೆ ಮತಾಂತರಗೊಂಡ ಪೋಷಕರು ತಮ್ಮ ಮಕ್ಕಳನ್ನು ತಮ್ಮದೇ ಧರ್ಮದಲ್ಲಿ ಬೆಳೆಸದಂತೆ ಮಾಡಲಿದೆ. ಇದರಿಂದ ಕುಟುಂಬ ಜೀವನದ ಬೇರನ್ನೇ ಕತ್ತರಿಸಿದಂತೆ ಆಗಲಿದೆ. ಇದು ಸಹಜ ತತ್ತ್ವಗಳಾದ ಸ್ವಾಭಾವಿಕ ನ್ಯಾಯ ಮತ್ತು ಕಾನೂನಿಗೆ ವಿರುದ್ಧವಾದುದು. ಮತಾಂತರ ಹಾಗೂ ಮತಪ್ರಚಾರದ ಬಗ್ಗೆ ನಿಮಗೆ ಒಳ್ಳೆಯ ಅಭಿಪ್ರಾಯ ಇಲ್ಲದೆ ಇರಬಹುದು. ಆದರೆ, ಅದಕ್ಕೆ ಈಗಾಗಲೇ ಅನುಮತಿ ನೀಡಿರುವುದರಿಂದ, ಕುಟುಂಬದ ಬುನಾದಿಯನ್ನು ಕತ್ತರಿಸಬೇಡಿ ಎಂದು ಬೇಡಿಕೊಳ್ಳುತ್ತೇನೆ. ತಮಗೆ ನಂಬಿಕೆ ಇರುವ ಧರ್ಮದಲ್ಲಿ ಮಕ್ಕಳನ್ನು ಬೆಳೆಸುವ ಪೋಷಕರ ಹಕ್ಕನ್ನು ಜಗತ್ತಿನೆಲ್ಲೆಡೆ ಮನ್ನಿಸಲಾಗಿದೆ. ನೀವು ಅಗತ್ಯವೆನಿಸಿದ ರಕ್ಷಣೋಪಾಯ ವಿಧಿಸಿ. ವಂಚನೆ,ನ್ಯಾಯವಲ್ಲದ ಒತ್ತಡ, ಪ್ರಭಾವ ಬೀರಿ ಮತಾಂತರ ಮಾಡುವುದನ್ನು ಕಾನೂನು ಮನ್ನಿಸುವುದಿಲ್ಲ ಎಂದಿದ್ದೀರಿ. ನಾನು ಇನ್ನೂ ಮುಂದೆ ಹೋಗಿ ಹಾಗೂ ಜಗತ್ತಿನ ಬೇರೆ ರಾಷ್ಟ್ರಗಳಲ್ಲಿ ಇಲ್ಲದೆ,ಮಗು ಪ್ರಬುದ್ಧ ವಯಸ್ಸು ತಲುಪುವವರೆಗೆ ತನ್ನ ಧರ್ಮದಲ್ಲೇ ಇರಲಿ ಎನ್ನುತ್ತೇನೆ. 'ಮಗು ತನ್ನ ಮೂಲ ಧರ್ಮವನ್ನು ಅನುಸರಿಸಲು ಒಪ್ಪಿಕೊಳ್ಳದಿದ್ದಲ್ಲಿ' ಎಂಬ ವಾಕ್ಯವಿದೆ. ಪೋಷಕರಿಬ್ಬರೂ ಮತಾಂತರಗೊಂಡಿದ್ದು, ಅವರು ತಮ್ಮ ಮಗುವನ್ನು ಕ್ರಿಶ್ಚಿಯನ್ ಧರ್ಮದಲ್ಲಿ ಬೆಳೆಸಬೇಕೆಂದು ನಿರ್ಧರಿಸಿದ್ದರೆ, ಒಂದು ವೇಳೆ ಮಕ್ಕಳು ಪ್ರಬುದ್ಧರಾದ ಬಳಿಕ ಪೋಷಕರು ಮತಾಂತರಗೊಂಡಿದ್ದರೂ, ತಾವು ಕ್ರಿಶ್ಚಿಯನ್ ಧರ್ಮದಲ್ಲಿ ಬೆಳೆಯಬಾರದೆಂದು ನಿರ್ಧರಿಸಿದಲ್ಲಿ ಅವರನ್ನು ಆ ಧರ್ಮದಡಿ ಬೆಳೆಸಬಾರದು ಎಂಬ ನಿರ್ಬಂಧವನ್ನು ನಾನು ಪರಿಚಯಿಸಿದ್ದೇನೆ.

'ಬದುಕಿರುವ ಪೋಷಕ' ಎಂಬ ಪದವನ್ನೂ ಸೇರಿಸಿದ್ದೇನೆ. ಈ ಕಾರಣದಿಂದಾಗಿ, ಒಂದು ವೇಳೆ ಇಬ್ಬರು ಪೋಷಕರ ಮೇಲೆಯೂ ನಿರ್ಬಂಧ ಹೇರಿದರೆ ಏನಾಗಬಹುದು? ಉದಾಹರಣೆಗೆ, ವಿಧವೆಯೊಬ್ಬಳು ಮತಾಂತರಗೊಂಡು, ತನ್ನ ಮಕ್ಕಳನ್ನು ಕ್ರಿಶ್ಚಿಯನ್ ಧರ್ಮದಲ್ಲಿ ಬೆಳೆಸಲು ಬಯಸಿದ್ದರೆ ಹಾಗೂ ಆ ಮಕ್ಕಳು ಕೂಡಾ ಅದೇ ಧರ್ಮದಲ್ಲಿ ಬೆಳೆಯಬೇಕೆಂದಿದ್ದರೆ, ಅದರ ಮೇಲೆ ನೀವು ನಿರ್ಬಂಧ ಹೇರುವಿರಾ? 'ಬದುಕಿರುವ ಪೋಷಕ' ಎಂಬ ಪದವನ್ನು ಬಳಸದೆ ಇದ್ದರೆ, ಒಂದು ವೇಳೆ ವಿಧುರ ತಂದೆ ಕ್ರಿಶ್ಚಿಯನ್ ಧರ್ಮವನ್ನು ಅಂಗೀಕರಿಸಿ, ತನ್ನ ಮಕ್ಕಳನ್ನು ಅದೇ ಧರ್ಮದಲ್ಲಿ ಬೆಳೆಸಲು ಇಚ್ಛಿಸಿದರೆ, ಒಂದು ವೇಳೆ ಇಬ್ಬರು ಪೋಷಕರೂ ಜೀವಂತವಾಗಿ ಇಲ್ಲದಿದ್ದರೆ, ಆಗ ಆತ ಮಕ್ಕಳನ್ನು ತನ್ನ ಧರ್ಮದಲ್ಲಿ ಬೆಳೆಸಲು ಆಗುವುದಿಲ್ಲ. ಆತ ಮಕ್ಕಳಿಂದ ದೂರವಾಗುತ್ತಾನೆ.

ಮತಾಂತರದ ಬಗ್ಗೆ ಸದನದಲ್ಲಿರುವ ಕೆಲವರಲ್ಲಿ ತೀವ್ರ ಭಾವನೆಗಳಿವೆ ಎಂದು ಬಲ್ಲೆ. ಆದರೆ,ನಾನು ನಿಮ್ಮನ್ನು ಕೇಳುತ್ತೇನೆ, ಮತಪ್ರಚಾರದ ಹಕ್ಕು ಕೊಟ್ಟ ಬಳಿಕ ಕೌಟುಂಬಿಕ ನ್ಯಾಯ ಮತ್ತು ಸ್ವಾಭಾವಿಕ ನ್ಯಾಯ ಮತ್ತು ಕಾನೂನಿಗೆ ಅನುಗುಣವಾಗಿ ಅದನ್ನು ಒಪ್ಪಿಕೊಳ್ಳಬೇಕು.

**ಶ್ರೀ ಪಿ.ಆರ್. ಠಾಕೂರ್ :** ನಾನು ಅಸ್ಪೃಶ್ಯ ವರ್ಗಕ್ಕೆ ಸೇರಿದವನು. ನನ್ನ ಸಮುದಾಯಕ್ಕೆ ಮೂಲಭೂತ

ಹಕ್ಕುಗಳಿಗೆ ಸಂಬಂಧಿಸಿದ ಈ ಖಂಡ ತುಂಬ ಮುಖ್ಯವಾದುದು. ನಿಮಗೆ ಗೊತ್ತಿರುವಂತೆ, ಮತಾಂತರಗೊಳ್ಳುವವರಲ್ಲಿ ಹೆಚ್ಚಿನವರು ದಲಿತ ವರ್ಗಕ್ಕೆ ಸೇರಿದವರು. ಬೇರೆ ಧರ್ಮಗಳ ಪ್ರಚಾರಕರು ದಲಿತ ವರ್ಗದವರ ಅರಿವಿನ ಕೊರತೆಯನ್ನು ಬಳಸಿಕೊಂಡು, ನಾನಾ ಆಮಿಷಗಳನ್ನು ಒಡ್ಡಿ ಅವರನ್ನು ಮತಾಂತರಗೊಳಿಸುತ್ತಾರೆ. ನಾನು ಶ್ರೀ ಮುನ್ಷಿ ಅವರಿಂದ ಇವೆಲ್ಲವೂ 'ವಂಚನೆ' ಎಂಬುದರಲ್ಲಿ ಸೇರಿದೆಯೇ ಎಂದು ತಿಳಿಯಲು ಇಚ್ಛಿಸುತ್ತೇನೆ. ಇಲ್ಲ ಎಂದಾದಲ್ಲಿ ಈ ಖಂಡವನ್ನು ಮುನ್ಷಿಯವರು ಮತ್ತೆ ತಿದ್ದಿ,ಇಂಥ ವಂಚನೆಯನ್ನು ಅಸ್ಪೃಶ್ಯ ವರ್ಗದವರ ಮೇಲೆ ಆಚರಿಸದಂತೆ ಮಾಡಬೇಕು ಎಂದು ಕೇಳುತ್ತೇನೆ. ಇದನ್ನೆಲ್ಲ ನಾನು 'ವಂಚನೆ' ಎಂದು ಹೇಳುತ್ತೇನೆ.

**ಗೌರವಾನ್ವಿತ ರೆವರೆಂಡ್ ಜೆ.ಆರ್.ಎಂ. ನಿಕೊಲಸ್ ರಾಯ್** (ಅಸ್ಸಾಂ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೇ, ಸಲಹಾ ಸಮಿತಿಯಿಂದ ಬಂದಿರುವ ಖಂಡ ಸೂಕ್ತವಾಗಿದ್ದು, ಅದಕ್ಕೆ ಯಾವುದೇ ತಿದ್ದುಪಡಿ ಅಗತ್ಯವಿಲ್ಲ ಎಂದು ನನಗೆ ಅನಿಸುತ್ತದೆ. ೧೨ ಅಥವಾ ೧೩ ವರ್ಷದ ಬಾಲಕ ೧೮ ವರ್ಷ ಆಗುವವರೆಗೆ ತನ್ನ ಆತ್ಮಸಾಕ್ಷಿಯನ್ನು ಬಳಸಿಕೊಳ್ಳುವುದನ್ನು ತಿದ್ದುಪಡಿ ತಡೆಯುತ್ತದೆ. ಕಾನೂನಿನ ಪ್ರಕಾರ ಆ ವಯೋಸಮಿತಿ ಸರಿ ಇರಬಹುದು. ಆದರೆ, ೧೮ ವರ್ಷದೊಳಗಿನವನು ದೇವರ ಮುಂದೆ ತನ್ನ ಆತ್ಮಸಾಕ್ಷಿಯನ್ನು ಮತ್ತು ನಂಬಿಕೆಯನ್ನು ವ್ಯಕ್ತಪಡಿಸಲಾರ ಎಂಬುದು ತಪ್ಪು. ಪ್ರಶ್ನೆಯ ಈ ಭಾಗವನ್ನು ಸೂಕ್ತವಾಗಿ ಪರಿಗಣಿಸಬೇಕು. ಮತಾಂತರಕ್ಕೆ ಅಧ್ಯಾತ್ಮಿಕ ಆಯಾಮವಿದ್ದು, ಅದನ್ನು ಸದನ ಪರಿಗಣಿಸಬೇಕು. ಮತಾಂತರ ಎಂದರೆ ವ್ಯಕ್ತಿಯೊಬ್ಬ ತನ್ನ ಧರ್ಮವನ್ನು ಬದಲಿಸಿ ಬೇರೊಂದು ಧರ್ಮಕ್ಕೆ ಸೇರುವುದು ಎಂದಷ್ಟೇ ಅಲ್ಲ ಅಥವಾ ಬೇರೊಂದು ಧರ್ಮದ ಹೆಸರು ಹೊಂದುವುದಷ್ಟೇ ಅಲ್ಲ. ಮತಾಂತರಕ್ಕೆ ಅಧ್ಯಾತ್ಮಿಕ ಆಯಾಮವೂ ಇದೆ, ಅಂದರೆ ಮನುಷ್ಯನ ಆತ್ಮವು ದೇವರೊಂದಿಗಿನ ಸಂಪರ್ಕಕ್ಕೆ ಅದು ಸಂಬಂಧಿಸಿದ್ದು, ಸದನ ಅದನ್ನು ಪರಿಗಣಿಸಿಲ್ಲ. ವಸ್ತುಗಳ ಆಸೆಯಿಂದ ಮತಾಂತರ ಹೊಂದುವವರು ಇದ್ದಾರೆ ಎನ್ನುವುದು ನನಗೆ ಗೊತ್ತಿದೆ. ಆದರೆ, ಇನ್ನು ಕೆಲವರು ಅಧ್ಯಾತ್ಮಿಕ ಶಕ್ತಿಯ ಪ್ರಭಾವದಿಂದ ಮತಾಂತರಗೊಳ್ಳುತ್ತಾರೆ.

ಬಾಲಕನೊಬ್ಬ ತಾನು ಬೇರೆ ಧರ್ಮಕ್ಕೆ ಸೇರಬೇಕೆಂದು ದೇವರು ಇಚ್ಛಿಸಿದ್ದಾನೆ ಎಂದುಕೊಂಡಲ್ಲಿ, ಅವನನ್ನು ಯಾವುದೇ ಕಾನೂನು ತಡೆಯಲಾರದು. ಅಧ್ಯಾತ್ಮಿಕ ದೃಷ್ಟಿಕೋನದಿಂದ ತಮ್ಮ ಧರ್ಮವನ್ನು ಬದಲಿಸಿಕೊಳ್ಳಬೇಕು ಹಾಗೂ ಬೇರೆ ಧರ್ಮವನ್ನು ಅನುಸರಿಸಬೇಕು ಎನ್ನುವ ಯುವಜನರನ್ನು ತಡೆಯಬಾರದು ಹಾಗೂ ಅವರು ತಮ್ಮ ಶಾಸನಾತ್ಮಕ ಸ್ಥಾನಮಾನ ಮತ್ತು ಧರ್ಮವನ್ನು ಬದಲಿಸಿಕೊಳ್ಳುವುದನ್ನು ತಡೆಯಬಾರದು. ಮಾನ್ಯರೇ, ತಮಗೆ ಗೊತ್ತಿದೆ, ಕ್ರಿಶ್ಚಿಯಾನಿಟಿಯ ಇತಿಹಾಸದಲ್ಲಿ ಮತಾಂತರಗೊಂಡ ಯುವಕರು ತಮ್ಮ ನಂಬಿಕೆಗಾಗಿ ಸಾಯಲು ಹಾಗೂ ಎಲ್ಲವನ್ನೂ ಕಳೆದುಕೊಳ್ಳಲು ಸಿದ್ಧವಿದ್ದುದನ್ನು ನಾವು ಕಂಡಿದ್ದೇವೆ. ದೇವರು ನನ್ನನ್ನು ಕರೆಯುತ್ತಿದ್ದುದನ್ನು ಕೇಳಿಸಿಕೊಂಡು, ೧೫ ವರ್ಷ ವಯಸ್ಸಿನಲ್ಲಿ ನಾನು ಮತಾಂತರಗೊಂಡೆ. ಜೀವ ಸೇರಿದಂತೆ ಎಲ್ಲವನ್ನೂ ಕಳೆದುಕೊಳ್ಳಲು ಸಿದ್ಧವಾದೆ. ದೇವರ ಕರೆಯನ್ನು ಆಲಿಸಿ, ಧರ್ಮವನ್ನು ಬದಲಿಸಿಕೊಂಡು ಬೇರೆ ಹೆಸರಿನಿಂದ ಕರೆಸಿಕೊಳ್ಳಬೇಕು ಎನ್ನು ವವರನ್ನು ಕಾನೂನು ಏಕೆ ತಡೆಯಬೇಕು? ನನ್ನ ಆತ್ಮದಲ್ಲಿರುವ ದೇವರ ಕರೆಯನ್ನು ಆಲಿಸಿ ಅದನ್ನು ಹಿಂಬಾಲಿಸಲು ಏನು ಕಳೆದುಕೊಳ್ಳಲೂ ಸಿದ್ಧನಿದ್ದೆ. ದೇವರ ಕರೆಯನ್ನು ಆಲಿಸಿ, ತಮ್ಮ ಧರ್ಮವನ್ನು ಬದಲಿಸಿಕೊಂಡು ಬೇರೆ ಹೆಸರಿನಲ್ಲಿ ಕರೆಸಿ ಕೊಳ್ಳುವವರನ್ನು, ತಾನು ದೇವರ ಚೈತನ್ಯದಿಂದ ಉತ್ತೇಜಿತನಾಗಿದ್ದು, ಜೀವ ಕೊಡಲೂ ಸಿದ್ಧವಿದ್ದೇನೆ ಎನ್ನುವ ಯುವಜನರನ್ನು ಏಕೆ ತಡೆಯಬೇಕು? ಬಾಲಕರ ಮತಾಂತರ ಕುರಿತ ತಿದ್ದುಪಡಿಯ ಭಾಗ ಸಂಪೂರ್ಣ ತಪ್ಪು. ತಮ್ಮ ಆತ್ಮಸಾಕ್ಷಿಯನ್ನು ಪಾಲಿಸಬೇಕೆಂದಿರುವ ೧೨ರಿಂದ ೧೮ವರ್ಷ ವಯಸ್ಸಿನ ಯುವಜನರ ಹಕ್ಕಿಗೆ ತಿದ್ದುಪಡಿ ತಡೆಯೊಡ್ಡುತ್ತದೆ.ದೇವರ ಎದುರು ತಮ್ಮ ಧಾರ್ಮಿಕ ನಂಬಿಕೆಗಳನ್ನು ಆಚರಿಸಬೇಕು ಎನ್ನುವ ಯುವಜನರ ಆತ್ಮಸಾಕ್ಷಿಯನ್ನು ಹತ್ತಿಕ್ಕುತ್ತದೆ. ಹೀಗಾಗಿ, ನಾನು ಈ ತಿದ್ದುಪಡಿಯನ್ನು ವಿರೋಧಿಸುತ್ತೇನೆ. ಶ್ರೀ ಆಂಥನಿ

ಅವರು ಮತಾಂತರಗೊಂಡ ಪೋಷಕರ ಮಕ್ಕಳ ಶಾಸನಾತ್ಮಕ ಹಾಗೂ ಇತರ ಹಕ್ಕುಗಳ ಬಗ್ಗೆ ಚರ್ಚಿಸಿದ್ದಾರೆ. ಪ್ರಬುದ್ಧರಲ್ಲದ ಮಕ್ಕಳಿಗೆ ತಮ್ಮ ನಂಬಿಕೆಯನ್ನು ಅನುಸರಿಸಲು ಬಿಡಬೇಕು ಹಾಗೂ ಅವರ ನಂಬಿಕೆಯ ವಿರುದ್ಧದ ಕೆಲಸ ಮಾಡುವಂತೆ ಬಲವಂತ ಮಾಡಬಾರದು. ಕಾನೂನು ಮತ್ತು ಧರ್ಮ ಬದಲಾವಣೆಯ ಹಕ್ಕನ್ನು ಏಕೆ ಕಿತ್ತುಕೊಳ್ಳ ಬೇಕು? ಅವರ ಆತ್ಮ ಸಾಕ್ಷಿಯನ್ನು ಏಕೆ ಹತ್ತಿಕ್ಕಬೇಕು? ಇದು ಒಂದು ಬಹಳ ಮುಖ್ಯವಾದ ಅಂಶ.

ಮಾನ್ಯರೇ, ಸದನ ಇದನ್ನು ಪರಿಗಣಿಸಬೇಕು. ಇದು ಯುವಜನರ ಮೂಲಭೂತ ಹಕ್ಕು. ಭಾರತ ನಾನಾ ಧರ್ಮಗಳ ದೇಶ, ಧಾರ್ಮಿಕ ಸ್ವಾತಂತ್ರ್ಯ ಇರುವ ದೇಶ. ಧಾರ್ಮಿಕ ಸ್ವಾತಂತ್ರ್ಯದ ವಿರುದ್ಧ ಕಾನೂನುಗಳನ್ನು ಮಾಡಬಾರದು. ಒಂದು ವೇಳೆ ಈ ತಿದ್ದುಪಡಿಯನ್ನು ಸದನ ಅಂಗಿಕರಿಸಿದಲ್ಲಿ, ನಿಜವಾದ ಧಾರ್ಮಿಕ ಸ್ವಾತಂತ್ರ್ಯ ಎಂಬುದು ಇಲ್ಲವಾಗುತ್ತದೆ. ಯುವಜನರು ತಮ್ಮ ಧಾರ್ಮಿಕ ನಂಬಿಕೆಯನ್ನು ಆಚರಿಸುವುದನ್ನು ತಡೆಯುವ ಈ ತಪ್ಪು ತತ್ತ್ವಕ್ಕೆ ನನ್ನ ವಿರೋಧವಿದೆ. ಮಾನ್ಯರೇ, ನನ್ನ ಸಲಹೆ ಏನೆಂದರೆ, ಆಂಥನಿ ಅವರು ಮಂಡಿಸಿದ ತಿದ್ದುಪಡಿಯಲ್ಲಿ, 'ಬಾಲಕ ತನ್ನ ಧರ್ಮವನ್ನು ಬದಲಿಸಬೇಕೆಂದು ಸ್ವಇಚ್ಛೆಯಿಂದ ಮುಂದಾದಲ್ಲಿ' ಎಂಬುದನ್ನು ಸೇರ್ಪಡೆಗೊಳಿಸಿದರೆ ತಿದ್ದುಪಡಿಗೆ ನನ್ನ ಆಕ್ಷೇಪ ಇರುವುದಿಲ್ಲ. ಬಲವಂತ, ಆಮಿಷ ಇಲ್ಲವೇ ವಂಚನೆ ಮೂಲಕ ಮಾಡುವ ಮತಾಂತರವನ್ನು ನಾನು ಬೆಂಬಲಿಸುವುದಿಲ್ಲ. ಈ ಕೆಡುಕುಗಳ ನಿವಾರಣೆಗೆ ರೂಪಿಸುವ ಕಾನೂನು, ಯುವಜನರ ಧಾರ್ಮಿಕ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳಬಾರದು ಎಂಬುದು ನನ್ನ ನಿಲುವು.

**ಗೌರವಾನ್ವಿತ ಪುರುಷೋತ್ತಮ ದಾಸ್ ಟಂಡನ್** (ಯುಪಿ : ಸಾಮಾನ್ಯ) : *[ಮಾನ್ಯ ಸಭಾಧ್ಯಕ್ಷರೇ, ಕ್ರಿಶ್ಚಿಯನ್ ಸಹೋದರರು ಮಾಡಿದ ಭಾಷಣದಿಂದ ನಾನು ಆಶ್ಚರ್ಯಚಕಿತನಾಗಿದ್ದೇನೆ. ಮತಾಂತರ ಹಾಗೂ ಧರ್ಮ ಪ್ರಚಾರದ ಹಕ್ಕನ್ನು ನಾವೆಲ್ಲರೂ ಮನ್ನಿಸಿದ್ದೇವೆ ಎಂದು ಕೆಲವರು ಹೇಳಿದ್ದಾರೆ. ನಾವು ಕಾಂಗ್ರೆಸಿಗರು ಒಂದು ಧರ್ಮದಿಂದ ಇನ್ನೊಂದು ಧರ್ಮಕ್ಕೆ ಮತಾಂತರಗೊಳಿಸುವುದು ಇಲ್ಲವೇ ಇಂಥ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದನ್ನು ಅನುಚಿತ ಎಂದು ಭಾವಿಸುತ್ತೇವೆ ಹಾಗೂ ನಾವು ಇದರ ಪರವಾಗಿ ಇಲ್ಲ. ನಮ್ಮ ಅಭಿಪ್ರಾಯವೇನೆಂದರೆ, ಇನ್ನೊಂದು ಧರ್ಮಕ್ಕೆ ಮತಾಂತರಿಸುವುದು ವ್ಯರ್ಥ ಪ್ರಯತ್ನ. ಆದರೆ, ಕೆಲವರ ಮನವಿಯಂತೆ, ಅವರನ್ನು ರಾಷ್ಟ್ರ ನಿರ್ಮಾಣದಲ್ಲಿ ಒಳಗೊಳ್ಳಲು ಇದನ್ನು ಅಂಗೀಕರಿಸಿದ್ದೇವೆ. ಈಗ ಅವರು ಪ್ರಬುದ್ಧರಲ್ಲದವರನ್ನು ಮತಾಂತರಗೊಳಿಸುವ ಹಕ್ಕು ಇದೆ ಎಂದು ಹೇಳಿಕೊಳ್ಳುತ್ತಿದ್ದಾರೆ. ಏನಿದು? ಇದು ನನ್ನಲ್ಲಿ ಆಶ್ಚರ್ಯ ಹುಟ್ಟಿಸಿದೆ. ಒತ್ತಡ ಹೇರಿ ಮತಾಂತರಗೊಳಿಸಬಹುದು. ಆದರೆ, ಆತ ಬುದ್ಧಿ ಬೆಳೆಯದವ ಮತ್ತು ಕಾನೂನು ಮತ್ತು ನೈತಿಕ ದೃಷ್ಟಿಯಿಂದ ಇಂಥ ಮತಾಂತರ ನ್ಯಾಯಸಮ್ಮತವಲ್ಲ. ಬಾಲಕನೊಬ್ಬ ತನ್ನ ಗುಡಿಸಲನ್ನು ೧೦೦ ರೂ.ಗೆ ಯಾರಿಗಾದರೂ ವರ್ಗಾಯಿಸಿದರೆ, ಅಂಥ ವಹಿವಾಟು ಕಾನೂನಿಗೆ ವಿರುದ್ಧವಾದುದು. ಆದರೆ, ನಮ್ಮ ಸಹೋದರರು ಮುಂದೆ ಬಂದು ಆ ಬಾಲಕನಿಗೆ ಧರ್ಮವನ್ನು ಬದಲಿಸಿಕೊಳ್ಳುವಷ್ಟು ಪ್ರಜ್ಞೆ ಇದೆ ಎನ್ನುತ್ತಾರೆ. ಆಗ ಧರ್ಮದ ಬೆಲೆ ೧೦೦ರೂ.ಗಿಂತ ಕಡಿಮೆ ಮೌಲ್ಯದ್ದಾಗುತ್ತದೆ. ಬಾಲಕನೊಬ್ಬ ಪ್ರಬುದ್ಧನಾದಾಗ ಮಾತ್ರ ಆತನಿಗೆ ಧರ್ಮವನ್ನು ಬದಲಿಸುವ ಅವಕಾಶ ನೀಡಬೇಕು.

ಕ್ರಿಶ್ಚಿಯನ್ನರಿಗೆ ಬಲಗೈಯಿಂದ ಕೊಟ್ಟಿದ್ದನ್ನು ಎಡಗೈಯಿಂದ ಕಿತ್ತುಕೊಳ್ಳಲಾಗಿದೆ ಎಂದು ಸಹೋದರರೊಬ್ಬರು ಹೇಳಿದರು. ಒಂದು ವೇಳೆ ಪೋಷಕರ ಜತೆಗೆ ಮಕ್ಕಳ ಮತಾಂತರಕ್ಕೂ ನಾವು ಹಕ್ಕು ನೀಡಿದ್ದರೆ, ಅವರ ಹೇಳಿಕೆ ಸರಿ ಇರುತ್ತಿತ್ತು. ನಾವು ಅವರಿಗೆ ಬಲಗೈಯಿಂದ ನೀಡಿದ್ದೇನೆಂದರೆ, ವಿವೇಚನೆಯಿಂದ ಅರಿಕೆ ಮೂಲಕ ಮಾಡಿಕೊಳ್ಳುವ ಮತಾಂತರ ಮತ್ತು ನಂತರ ಪ್ರಾಮಾಣಿಕವಾಗಿ ತಮ್ಮ ನಿಲುವು ಮತ್ತು ದೃಷ್ಟಿಕೋನವನ್ನು ಬದಲಿಸಿಕೊಳ್ಳುವ ಹಕ್ಕನ್ನು ಕೊಟ್ಟಿದ್ದೇವೆ. 'ಒತ್ತಾಯ', 'ವಂಚನೆ' ಮತ್ತು 'ನ್ಯಾಯವಲ್ಲದ ಒತ್ತಡ' ಎಂಬುದನ್ನು ಅನುಬಂಧವಾಗಿ ಸೇರ್ಪಡೆಗೊಳಿಸಿದ್ದು, ಅವು ಪ್ರಬುದ್ಧರ ಮತಾಂತರ ಕುರಿತು ಇವೆ. ಅಪ್ರಬುದ್ಧ ವಯಸ್ಸಿನ

ಮತಾಂತರಿಗಳಿಗೆ ಈ ಪದಗಳು ಅನ್ವಯಿಸುವುದಿಲ್ಲ. ಅವರ ಮತಾಂತರ ಬಲವಂತದ್ದು ಮತ್ತು ಅನ್ಯಾಯದ ಒತ್ತಡದಿಂದ ಆಗಿರುವಂಥದ್ದು. ಬಾಲಕರು ತಮ್ಮ ಧರ್ಮವನ್ನು ಹೇಗೆ ಬದಲಿಸುತ್ತಾರೆ? ಬಾಲಕರಿಗೆ ನಿಮ್ಮ ಧರ್ಮಗ್ರಂಥದಲ್ಲಿನ ಉಪದೇಶವನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಇರುವುದಿಲ್ಲ. ಒಂದು ವೇಳೆ ಅವರು ಧರ್ಮವನ್ನು ಬದಲಿಸಿದರೆ,ಅದು ಯಾವುದೋ ಒತ್ತಡದಿಂದಲೇ ಹಾಗೂ ಇಂಥ ಒತ್ತಡ ನ್ಯಾಯಸಮ್ಮತವಲ್ಲ. ಯಾವುದೇ ಒತ್ತಾಯದ ಮೇರೆಗೆ ಮತಾಂತರಗೊಳ್ಳುವುದು ನ್ಯಾಯಸಮ್ಮತವಲ್ಲ. ಕ್ರಿಶ್ಚಿಯನ್ನನೊಬ್ಬ ಹಿಂದೂ ಬಾಲಕನನ್ನು ತನ್ನೊಡನೆ ಇರಿಸಿಕೊಂಡು ಕರುಣೆಯಿಂದ ನೋಡಿಕೊಂಡಲ್ಲಿ ಆತ ಅವನ ಬಳಿಯೇ ಇರಲು ಇಚ್ಛಿಸಬಹುದು. ಇದನ್ನು ನಾವು ತಡೆಯುವುದಿಲ್ಲ. ಆದರೆ, ಆ ಬಾಲಕ ತನ್ನ ಧರ್ಮವನ್ನು ಪ್ರಬುದ್ಧನಾದ ಬಳಿಕವಷ್ಟೇ ಬದಲಿಸಬಹುದು. ಒಂದು ವೇಳೆ ಪೋಷಕರು ಮತಾಂತರಗೊಂಡರೆ, ಮಕ್ಕಳೂ ಮತಾಂತರಗೊಳ್ಳಬೇಕೆಂಬುದು ಎಲ್ಲಿದೆ? ಇದು ನನ್ನ ಅಭಿಪ್ರಾಯ. ಒಂದು ವೇಳೆ ಅವರು ತಮ್ಮ ಪೋಷಕರ ಪ್ರಭಾವದಲ್ಲಿ ಇದ್ದರೆ, ಪ್ರಬುದ್ಧನಾದ ಬಳಿಕ ಧರ್ಮವನ್ನು ಬದಲಿಸಬಹುದು.

ಸಭಾಧ್ಯಕ್ಷರೇ, ನಿಮ್ಮ ಅನುಮತಿಯೊಂದಿಗೆ ಹಿಂದಿ ಗೊತ್ತಿಲ್ಲದ ನನ್ನ ಸ್ನೇಹಿತರಿಗೆ ಇಂಗ್ಲಿಷ್‌ನಲ್ಲಿ ಕೆಲವು ಮಾತು ಹೇಳುತ್ತೇನೆ]*

ಮಾನ್ಯರೇ, ಅಪ್ರಬುದ್ಧರನ್ನು ಮತಾಂತರಗೊಳಿಸುವ ಬಗ್ಗೆ ಕೆಲವು ಕ್ರಿಶ್ಚಿಯನ್ ಸ್ನೇಹಿತರು ಹೇಳಿದ್ದು ಆಶ್ಚರ್ಯಕರವಾಗಿದೆ. ಮತಾಂತರದ ಹಕ್ಕನ್ನು ನಾವು ಮನ್ನಿಸಿದ್ದೇವೆ. ನಾವು ಕಾಂಗ್ರೆಸಿಗರು, ಮತಾಂತರವರನ್ನು ಸರಿ ಎಂದು ಒಪ್ಪುವುದಿಲ್ಲ. ನೇರವಾಗಿ ಹೇಳಬೇಕೆಂದರೆ, ಬೇರೆ ಧರ್ಮದವರನ್ನು ಪರಿಶ್ರಮಪಟ್ಟು ಮತಾಂತರಗೊಳಿಸುವುದನ್ನು ಒಪ್ಪಲಾಗದು. ಆದರೆ, ಕ್ರಿಶ್ಚಿಯನ್ ಸಹೋದರರನ್ನು ಜತೆಯಲ್ಲಿ ಕರೆದೊಯ್ಯಬೇಕೆಂಬ ಉದ್ದೇಶ ಹೊಂದಿರುವುದರಿಂದ, ಅವರು ತಮಗೆ ಮತಾಂತರದ ಹಕ್ಕು ಇರಬೇಕೆಂಬ ಭಾವನೆ ಹೊಂದಿದ್ದರಿಂದ 'ಮತಪ್ರಚಾರ' ಸೂತ್ರವನ್ನು ಉಳಿಸಿಕೊಳ್ಳಲು ಒಪ್ಪಿಕೊಂಡೆವು. ನಾವು ಮತಾಂತರವನ್ನು ವಿರೋಧಿಸುತ್ತೇನೆ ಎಂದು ಅವರಿಗೆ ಗೊತ್ತಿದೆ. ಹೀಗಿದ್ದರೂ, ನಾವು ಒಪ್ಪಿದ್ದೇವೆ.

**ಶ್ರೀ ಸಿ.ಇ. ಗಿಬ್ಬನ್** (ಸಿಪಿ : ಬೇರಾರ್) : ಮಾನ್ಯರೇ, ಇದು ತಪ್ಪು.

ಗೌರವಾನ್ವಿತ ಪುರುಷೋತ್ತಮ ದಾಸ್ ಟಂಡನ್ : ನಾನೊಬ್ಬ ಕಾಂಗ್ರೆಸಿಗನಾಗಿ ಮಾತಾಡುತ್ತಿದ್ದೇನೆ. ಬಹುತೇಕ ಕಾಂಗ್ರೆಸಿಗರು ಮತಾಂತರವನ್ನು ಒಪ್ಪುವುದಿಲ್ಲ (ಅಡೆ ತಡೆ). ಕ್ರಿಶ್ಚಿಯನ್ ಸ್ನೇಹಿತರನ್ನು ಜತೆಗೆ ಕರೆದೊಯ್ಯಲು.....

**ಶ್ರೀ ಸಿ.ಇ. ಗಿಬ್ಬನ್** : ಮಾನ್ಯರೇ, ಇದು ಕ್ರಿಯಾಲೋಪ.

**ಗೌರವಾನ್ವಿತ ಪುರುಷೋತ್ತಮ ದಾಸ್ ಟಂಡನ್** : ಇದು ಕ್ರಿಯಾಲೋಪವಲ್ಲ. ಬದಲಿಗೆ ಅಭಿಪ್ರಾಯ ಮಂಡನೆ.

**ಶ್ರೀ ಸಿ.ಇ. ಗಿಬ್ಬನ್** : ಮಾನ್ಯರೇ, ಎಲ್ಲ ಕಾಂಗ್ರೆಸಿಗರ ಪರವಾಗಿ ಮಾತನಾಡಲು ಅವರು ಸಮರ್ಥರೇ?

**ಕೆಲ ಗೌರವಾನ್ವಿತ ಸದಸ್ಯರು** : ಏಕಿಲ್ಲ?

**ಮಾನ್ಯ ಸಭಾಧ್ಯಕ್ಷರು** : ಕ್ರಿಯಾಲೋಪ ಅನ್ವಯವಾಗುವುದಿಲ್ಲ.

**ಶ್ರೀ ಬಾಲಕೃಷ್ಣ ಶರ್ಮ** (ಯುಪಿ : ಸಾಮಾನ್ಯ) : ಅವರಿಗೆ ಎಲ್ಲ ಕಾಂಗ್ರೆಸಿಗರ ಪರವಾಗಿ ಮಾತನಾಡಲು ಹಕ್ಕು ಇದೆ.ಅವರು ಅಂಥ ಅರ್ಹತೆ ಹೊಂದಿದ್ದಾರೆ.

**ಗೌರವಾನ್ವಿತ ಪುರುಷೋತ್ತಮ ದಾಸ್ ಟಂಡನ್** : ಕಾಂಗ್ರೆಸಿಗರ ಬಗ್ಗೆ ನನಗೆ ಆ ಕಡೆ ಇರುವ ಮಿತ್ರರಿಗಿಂತ ಹೆಚ್ಚು ಗೊತ್ತಿದೆ. ಅವರ ಭಾವನೆಗಳ ಬಗ್ಗೆ ಅರಿವಿದ್ದು, ಬಹುತೇಕರು 'ಮತಪ್ರಚಾರ'ದ ವಿರುದ್ಧ ಇದ್ದಾರೆ. ಆದರೆ, ನಮ್ಮ ಕ್ರಿಶ್ಚಿಯನ್ ಸ್ನೇಹಿತರ ಬಗೆಗಿನ ಗೌರವದಿಂದ ಆ ಪದವನ್ನು ಇರಿಸಿಕೊಳ್ಳಲು ಒಪ್ಪಿದೆವು. ಆದರೆ, ಈಗ ಅಪ್ರಬುದ್ಧರನ್ನೂ ಮತಾಂತರಗೊಳಿಸಲು ಒಪ್ಪುವುದು ತೀರಾ ಹೆಚ್ಚಾಯಿತು. ಹೆಚ್ಚು

ಮಕ್ಕಳಿರುವ ಪೋಷಕರು ಬೇರೊಂದು ಧರ್ಮಕ್ಕೆ ಮತಾಂತರಗೊಂಡರೆ, ಧರ್ಮದ ಬಗ್ಗೆ ಏನೇನೂ ಗೊತ್ತಿಲ್ಲದ ಮಕ್ಕಳನ್ನು ಮತಾಂತರಿಗಳು ಎಂದು ಪರಿಗಣಿಸುವ ಅಗತ್ಯವಿದೆಯೇ? ಇಂಥದ್ದು ಅಗತ್ಯವಿಲ್ಲ.ಪೋಷಕತ್ವದ ಕಾನೂನು ಇದನ್ನು ನೋಡಿಕೊಳ್ಳಲಿದೆ. ಮಕ್ಕಳನ್ನು ನೋಡಿಕೊಳ್ಳಲು ಪೋಷಕರನ್ನು ನೇಮಿಸಿ ಅವರು ಪ್ರಬುದ್ಧರಾದ ಬಳಿಕ ಅವರಿಗೆ ಕ್ರಿಶ್ಚಿಯನ್ ಧರ್ಮ ಒಪ್ಪಿತವಾದರೆ ಅವರು ಅದನ್ನು ಒಪ್ಪಿಕೊಳ್ಳಲಿ. ಇದು ನನ್ನ ಕ್ರಿಶ್ಚಿಯನ್ ಸ್ನೇಹಿತರಿಗೆ.

ಮಾನ್ಯರೇ, ಕೆಲ ವಕೀಲರು ಈ ಬಗ್ಗೆ ತಕರಾರು ಎತ್ತಬಹುದಾದ ಸಾಧ್ಯತೆ ಇದೆ. ಇದರಲ್ಲಿ ಕಾನೂನಿನ ಸಮಸ್ಯೆ ಏನಿದೆ? ಪೋಷಕತ್ವ ಕುರಿತ ಸಾಮಾನ್ಯ ಕಾಯ್ದೆ ಇದನ್ನು ನಿರ್ವಹಿಸಬಲ್ಲದು. ಅಪ್ರಬುದ್ಧರನ್ನು ಮತಾಂತರಿಸಬಾರದು ಎಂದು ಹೇಳಿದಾಗ, ಒಂದೊಮ್ಮೆ ಹೆಚ್ಚು ಸಂಖ್ಯೆಯ ಮಕ್ಕಳನ್ನುಳ್ಳ ತಂದೆತಾಯಿ ಮತಾಂತರಗೊಂಡರೆ, ಅಂಥ ಮಕ್ಕಳ ಜವಾಬ್ದಾರಿಯನ್ನು ದೇಶದ ಕಾನೂನು ಹೊರುತ್ತದೆ. ಅಗತ್ಯವಿದ್ದಲ್ಲಿ ಬೇರೊಂದು ಕಾನೂನು ರಚಿಸಿ, ಇಂಥ ಮಕ್ಕಳ ಪ್ರಕರಣಗಳನ್ನು ನಿರ್ವಹಿಸಬಹುದು. ಇದರಲ್ಲಿ ಯಾವುದೇ ಕಾನೂನಿನ ಸಮಸ್ಯೆ ಕಾಣಿಸುತ್ತಿಲ್ಲ. ಹೀಗಾಗಿ, ಶ್ರೀ ಮುನ್ಷಿಯವರ ತಿದ್ದುಪಡಿಗೆ ಯಾವುದೇ ಶಾಸನಾತ್ಮಕ ಸಮಸ್ಯೆ ಎದುರಾಗುವುದಿಲ್ಲ. ನಾನು ಅವರ ತಿದ್ದುಪಡಿಯನ್ನು ತುಂಬು ಹೃದಯದಿಂದ ಬೆಂಬಲಿಸುತ್ತೇನೆ.

(ಶ್ರೀ ಧೀರೇಂದ್ರ ನಾಥ ದತ್ತ ಮಾತನ್ನಾಡಲು ಏಳುತ್ತಾರೆ)

**ಶ್ರೀ ರಾಮನಾಥ ಗೋಯೆಂಕಾ** (ಮದ್ರಾಸ್ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೇ, ನನ್ನದೊಂದು ಕ್ರಿಯಾಲೋಪವಿದೆ.

**ಮಾನ್ಯ ಸಭಾಧ್ಯಕ್ಷರು :** ಆದರೆ, ದತ್ತ ಅವರು ನಿಮಗಿಂತ ಮೊದಲು ಎದ್ದು ನಿಂತಿದ್ದಾರೆ.

**ಶ್ರೀ ಡಿ.ಎನ್. ದತ್ತ :** ಸಭಾಧ್ಯಕ್ಷರೇ, ಹಿಂದಿನ ಭಾಷಣಕಾರರ ಮಾತು ಕೇಳಿ ಎದ್ದು ನಿಲ್ಲಬೇಕಾಯಿತು.

**ಮಾನ್ಯ ಸಭಾಧ್ಯಕ್ಷರು :** ಆದರೆ, ನೀವು ಕ್ರಿಯಾಲೋಪವೊಂದನ್ನು ಎತ್ತುತ್ತಿದ್ದೀರಿ ಎಂದು ನಾನು ಭಾವಿಸಿದ್ದೆ.

**ಶ್ರೀ ಡಿ.ಎನ್. ದತ್ತ :** ಇಲ್ಲ ಮಾನ್ಯರೇ, ನಾನು ಕ್ರಿಯಾಲೋಪ ಎತ್ತುತ್ತಿಲ್ಲ.

**ಮಾನ್ಯ ಸಭಾಧ್ಯಕ್ಷರು :** ಸರಿ, ಸ್ವಲ್ಪ ಕಾಯಿರಿ. ಶ್ರೀ ಗೋಯೆಂಕಾ ಅವರೇ, ಮಾತನ್ನಾಡಿ.

**ಶ್ರೀ ರಾಮನಾಥ ಗೋಯೆಂಕಾ :** ಮಾನ್ಯರೇ, ನಾವು ಅಂಗೀಕರಿಸಿದ ೧೩ನೇ ಖಂಡದಲ್ಲಿ "ಎಲ್ಲರಿಗೂ ಸಮಾನವಾದ ಆತ್ಮಸಾಕ್ಷಿಯ ಸ್ವಾತಂತ್ರ್ಯವಿದೆ' ಎನ್ನಲಾಗಿದೆ. "ಎಲ್ಲ ವ್ಯಕ್ತಿಗಳಿಗೂ' ಗುಂಪಿನಲ್ಲಿ ವಿವೇಚನೆಯಿರುವ ವಯಸ್ಸಿನವರು ಇರುತ್ತಾರೆ. ಇಂಥ ವ್ಯಕ್ತಿಗಳಿಗೆ ೧೮ ವರ್ಷ ಆಗಿರಬೇಕು ಎಂದೇನೂ ಇಲ್ಲ. ೧೨,೧೩,೧೪,೧೫,೧೬ ಇಲ್ಲವೇ ೧೭ ವರ್ಷದವರಿಗೂ ಪ್ರಬುದ್ಧತೆ ಬರಬಹುದು. ನಾವು ೧೭ನೇ ಖಂಡವನ್ನು ಅಂಗೀಕರಿಸಿ, ೧೮ ವರ್ಷವನ್ನು ನಿಗದಿಗೊಳಿಸಿದರೆ. ಅದು ೧೩ನೇ ಖಂಡಕ್ಕೆ ಹೊಂದಾಣಿಕೆ ಆಗುವುದಿಲ್ಲ. ೧೭ನೇ ಖಂಡವನ್ನು ಅಂಗೀಕರಿಸಿ, ವರ್ಷವನ್ನು ನಿಗದಿಗೊಳಿಸಿದರೆ, ಈಗ ನಾವು ಅಂಗೀಕರಿಸಿರುವ ೧೩ನೇ ಖಂಡಕ್ಕೆ ತಾಳೆಯಾಗುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು :** ಇಲ್ಲಿ ಕ್ರಿಯಾಲೋಪ ಎಲ್ಲಿದೆ? (ನಗು)

**ಶ್ರೀ ರಾಮನಾಥ ಗೋಯೆಂಕಾ :** ನಾವು ಅಂಗೀಕರಿಸಿದ ಖಂಡ ೧೩ರ ಜೊತೆ ತಾಳೆಯಾಗುವುದಿಲ್ಲ.

ಮಾನ್ಯ ಸಭಾಧ್ಯಕ್ಷರು: ಅದು ವಿಷಯದ ಮಹತ್ವವನ್ನು ಆಧರಿಸಿದೆ. ಅದು ತಾಳೆಯಾಗದೆ ಇರುವುದರಿಂದ, ಅದನ್ನು ಸದನ ಪರಿಗಣಿಸಬಾರದೆ?

**ಶ್ರೀ ರಾಮನಾಥ ಗೋಯೆಂಕಾ :** ನಾನು ತಿದ್ದುಪಡಿ ಕ್ರಮಬದ್ಧವಾಗಿಲ್ಲ ಎನ್ನುತ್ತಿದ್ದೇನೆ.

**ಮಾನ್ಯ ಸಭಾಧ್ಯಕ್ಷರು :** ಯಾವ ತಿದ್ದುಪಡಿ?

**ಶ್ರೀ ರಾಮನಾಥ ಗೋಯೆಂಕಾ :** ಶ್ರೀ ಮುನ್ಷಿಯವರು ಮಂಡಿಸಿದ ತಿದ್ದುಪಡಿ. ೧೮ ವರ್ಷಕ್ಕೆ ಮುನ್ನವೇ

ವಿವೇಚನೆ ಶಕ್ತಿ ಬರಬಹುದು ಎಂದು ನೀವು ಒಪ್ಪಿದಲ್ಲಿ, ಅದು ಕ್ರಮಬದ್ಧವಲ್ಲ. ನನ್ನ ಕ್ರಿಯಾಲೋಪ ಏನೆಂದರೆ, ಶ್ರೀ ಮುನ್ಷಿಯವರ ತಿದ್ದುಪಡಿ ಸೂಕ್ತವಾಗಿಲ್ಲ ಎಂಬುದು.

**ಶ್ರೀ ಮಹಾವೀರ ತ್ಯಾಗಿ** (ಯುಪಿ : ಸಾಮಾನ್ಯ) : ಆದರೆ, ಶ್ರೀ ಮುನ್ಷಿ ಅವರು ಆ ವಯಸ್ಸನ್ನು ದಾಟಿದ್ದಾರೆ.

**ಶ್ರೀ ರಾಮನಾಥ ಗೋಯೆಂಕಾ :** ಶ್ರೀ ಮುನ್ಷಿಯವರು ೧೮ ವರ್ಷ ದಾಟಿದ್ದಾರೆಯೇ ಎಂಬುದು ಇಲ್ಲಿನ ಪ್ರಶ್ನೆಯಲ್ಲ (ನಗು)

**ಮಾನ್ಯ ಸಭಾಧ್ಯಕ್ಷರು :** ಶ್ರೀ ಗೋಯೆಂಕಾ ಅವರ ಕ್ರಿಯಾಲೋಪವನ್ನು ಪರಿಗಣಿಸುತ್ತೇನೆ. ನಾವು ಈಗಾಗಲೇ ೧೩ನೇ ಖಂಡವನ್ನು ಅಂಗೀಕರಿಸಿರುವುದರಿಂದ, ಮುನ್ಷಿಯವರ ತಿದ್ದುಪಡಿಯನ್ನು ಸದನ ಕೈಗೆತ್ತಿಕೊಳ್ಳುವಂತಿಲ್ಲ. ಆದರೆ, ಸದನವು ತನ್ನ ನಿರ್ಧಾರವನ್ನು ಪುನರ್‌ಪರಿಶೀಲಿಸುವ ಸ್ವಾತಂತ್ರ್ಯ ಹೊಂದಿದೆ.

**ಶ್ರೀ ರಾಮನಾಥ ಗೋಯೆಂಕಾ :** ಹೌದು ಮಾನ್ಯರೇ, ೧೩ನೇ ಖಂಡ ಈಗ ಇರುವಂತೆ ಈ ತಿದ್ದುಪಡಿಯು ಕ್ರಮಬದ್ಧವಾಗಿರದು.

**ಶ್ರೀ ಕೆ.ಎಂ. ಮುನ್ಷಿ :** ಮಾನ್ಯರೇ, ನಾನು ಇದಕ್ಕೆ ಉತ್ತರಿಸಲೇ?

**ಮಾನ್ಯ ಸಭಾಧ್ಯಕ್ಷರು :** ಹೌದು.

**ಶ್ರೀ ಕೆ.ಎಂ. ಮುನ್ಷಿ :** ಮಾನ್ಯರೇ, ಸ್ನೇಹಿತರಾದ ಗೋಯೆಂಕಾ ಅವರು ನನ್ನ ಪ್ರಕಾರ, ವಿಷಯವನ್ನು ತಪ್ಪಾಗಿ ಗ್ರಹಿಸಿದ್ದಾರೆ. ಅವರು ಈ ಪ್ರದೇಶಕ್ಕೆ ಪ್ರವೇಶಿಸಬಾರದಿತ್ತು.

೧೩ನೇ ಖಂಡ ಹೇಳುವುದಿದು:

"ಎಲ್ಲರಿಗೂ ಸಮಾನವಾಗಿ ಆತ್ಮಸಾಕ್ಷಿಯ ಸ್ವಾತಂತ್ರ್ಯವಿದೆ ಹಾಗೂ ಧರ್ಮದ ಆಚರಣೆ, ಬೋಧನೆ ಮತ್ತು ಪ್ರಸಾರದ ಹಕ್ಕು ಇದೆ. ಸಾರ್ವಜನಿಕ ಸುವ್ಯವಸ್ಥೆ, ನೈತಿಕತೆ ಇಲ್ಲವೇ ಆರೋಗ್ಯಕ್ಕೆ ಹಾಗೂ ಈ ಭಾಗದ ಇತರ ಪ್ರಸ್ತಾವಗಳಿಗೆ ಇದರಿಂದ ಯಾವುದೇ ಧಕ್ಕೆ ಆಗಬಾರದು".

ಈ ಪ್ರಸ್ತಾವವು ಬೇರೆಯ ಪ್ರಸ್ತಾವಗಳಿಗೆ ಅನ್ವಯವಾಗುತ್ತದೆ ಹಾಗೂ ಒಂದು ವೇಳೆ ೧೭ನೇ ಖಂಡವನ್ನು ಸದನ ಅಂಗೀಕರಿಸಿದಲ್ಲಿ, ಉಲ್ಲೇಖಿಸಿದ ಸ್ವಾತಂತ್ರ್ಯವು ಈ ನಿರ್ದಿಷ್ಟ ಖಂಡಕ್ಕೆ ಮಾತ್ರ ಅನ್ವಯವಾಗಲಿದೆ. ವಿಷಯವು ಭರ್ಜಿಯ ಮರದ ಕಾವಿನಷ್ಟೇ ಸ್ಪಷ್ಟವಾಗಿದೆ.

**ಶ್ರೀ ಅನಂತಶಯನಂ ಅಯ್ಯಂಗಾರ್ :** ಮಾನ್ಯರೇ, ನಾನು ಶ್ರೀ ಗೋಯೆಂಕಾ ಅವರು ಎತ್ತಿದ ಪ್ರಶ್ನೆಯನ್ನು ಬೇರೆ ರೀತಿ ಹೇಳುತ್ತೇನೆ. ಈ ಕ್ರಿಯಾಲೋಪವನ್ನು ಮಂಡಿಸಿದವರು ವಿವೇಚನೆಯಿಂದ ಮಾಡುವ ಮತಾಂತರಕ್ಕೆ ಆಕ್ಷೇಪವಿಲ್ಲ ಎಂದಿದ್ದಾರೆ. ಆದರೆ, ವಿವೇಚನೆಯ ವಯಸ್ಸು ಯಾವುದು ಎಂಬುದನ್ನು ಎಲ್ಲಿಯೂ ವಿವರಿಸಿಲ್ಲ. ಆದ್ದರಿಂದ ವಿವೇಚನೆಯ ವಯಸ್ಸು ೧೮ ಎಂದು ಸದನ ಹೇಳಬಹುದು. ಹಾಗಾಗಿ, ಕ್ರಿಯಾಲೋಪದ ವಿಚಾರ ಬರುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು :** ಈ ತಿದ್ದುಪಡಿ ಕ್ರಮಬದ್ಧವಾಗಿದೆ ಎಂಬುದು ನನ್ನ ಭಾವನೆ. ಹೀಗಾಗಿ, ತಿದ್ದುಪಡಿ ಹಾಗೂ ಪ್ರಸ್ತಾವ ಕುರಿತು ಚರ್ಚೆ ನಡೆಸಬಹುದು.

**ಶ್ರೀ ಡಿ.ಎನ್. ದತ್ತ :** ಮಾನ್ಯ ಸಭಾಧ್ಯಕ್ಷರೇ, ೧೭ನೇ ಖಂಡ ಮೂಲಭೂತ ಹಕ್ಕುಗಳ ಸಮಿತಿಗೆ ಹೋಗಬೇಕು ಎಂಬುದು ನನ್ನ ಅಭಿಪ್ರಾಯ ಹಾಗೂ ಇಡೀ ಖಂಡವನ್ನು ತೆಗೆದುಹಾಕಿದರೆ, ನನಗೆ ಸಂತಸವಾಗಲಿದೆ. ಮೂಲಭೂತ ಹಕ್ಕುಗಳ ಕೆಳಗೆ ಇದರ ಸೇರ್ಪಡೆಗೆ ಕಾರಣಗಳೇನು ಎಂಬುದು ಗೊತ್ತಿದೆ.ನಾವು ಪ್ರಸ್ತುತ ವ್ಯವಸ್ಥೆಯೊಂದರಲ್ಲಿ ಕೆಲಸ ಮಾಡುತ್ತಿದ್ದೇವೆ. ಆದರೆ, ಇದು ಮೂಲಭೂತ ಹಕ್ಕುಗಳ ಕೆಳಗೆ ನಮೂದಾಗುತ್ತಿರುವುದರಿಂದ ಶ್ರೀ ಮುನ್ಷಿಯವರ ತಿದ್ದುಪಡಿಯನ್ನು ಒಪ್ಪಬೇಕೋ ಅಥವಾ ಶ್ರೀ ಆಂಥನಿ ಅವರ ತಿದ್ದುಪಡಿಯನ್ನು ಅಂಗೀಕರಿಸಬೇಕೋ ಎಂಬ ಪ್ರಶ್ನೆ ಇದೆ. ತಮಗೆ ಸೂಕ್ತ ಎನಿಸಿದ ಧರ್ಮಕ್ಕೆ

ಸೇರುವ ಆಯ್ಕೆಯ ಸ್ವಾತಂತ್ರ್ಯವನ್ನು ಅಪ್ರಾಪ್ತ ವಯಸ್ಕರಿಗೂ ನೀಡಬೇಕೆಂಬುದು ಶ್ರೀ ಆಂಥನಿ ಅವರ ಬೇಡಿಕೆ. ಮುಸಲ್ಮಾನರ ಮಕ್ಕಳಿಗೆ ಮದುವೆ ವೇಳೆ ಇಂಥ ಆಯ್ಕೆಯನ್ನು ನೀಡಲಾಗಿದೆ. ಇದನ್ನು "ಪ್ರೌಢ ದೆಶೆಯ ಆಯ್ಕೆ' ಎನ್ನಲಾಗುತ್ತದೆ. ಇಂಥ ಹಕ್ಕು ಮತಾಂತರಗೊಂಡ ಪೋಷಕರ ಮಕ್ಕಳಿಗೂ ಇರಬೇಕು ಎಂಬುದು ಅವರ ನಿಲುವು. ಪ್ರಬುದ್ಧನಾದ ಮೇಲೆ ತಾನು ಮೂಲ ಧರ್ಮದಲ್ಲಿ ಇರಬೇಕೋ ಅಥವಾ ಪೋಷಕರ ಧರ್ಮದಲ್ಲಿ ಇರಬೇಕೋ ಎಂಬುದನ್ನು ನಿರ್ಧರಿಸುವ ಹಕ್ಕು ಆತ ಹೊಂದಿದ್ದಾನೆ. ಇಂಥ ಹಕ್ಕು ನೀಡುವಲ್ಲಿ ನನಗೆ ಯಾವುದೇ ಸಮಸ್ಯೆ ಕಾಣಿಸುತ್ತಿಲ್ಲ. ಪ್ರಬುದ್ಧನಾದ ಬಳಿಕ ಆತ ಹಿಂದೂ ಆಗಿದ್ದರೆ ಹಿಂದೂ ಧರ್ಮದಲ್ಲೇ ಉಳಿಯುತ್ತೇನೆ ಎಂದು ಘೋಷಿಸಬಹುದು. ಇಲ್ಲವೇ ಮತಾಂತರಗೊಂಡ ತಂದೆ ತಾಯಿಯ ಧರ್ಮವನ್ನು ಅನುಸರಿಸಬಹುದು. ನನ್ನ ಪ್ರಕಾರ, ಇಂಥ ಹಕ್ಕು ಹೇಗೆ ಕೊಡಬೇಕು ಎಂಬುದನ್ನು ಕರಡು ಸಮಿತಿ ನಿರ್ಧರಿಸಬೇಕು. ಮಾನ್ಯರೇ, ಹೀಗಾಗಿ, ಈ ಖಂಡ ಕರಡು ಸಮಿತಿಗೆ ಹೋಗಬೇಕು ಎಂಬುದು ನನ್ನ ಸಲಹೆ. ಈ ಖಂಡವನ್ನು ಉಳಿಸಿಕೊಳ್ಳಬೇಕೇ ಬೇಡವೇ, ಉಳಿಸಿಕೊಂಡರೆ ಯಾವ ರೀತಿ ಉಳಿಸಿಕೊಳ್ಳಬೇಕು ಎಂಬುದನ್ನು ನಿರ್ಧರಿಸಲು ಮೂಲಭೂತ ಹಕ್ಕುಗಳ ಸಮಿತಿಗೆ ಹೋದರೆ ಇನ್ನೂ ಒಳ್ಳೆಯದು.

ಮುಗಿಸುವ ಮುನ್ನ ಒಂದು ಮಾತು. ೧೩ನೇ ಖಂಡದಲ್ಲಿ "ಧರ್ಮಪ್ರಚಾರ' ಎಂಬ ಪದ ಸೇರ್ಪಡೆಗೆ ಬಹುತೇಕ ಕಾಂಗ್ರೆಸಿಗರು ಸಮ್ಮತಿಸುವುದಿಲ್ಲ ಎಂಬ ಶ್ರೀ ಟಂಡನ್ ಅವರ ಮಾತು ಸರಿಯಾದುದಲ್ಲ. ನೆನ್ನೆ ಈ ಬಗ್ಗೆ ಚರ್ಚೆ ನಡೆದಿದ್ದು, ಬಹುತೇಕ ಕಾಂಗ್ರೆಸ್ ಮುಖಂಡರು ಇದಕ್ಕೆ ಸಮ್ಮತಿಸಿದ್ದಾರೆ. ಅದ್ದರಿಂದ, ಟಂಡನ್ ಅವರ ಮಾತು ಸರಿಯಲ್ಲ.

**ಶ್ರೀ ಲಕ್ಷ್ಮೀನಾರಾಯಣ ಸಾಹು** (ಒರಿಸ್ಸಾ : ಸಾಮಾನ್ಯ): ಸಭಾಧ್ಯಕ್ಷರೇ, ಮೂಲಭೂತ ಹಕ್ಕಿನಲ್ಲಿ ಈ ಖಂಡದ ಸೇರ್ಪಡೆಯನ್ನು ಸ್ವಾಗತಿಸುತ್ತೇನೆ. ಆದರೆ, ನನ್ನ ಸಂದೇಹವೇನೆಂದರೆ, ಅಲ್ಪಸಂಖ್ಯಾತರು ಎಂದರೆ ಯಾರು? ಈ ಸಂಶಯ ನಿವಾರಣೆ ಬಗೆಗೆ ಆನಂತರ ನೋಡೋಣ. ಈಗಿರುವ ಪರಿಸ್ಥಿತಿ ಬಗೆಗೆ ನಾನು ಸದನದ ಗಮನ ಸೆಳೆಯುತ್ತೇನೆ. ಮಿಡ್ನಾಪುರ ಜಿಲ್ಲೆಯಲ್ಲಿ ಅರ್ಧಕ್ಕೂ ಹೆಚ್ಚು ಮಂದಿ ಒರಿಯಾ ಮಾತನ್ನಾಡುತ್ತಿದ್ದರು. ೧೮೯೧ರಿಂದ ೧೯೩೧ರ ಅವಧಿಯಲ್ಲಿ ಆ ಭಾಷೆಯನ್ನು ಕೊಲ್ಲಲಾಯಿತು. ೧೮೯೧ರಲ್ಲಿ ಆರು ಲಕ್ಷದಷ್ಟಿದ್ದ ಒರಿಯನ್ನರ ಸಂಖ್ಯೆ ೧೦ ವರ್ಷಗಳ ಬಳಿಕ ೩ ಲಕ್ಷಕ್ಕಿಂತ ಕಡಿಮೆ ಆಯಿತು.ಆರು ಲಕ್ಷದಿಂದ ೩ ಲಕ್ಷಕ್ಕೆ ಕುಸಿಯಿತು.ಮತ್ತು ೧೯೧೧ರಲ್ಲಿ...........

**ಮಾನ್ಯ ಸಭಾಧ್ಯಕ್ಷರು :** ಶ್ರೀ ಸಾಹು ಅವರೇ, ನಾವು ಈಗ ಭಾಷೆ ಬಗ್ಗೆ ಮಾತಾಡುತ್ತಿಲ್ಲ. ೧೭ನೇ ಖಂಡದ ಬಗೆಗೆ ಧರ್ಮದ ಕುರಿತು ಚರ್ಚಿಸುತ್ತಿದ್ದೇವೆ. ಖಂಡ ೧೮ರ ಬಗೆಗೆ ಅಲ್ಲ.

**ಶ್ರೀ ಎಲ್.ಎನ್. ಸಾಹು :** ಕ್ಷಮಿಸಿ.

**ರೆ. ಜೆರೋಮ್ ಡಿಸೋಜಾ** (ಮದ್ರಾಸ್ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೇ, ಚರ್ಚೆ ದಿಕ್ಕು ತಪ್ಪಿ ಇದು ಅಲ್ಪಸಂಖ್ಯಾತರ ಸಮಸ್ಯೆ ಎಂಬಂತೆ ಚರ್ಚೆಯಾಗಿದ್ದು, ಇದರಿಂದ ಸಾಕಷ್ಟು ಕಾವೇರಿತು. ಇದು ವಿಷಾದನೀಯ. ಮಾನ್ಯರೇ, ಸಮಿತಿಯ ಹಂತದಲ್ಲಿ ಈ ಬಗ್ಗೆ ಚರ್ಚೆ ನಡೆದಾಗ, ಅಲ್ಪಸಂಖ್ಯಾತರ ಪ್ರಶ್ನೆಯನ್ನು ಹೊರತುಪಡಿಸಿ, ಸರ್ ಅಲ್ಲಾಡಿ ಅವರಂತಹ ಪ್ರಾಜ್ಞರು ನಮಗೆ ಇದರಲ್ಲಿನ ಕಾನೂನು ಸಮಸ್ಯೆಗಳ ಬಗ್ಗೆ ತಿಳಿ ಹೇಳಿದ್ದರು. ಅಲ್ಪಸಂಖ್ಯಾತರ ಹಕ್ಕುಗಳಿಗೆ ಸಂಬಂಧಿಸಿದಂತೆ, ಸದನವು ಖಂಡ ೧೩ನ್ನು ನಿರ್ವಹಿಸಿದ ರೀತಿ ಭರವಸೆ ಮೂಡಿಸುವಂತಿತ್ತು ಹಾಗೂ ಉತ್ತೇಜನಕಾರಿಯಾಗಿತ್ತು ಎಂದಷ್ಟೇ ಹೇಳಬಲ್ಲೆ. ಅಲ್ಪಸಂಖ್ಯಾತರಿಗೆ ಜಗಳ ಕಾಯಲು ಕಾರಣವೇ ಇರಲಿಲ್ಲ ಹಾಗೂ ಇದಕ್ಕಿಂತ ಹೆಚ್ಚಿನ ಆಶ್ವಾಸನೆ ಬೇಕಿರಲಿಲ್ಲ. ಈ ಮನಸ್ಥಿತಿಯು ಅಲ್ಪಸಂಖ್ಯಾತರಲ್ಲಿ ನಂಬಿಕೆ ಮೂಡಿಸಲಿದ್ದು, ಭವಿಷ್ಯದಲ್ಲಿ ಸಂಬಂಧ ಮತ್ತು ಸಂವಾದವನ್ನು ಉತ್ತೇಜಿಸುತ್ತದೆ ಎಂಬ ಭರವಸೆ ಇದೆ. ಇದು ಸಿದ್ಧಾಂತ ಮತ್ತು ಕೌಟುಂಬಿಕ ಅಧಿಕಾರದ ವಿಶಾಲ ವ್ಯಾಪ್ತಿಯ ಪ್ರಶ್ನೆ ಎಂಬ

ಶ್ರೀ ಆಂಥನಿ ಅವರ ನಿಲುವನ್ನು ನಾನು ಒಪ್ಪುತ್ತೇನೆ. ಆ ದೃಷ್ಟಿಕೋನದಿಂದ ನಾನು ಮಾತನ್ನಾಡುತ್ತಿದ್ದೇನೆ ಎಂಬ ಭರವಸೆ ನೀಡುತ್ತೇನೆ. ಬಾಲಕರ ಮತಾಂತರದಿಂದ ಬಹುಸಂಖ್ಯಾತರ ನಡುವಿನ ಸಂಬಂಧವಲ್ಲದೆ, ಕ್ರಿಶ್ಚಿಯನ್ ಗುಂಪುಗಳ ನಡುವಿನ ಸಂಬಂಧವೂ, ಕೆಥೊಲಿಕರು ಮತ್ತು ಪ್ರೊಟೆಸ್ಟೆಂಟರು ಇತ್ಯಾದಿ, ಕೆಡುತ್ತದೆ. ಆದರೆ, ಎಲ್ಲಕ್ಕಿಂತ ಮುಖ್ಯವಾಗಿ, ತನ್ನ ಕುಟುಂಬದ ಮೇಲೆ ಯಜಮಾನನಿಗಿರುವ ಅಧಿಕಾರಕ್ಕೆ ಸಂಬಂಧಿಸಿದಂತೆ, ಕೆಲವು ಹಕ್ಕುಗಳ ಖಾತ್ರಿ ನೀಡಬೇಕು ಹಾಗೂ ಈ ಹಕ್ಕುಗಳು ಮೂಲಭೂತ ಹಕ್ಕುಗಳ ಭಾಗವಾಗಿರಬೇಕು. ಈ ಮೂಲಭೂತ ಹಕ್ಕುಗಳಲ್ಲಿ ಕುಟುಂಬವನ್ನು ಬಲಪಡಿಸುವ, ಉತ್ತೇಜಿಸುವ ಇಲ್ಲವೇ ರಕ್ಷಿಸುವ ನಿರ್ದಿಷ್ಟ ಅಂಶಗಳು ಇಲ್ಲ ಹಾಗೂ ಈ ಹಂತದಲ್ಲಿ ಅವುಗಳ ಅಗತ್ಯ ಇಲ್ಲ ಎಂದು ನಾನು ಭಾವಿಸಿದ್ದೇನೆ. ಏಕೆಂದರೆ, ಅದು ವ್ಯವಹಾರಾಧಿಕಾರಕ್ಕೆ ಒಳಪಟ್ಟ ಹಕ್ಕಲ್ಲ. ಕೆಲವು ಸಂವಿಧಾನಗಳಲ್ಲಿ ರಾಜ್ಯವು ಕುಟುಂಬವನ್ನು ರಕ್ಷಿಸಬೇಕು, ಉತ್ತೇಜಿಸಬೇಕು ಎಂದು ಸ್ಪಷ್ಟವಾಗಿ ಘೋಷಿಸಿವೆ. ಮೂಲಭೂತ ಹಕ್ಕುಗಳ ೨ನೇ ಭಾಗದಲ್ಲಿ ಕುಟುಂಬ ಜೀವನಕ್ಕೆ ಸಂಬಂಧಿಸಿದ ಹಕ್ಕುಗಳು ಮತ್ತು ವಿಶೇಷಾಧಿಕಾರ ಕುರಿತ ಘೋಷಣೆ ಇಲ್ಲವೇ ಅನುಮೋದನೆ ನೀಡಬೇಕೆಂದು ಕೋರುತ್ತೇನೆ.

ಭಾರತದಲ್ಲಿ ಕುಟುಂಬದ ಬಂಧ ಬಲಿಷ್ಟವಾಗಿದೆ ಎಂಬ ಭಾವನೆ ಜಗತ್ತಿನೆಲ್ಲೆಡೆ ಇದ್ದು, ಅಂಥ ಘೋಷಣೆ ಅಗತ್ಯವಿಲ್ಲ ಎಂಬ ಭಾವನೆ ಇರಬಹುದು. ನಮ್ಮಲ್ಲಿ ವ್ಯಕ್ತಿ ಅಥವಾ ಸಣ್ಣ ಕುಟುಂಬಗಳಲ್ಲದೆ, ಕೂಡು ಕುಟುಂಬಗಳೂ ಇವೆ. ಕೂಡು ಕುಟುಂಬ ವ್ಯವಸ್ಥೆಯ ಹಿನ್ನೆಲೆಯಲ್ಲಿ ಈ ಅಂಶ ಕುರಿತ ಚರ್ಚೆಯು ಪ್ರಭಾವಿಸಲ್ಪಟ್ಟಿದೆ ಎಂದು ನಂಬಿದ್ದೇನೆ. ಶ್ರೀ ಟಂಡನ್ ಅವರು ಮತಾಂತರಗೊಂಡ ಪೋಷಕರ ಅಪ್ರಬುದ್ಧ ಮಕ್ಕಳ ಬಗ್ಗೆ ಮಾತನಾಡಿದಾಗ, ಅವರ ಹೆಸರನ್ನು ಉಲ್ಲೇಖಿಸಲು ನೀವು ಅನುಮತಿ ನೀಡಿದಲ್ಲಿ, ಕೂಡು ಕುಟುಂಬದಲ್ಲಿ ಇಂಥ ಮಕ್ಕಳನ್ನು ನೋಡಿಕೊಳ್ಳುವವರು ಇರುತ್ತಾರೆ. ಅವರು ಇಂಥ ಮಕ್ಕಳನ್ನು ಬೆಳೆಸುತ್ತಾರೆ ಎಂದು ಮಾತನ್ನಾಡಿರಬೇಕು ಎಂದುಕೊಳ್ಳುತ್ತೇನೆ. ಆದರೆ, ನಾವು ಸಮಾಜದ ಎಲ್ಲರನ್ನೂ ಒಳಗೊಳ್ಳುವ ಶಾಸನಗಳನ್ನು ರಚಿಸುತ್ತಿದ್ದೇವೆ. ಕೂಡು ಕುಟುಂಬಗಳಲ್ಲಿ ಅಲ್ಲದೆ ಒಂಟಿ ಕುಟುಂಬಗಳಲ್ಲೂ ಇಂಥ ಮಕ್ಕಳು ಇರಬಹುದು. ಇಂಥ ಮಕ್ಕಳಿಗಾಗಿ ನಾವು ಕಾನೂನು ರೂಪಿಸುತ್ತಿದ್ದು, ಕೆಲವು ಪ್ರಸ್ತಾವ ರೂಪಿಸಬೇಕು, ಅಂತಿಮವಾಗಿ ಇಬ್ಬರು ಪೋಷಕರು ಅಥವಾ ಉಳಿದುಕೊಂಡ ಪೋಷಕರ ಹಕ್ಕನ್ನು ಉಳಿಸುವ ಕೆಲಸ ಆಗಬೇಕು. ಶ್ರೀ ಆಂಥನಿ ಅವರು ತಾಯಂದಿರ ತೋಳಿನಲ್ಲಿರುವ ಮಕ್ಕಳ ಬಗೆಗೆ ಹೇಳಿದ್ದಾರೆ. ಇಂಥ ಮಕ್ಕಳನ್ನು ತಾಯಿ ಇಲ್ಲವೇ ತಂದೆಯಿಂದ ಕಿತ್ತುಕೊಳ್ಳುವುದು, ದೈಹಿಕವಾಗಿ ಮತ್ತು ನ್ಯಾಯಿಕವಾಗಿ ಸಂಬಂಧಿಸಿದವರಿಂದ ಬೇರ್ಪಡಿಸುವುದು ಹಾಗೂ ಕುಟುಂಬದ ಅಧಿಕಾರ ಮತ್ತು ಪಾವಿತ್ರ್ಯವನ್ನು ದುರ್ಬಲಗೊಳಿಸುವ ಅಂಶವನ್ನು ಕಾಯಿದೆಯಲ್ಲಿ ಸೇರ್ಪಡೆಗೊಳಿಸುವುದು ಸೂಕ್ತವಲ್ಲ. ಈ ಬಗೆಗೆ ಹಾಗೂ ಶಾಸನಾತ್ಮಕ ಸಮಸ್ಯೆಗಳ ಕಡೆಗೆ ಗಮನ ಸೆಳೆದಿದ್ದೇನೆ. ಇಂಥ ಬಾಲಕರ ಮರಣ, ಮದುವೆ, ಉತ್ತರಾಧಿಕಾರ ಕುರಿತು ಶಾಸನಾತ್ಮಕ ಸಮಸ್ಯೆ ಇರಬಹುದು. ಈಗಿರುವಂತೆ ಶ್ರೀ ಮುನ್ಷಿಯವರ ತಿದ್ದುಪಡಿಯನ್ನು ವಿರೋಧಿಸುತ್ತೇನೆ. ಮದುವೆಯನ್ನೇ ತೆಗೆದುಕೊಳ್ಳಿ, ೧೮ ವರ್ಷಕ್ಕೆ ಮುನ್ನ ಮದುವೆಗೆ ಅನುಮತಿ ನೀಡಲಾಗಿದೆ. ಅಪ್ರಬುದ್ಧ ಮಕ್ಕಳು ಪೋಷಕರೊಂದಿಗೆ ಹೋಗುವುದನ್ನು ತಡೆಯುವಂತಿಲ್ಲ ಎಂದು ಮುನ್ಷಿಯವರು ವಿವರಿಸಿದ್ದಾರೆ. ಒಂದು ವೇಳೆ ಇಂಥ ಮಕ್ಕಳು ಮದುವೆ ಆಗುವುದಿದ್ದರೆ, ಯಾವ ಧಾರ್ಮಿಕ ಆಚರಣೆಗಳ ಪ್ರಕಾರ ಅವರು ಮದುವೆಯಾಗಬೇಕು? ತಮ್ಮ ಆತ್ಮಸಾಕ್ಷಿ ಹಾಗೂ ತಾವು ಆಯ್ದುಕೊಂಡ ಧರ್ಮವನ್ನು ಅನುಸರಿಸಿದರೆ, ಮುಸ್ಲಿಮರು, ಹಿಂದೂಗಳು ಅಥವಾ ಕ್ರಿಶ್ಚಿಯನ್ನರು ಯಾರೇ ಆಗಿರಲಿ, ಅಂಥ ಮದುವೆ ಕಾನೂನಿನ ಪ್ರಕಾರ ಸಮ್ಮತವೇ ಎಂಬ ಪ್ರಶ್ನೆ ಮೂಡುತ್ತದೆ. ಇದೆಲ್ಲ ಕಾನೂನು ಹಾಗೂ ವ್ಯವಹಾರಾಧಿಕಾರಕ್ಕೆ ಸಂಬಂಧಿಸಿದ ತೊಂದರೆಗಳು. ಉಳಿದಂತೆ ಇತರ ಸಮಸ್ಯೆಗಳೂ ಇದ್ದು, ನಾನು ಹೇಳಿದಂತೆ ನಾವು ನ್ಯಾಯವಲ್ಲದ ಉತ್ಸಾಹದಿಂದ ಈ ವಿಷಯಕ್ಕೆ ಪ್ರವೇಶಿಸುತ್ತಿರುವುದಕ್ಕೆ ವಿಷಾದಿಸುತ್ತೇನೆ. ಶ್ರೀ ಆಂಥನಿ ಅವರ ಸೂಚನೆಯನ್ನು ನಾನು ಬೆಂಬಲಿಸುತ್ತೇನಾದರೂ,

ಇಡೀ ಖಂಡವನ್ನು ಸಲಹಾ ಸಮಿತಿಗೆ ವಾಪಸ್ ಕಳಿಸಬೇಕೆಂಬ ಸಭಾಧ್ಯಕ್ಷರ ಸಲಹೆಗೆ ನನ್ನ ಸಮ್ಮತಿ ಇದೆ. ಪದಗಳನ್ನು ಎಚ್ಚರಿಕೆಯಿಂದ ಅಳವಡಿಸಿ, ನಾವು ನಿರ್ಧರಿಸಿದಂತೆ ಮತ್ತೆ ಸದನದಲ್ಲಿ ಮಂಡಿಸಬಹುದು. ಇದು ನನ್ನ ಸಲಹೆ ಮತ್ತು ನಾನು ಮನವಿ ಮಾಡುತ್ತೇನೆ.........

**ಗೌರವಾನ್ವಿತ ಬಿ.ಜಿ. ಖೇರ್** (ಬಾಂಬೆ : ಸಾಮಾನ್ಯ) : ನೀವು ಅದನ್ನು ಅಧ್ಯಕ್ಷರು ನೇಮಿಸಿದ ಇನ್ನೊಂದು ಸಮಿತಿಗೆ ಕಳಿಸಬಹುದು.

**ರೆ. ಜೆರೋಮ್ ಡಿಸೋಜಾ :** ನಾನು ಇದನ್ನು ಒಪ್ಪುತ್ತೇನೆ. ಈ ಬಗ್ಗೆ ಶಾಂತವಾದ ಚರ್ಚೆ ನಡೆಯಬೇಕು ಎಂಬುದು ನನ್ನ ಇರಾದೆ. ಸಭಾಧ್ಯಕ್ಷರು ಈಗಾಗಲೇ ನೇಮಿಸಿದ ಸಮಿತಿಗೆ ಈ ಖಂಡವನ್ನು ಕಳಿಸಬಹುದು.

**ಶ್ರೀ ಆರ್ ಕೆ ಸಿಧ್ವಾ :** ಸಮಿತಿಗೆ ವಾಪಸು ಕಳಿಸುವುದು ಬೇಡ.

**ಮಾನ್ಯ ಸಭಾಧ್ಯಕ್ಷರು** : ಈ ತಿದ್ದುಪಡಿ ಬಗ್ಗೆ ಮಾತನ್ನಾಡಲು ಬಯಸಿದ ಸದಸ್ಯರ ಪಟ್ಟಿ ನನ್ನ ಬಳಿ ಇದೆ. ಕೋರಿಕೆ ಸಲ್ಲಿಕೆಯ ಕ್ರಮಣಿಕೆಗೆ ಅನುಗುಣವಾಗಿ ಹೆಸರು ಕರೆಯುತ್ತೇನೆ. ಶ್ರೀ ಅಲಘುರಾಯ್ ಶಾಸ್ತ್ರಿ.

**ಶ್ರೀ ಅಲಘುರಾಯ್ ಶಾಸ್ತ್ರಿ** (ಯುಪಿ : ಸಾಮಾನ್ಯ) : *[ ಮಾನ್ಯ ಸಭಾಧ್ಯಕ್ಷರೇ, ಶ್ರೀ ಮುನ್ಷಿಯವರ ತಿದ್ದುಪಡಿಯನ್ನು ಬೆಂಬಲಿಸುತ್ತೇನೆ. ಈ ತಿದ್ದುಪಡಿಯನ್ನು ಅಂಗೀಕರಿಸುವುದರಿಂದ, ದುರಾಸೆಯಿಂದ ಮತಾಂತರಗೊಂಡ ಪೋಷಕರಿಂದ ಎಳೆಯರಿಗೆ ನ್ಯಾಯ ಸಲ್ಲಿಸಿದಂತೆ ಆಗಲಿದೆ ಎಂದು ನಂಬಿದ್ದೇನೆ. ಈ ಆಚರಣೆಯು ಭೂಮಿಯ ಮಾರಾಟದಲ್ಲಿ "ಭೂಮಿಯೊಂದಿಗೆ ಮರವೂ ಸೇರಿದೆ' ಎಂಬಂತೆ ಇದೆ. ಧಾರ್ಮಿಕ ಆಚರಣೆ ಇಲ್ಲವೇ ಬಲವಂತವಾಗಿ ಇಲ್ಲವೇ ಧರ್ಮದ ಬದಲಾವಣೆ ಎಂದರೆ ಏನೆಂದೇ ಗೊತ್ತಿಲ್ಲದವರು ತಮ್ಮ ಧರ್ಮವನ್ನು ತೊರೆದು ಪೋಷಕರೊಂದಿಗೆ ಹೋಗಬೇಕೆನ್ನುವುದು ಕೂಡ ಇಂಥ ಆಚರಣೆಯೇ. ಈ ಕೆಟ್ಟ ಆಚರಣೆ ಜನರ ಮೇಲೆ ವಿಪರಿಣಾಮ ಬೀರಿದೆ. ಮೂಲಭೂತ ಹಕ್ಕುಗಳನ್ನು ರೂಪಿಸುತ್ತಿರುವ ನಾವು ಮಕ್ಕಳನ್ನು ಇಂಥ ತನ್ನಿಂದ ತಾನೇ ಆಗುವ ಮತಾಂತರದಿಂದ ರಕ್ಷಿಸಬೇಕು. ನಮ್ಮ ಸಮಾಜದ ಚಲನಶೀಲ ಪ್ರವೃತ್ತಿಯಿಂದಾಗಿ ಸಂವಿಧಾನದಲ್ಲಿ ಇದನ್ನು ತಡೆಯಲು ಸೂಕ್ತ ಪ್ರಸ್ತಾವವನ್ನು ಅಳವಡಿಸುವುದು ಇನ್ನಷ್ಟು ಮುಖ್ಯವಾಗಲಿದೆ. ಪ್ರಬುದ್ಧರಾದ ಬಳಿಕ ಇಂಥ ಮಕ್ಕಳು ಮತಾಂತರ ಹೊಂದಿರುವುದಕ್ಕೆ ಪಶ್ಚಾತ್ತಾಪ ಪಡುತ್ತಾರೆ. ಯುರೋಪಿಯನ್ನರು ಇಲ್ಲವೇ ಯುರೋಪಿನ ಶ್ವೇತವರ್ಣೀಯರು ಇಡೀ ಜಗತ್ತನ್ನು ಆಳುತ್ತಿದ್ದು. ಇವರು ಹೋದಲ್ಲೆಲ್ಲ ಮಿಷನರಿಗಳು ವ್ಯಾಪಿಸಿದ್ದಾರೆ. ದಿಗ್ಬಿ ಅವರ "ಪ್ರಾಸ್ಪರಸ್ ಇಂಡಿಯಾ' ಅಧ್ಯಯನದ ಪ್ರಕಾರ, "ಶಿಲುಬೆಯನ್ನು ಕತ್ತಿ ಹಿಂಬಾಲಿಸಿತು'. ಮಿಷನರಿಗಳನ್ನು ಬೇಟನ್‌ಗಳು, ಕತ್ತಿ, ಬಂದೂಕುಗಳು ಹಿಂಬಾಲಿಸಿದ್ದು, ಬಲವಂತವಾಗಿ ತಮ್ಮ ಧರ್ಮವನ್ನು ಹೇರಿ, ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಿದರು. ಇದೇ ಹೊತ್ತಿಗೆ ದೇಶಿ ಮೂಲವಾಸಿಗಳ ಮೇಲೆ ಆರ್ಥಿಕ, ರಾಜಕೀಯ ಒತ್ತಡ ಹೇರಿ, ತಮ್ಮ ಸಾಮ್ರಾಜ್ಯದ ಬುನಾದಿಯನ್ನು ಭದ್ರ ಪಡಿಸಿಕೊಂಡರು. ಮೂಲಭೂತ ಹಕ್ಕುಗಳ ಈ ಖಂಡಕ್ಕೆ "ಹೊಸ ಧರ್ಮ ಹಳೆಯದಕ್ಕಿಂತ ಸೂಕ್ತವಾಗಿದೆ ಎಂದು ದೃಢ ಪಡಿಸಿಕೊಂಡ ಬಳಿಕವಷ್ಟೇ ವ್ಯಕ್ತಿ ಮತಾಂತರ ಹೊಂದಬಹುದು' ಎಂದು ತಿದ್ದುಪಡಿ ಮಾಡಬೇಕು. ಉದಾಹರಣೆಗೆ, ಹಿಂದೂ ಧರ್ಮಕ್ಕೆ ಹೋಲಿಸಿದರೆ ಸಿಖ್ ಧರ್ಮ ಉತ್ತಮ ಎಂದು ನನಗೆ ಖಾತ್ರಿಯಾದ ಬಳಿಕವಷ್ಟೇ ನಾನು ಮತ ಬದಲಾವಣೆ ಮಾಡಬಹುದು ಎಂದಾಗಬೇಕು. ಇಂಥ ಹಕ್ಕು ನಮಗಿದೆ. ಆದರೆ, ಯಾರೂ ದುರಾಸೆ ಇಲ್ಲವೇ ಆಮಿಷದಿಂದ ಧರ್ಮವನ್ನು ಬದಲಿಸಬಾರದು. ಧರ್ಮವೊಂದರ ಹಿಂಬಾಲಕರು ಕೆಲವೇ ಕೆಲವು ಸದಸ್ಯರಿರುವ ಕುಟುಂಬದ ಮೇಲೆ ಬಂದೂಕು, ಕತ್ತಿಗಳಿಂದ ಹಲ್ಲೆ ನಡೆಸಿದಾಗ, ಜೀವ ಉಳಿಸಿಕೊಳ್ಳಲು ಆ ಕುಟುಂಬವು ದಾಳಿಕೋರರ ಧರ್ಮವನ್ನು ಒಪ್ಪಿಕೊಳ್ಳಲೇಬೇಕಾಗುತ್ತದೆ. ಒತ್ತಡ ಮತ್ತು ನ್ಯಾಯವಲ್ಲದ ಪ್ರಭಾವ ಬಳಸಿ ಮಾಡಿದ ಇಂಥ ಮತಾಂತರವನ್ನು ರದ್ದುಗೊಳಿಸಬೇಕು ಹಾಗೂ ನಿಷ್ಪ್ರಯೋಜಕ ಎಂದು ಪರಿಗಣಿಸಬೇಕು. ಪ್ರಸ್ತುತ ಸನ್ನಿವೇಶದಲ್ಲಿ ಆಮಿಷ ಮತ್ತು ಪ್ರಲೋಭನೆ ಒಡ್ಡಿ ನಡೆಸುವ ಮತಾಂತರಗಳು, ಮತಾಂತರಗಳೇ ಅಲ್ಲ. ಕುಟುಂಬದ ಹಿರಿಯರಿಗೆ ಹಣದ ಆಸೆ ತೋರಿಸಿ

ಮತಾಂತರಗೊಳಿಸಿರುವ ಹಲವು ಪ್ರಕರಣಗಳನ್ನು ನಾನು ಕಳೆದ ೨೪ ವರ್ಷದಿಂದ ನೋಡಿದ್ದೇನೆ. ಪೋಷಕರ ಜೊತೆಗೆ ಮಕ್ಕಳೂ ಮತಾಂತರಗೊಂಡು ಹೊಸ ಧರ್ಮಕ್ಕೆ ಸೇರುತ್ತಿದ್ದಾರೆ. ಜಮೀನನ್ನು ಬಲವಂತದಿಂದ ಹಸ್ತಗತ ಮಾಡಿಕೊಂಡ ಬಳಿಕ, ಅಸಹಾಯಕ ಮರಗಳೂ ಹೊಸ ಯಜಮಾನನ ವಶವಾದಂತೆ ಈ ಸ್ಥಿತಿ ಇದೆ.

ದೇಶದ ನಿರ್ದಿಷ್ಟ ಭಾಗವೊಂದನ್ನು "ಪ್ರತ್ಯೇಕ ಪ್ರದೇಶ' ಎಂದು ಘೋಷಿಸಿ, ಅಲ್ಲಿ ನಿರ್ದಿಷ್ಟ ಮತವೊಂದು ಮಾತ್ರವೇ ಪ್ರಚಾರ ನಡೆಸಲು ಅವಕಾಶ ಮಾಡಿಕೊಡಲಾಗಿದೆ. ಇನ್ನೊಂದು ಭಾಗವನ್ನು 'ಕ್ರಿಮಿನಲ್ ಬುಡಕಟ್ಟು'ಗಳಿಗೆ ಮೀಸಲಾಗಿಡಲಾಗಿದೆ. ಮಿಷನರಿಗಳು ಚಟುವಟಿಕೆ ನಡೆಸಲು ಅನುವಾಗುವಂತೆ ಕೆಲ ಪ್ರದೇಶಗಳನ್ನು ಕಾಯ್ದಿರಿಸಲಾಗಿದೆ. ಚತ್ತೀಸ್‌ಘಡ ಸೇರಿದಂತೆ ಕೆಲ ಅರಣ್ಯ ಪ್ರದೇಶಗಳಲ್ಲಿನ ಆದಿವಾಸಿಗಳು ಆದಿಮ ನಂಬಿಕೆಗಳನ್ನು ಅನುಸರಿಸುತ್ತಿದ್ದು, ಇಲ್ಲಿ ಹಿಂದೂ ಮಿಷನರಿಗಳು ಕಾರ್ಯ ನಡೆಸಲು ಆಗುತ್ತಿಲ್ಲ. ಇವನ್ನು 'ಪ್ರತ್ಯೇಕಿಸಿದ ಹಾಗೂ ಅರೆ ಪ್ರತ್ಯೇಕಿಸಿದ ಪ್ರದೇಶ'ಗಳು ಎನ್ನಲಾಗಿದ್ದು, ಮಿಷನರಿಗಳು ಹೊರತುಪಡಿಸಿ ಬೇರೆಯವರು ಇಲ್ಲಿ ಧರ್ಮ ಪ್ರಚಾರ ನಡೆಸುವಂತಿಲ್ಲ. ಇದು ಸರ್ಕಾರದ ಕೇಡಿನ ಕಾರ್ಯನೀತಿ. ಇಂಥ ಧಾರ್ಮಿಕ ತಾರತಮ್ಯದಿಂದ ನಮಗೆ ಮುಕ್ತಿ ಸಿಗಬೇಕಿದೆ. ಡ್ಯೂಟನ್ ತಮ್ಮ ಪುಸ್ತಕ 'ಸೆನ್ಸಸ್ ಆಫ್ ಇಂಡಿಯಾ– ೧೯೩೦'ರಲ್ಲಿ ಅಸ್ಸಾಂನಲ್ಲಿ ಕ್ರಿಶ್ಚಿಯನ್ನರ ಜನಸಂಖ್ಯೆ ೩೦೦ ಪಟ್ಟು ಹೆಚ್ಚಳಗೊಂಡಿದ್ದು, ಹಿಂದೂ ಧರ್ಮದಲ್ಲಿನ ಕೆಲ ಕೆಡುಕುಗಳು ಇದಕ್ಕೆ ಕಾರಣ. ಇಂಥ ಕೆಡುಕುಗಳೇ ಮಿಷನರಿಗಳಿಗೆ ಮತಾಂತರಗೊಳಿಸಲು ಅವಕಾಶ ನೀಡಿವೆ ಎಂದಿದ್ದಾರೆ. ತಮ್ಮ ಪುಸ್ತಕ "ಸೆನ್ಸಸ್ ಆಫ್ ಇಂಡಿಯಾ ೧೯೧೧'ರಲ್ಲಿ ಎಸ್. ಕಾಮತ್,"ನಿರ್ದಿಷ್ಟ ಧರ್ಮವೊಂದರ ಮಿಷನರಿಗಳು ಇನ್ನೊಂದು ಧರ್ಮದಲ್ಲಿನ ಕೆಡುಕುಗಳನ್ನು ಬಳಸಿಕೊಂಡು, ಆ ಧರ್ಮದವರ ಸಂಖ್ಯೆ ಕಡಿತಗೊಳ್ಳಲು ಕಾರಣರಾಗಿದ್ದಾರೆ' ಎಂದಿದ್ದಾರೆ. ಅವರು ಒತ್ತಡ ಹಾಗೂ ಆಮಿಷವೊಡ್ಡಿ ಸಮುದಾಯದ ಪ್ರಭಾವಿಗಳನ್ನು ಮತಾಂತರಗೊಳಿಸುತ್ತಾರೆ. ಪ್ರಸ್ತುತದ ಕಹಿ ವಾತಾವರಣಕ್ಕೆ ಇಂಥ ಚಟುವಟಿಕೆಗಳು ಕಾರಣ. ಹಿಂದುಳಿದ ವರ್ಗಗಳವರಿಗೆ ಕ್ರಿಶ್ಚಿಯನ್ ಮಿಷನ್‌ಗಳು ಮಾಡಿರುವ ಸೇವೆಯನ್ನು ಕಂಡಿದ್ದೇನೆ ಹಾಗೂ ಆ ಬಗ್ಗೆ ಅರಿತಿದ್ದೇನೆ. ಅವರ ಕೆಲಸಕ್ಕೆ ಶಿರ ಬಾಗಿ ನಮಿಸುತ್ತೇನೆ. ಅವರು ಸಮಾಜ ಸೇವೆಗೆ ಮಾತ್ರವೇ ಈ ಕೆಲಸ ಮಾಡಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು. ಚಮ್ಮಾರರು ಮತ್ತು ಜಾಡಮಾಲಿ ಸಮುದಾಯ ಹಾಗೂ ಜಮೀನ್ದಾರರು ಮತ್ತು ಇತರ ಪ್ರಭಾವಿಗಳ ನಡುವೆ ಸಂಘರ್ಷ ಏರ್ಪಟ್ಟಾಗ, ಅದನ್ನು ಬಳಸಿಕೊಂಡು ಎರಡು ಗುಂಪುಗಳ ನಡುವೆ ಕಹಿ ಭಾವನೆಯನ್ನು ಸೃಷ್ಟಿಸುವ ಯತ್ನ ನಡೆಯಿತು. ಆದರೆ, ಸಂಧಾನಕ್ಕೆ ಯಾವುದೇ ಪ್ರಯತ್ನ ನಡೆಯಲಿಲ್ಲ. ಬದಲಿಗೆ, ಮತಾಂತರಕ್ಕೆ ಮುಂದಾಗಲಾಯಿತು. ಬೇರೆ ಧರ್ಮಗಳವರು ನಮ್ಮಲ್ಲಿನ ಬೇದಭಾವವನ್ನು ಬಳಸಿಕೊಂಡು, ತಮ್ಮ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಲು ಹೊರಟರು. ಭಂಗಿಗಳು, ಚಮ್ಮಾರರು ಮತಾಂತರಗೊಂಡರು, ಜತೆಗೆ, ಅವರ ಮಕ್ಕಳೂ ಹೊಸ ಧರ್ಮಕ್ಕೆ ಸೇರ್ಪಡೆಯಾದರು. ಅವರೆಲ್ಲರರನ್ನೂ ಸಹೋದರರಂತೆ ಬದುಕಲು ಬಿಡಬೇಕಿತ್ತು. ಇದನ್ನೇ ಪ್ರವಾದಿಗಳು, ಕಿನ್ನರರು ಮತ್ತು ಧಾರ್ಮಿಕ ಗುರುಗಳು ಕಲಿಸಿದ್ದು, ಆದರೆ, ಅದನ್ನು ಆಚರಿಸುತ್ತಿಲ್ಲ. ನಾವು ಅಕ್ರಮ ನಡೆಸಲು ಅವಕಾಶಗಳಿಗಾಗಿ ಕಾಯುತ್ತೇವೆ. ಜನರ ಬಳಿಗೆ ಹೋಗಿ, "ನೀವು ಕತ್ತಲಿನಲ್ಲಿ ಇದೀರಿ. ಇದು ನಿಮ್ಮ ಮುಕ್ತಿಗೆ ದಾರಿಯಲ್ಲ' ಎನ್ನುತ್ತೇವೆ. ನ್ಯಾಯಸಮ್ಮತವಲ್ಲದ ಎಲ್ಲ ಕೆಲಸಗಳ ಮೂಲಕ ಬಹುಸಂಖ್ಯಾತರನ್ನು ತುಳಿಯಲಾಗುತ್ತಿದೆ. ಆಳುತ್ತಿರುವ ವಿದೇಶಿ ಅಧಿಕಾರಶಾಹಿ ಕೆಲಸ ಮಾಡುವ ರೀತಿ ಇದಾಗಿದ್ದು, ಜನರ ಮೇಲಿನ ತನ್ನ ರಾಜಕೀಯ ಬಿಗಿ ಹಿಡಿತವನ್ನು ಕಾಯ್ದುಕೊಳ್ಳಲು ಪಟ್ಟಭದ್ರ ಹಿತಾಸಕ್ತಿಗಳನ್ನು ಸೃಷ್ಟಿಸುತ್ತಿದೆ. ಇಂಥ ಬುನಾದಿಯನ್ನು ತೆಗೆದುಹಾಕಲು ಆಗದಿದ್ದರೆ, ನಾವು ಯಾರಿಗೆ ಮೂಲಭೂತ ಹಕ್ಕು ಕೊಡುತ್ತಿದ್ದೇವೆ? ಪೋಷಕರ ತೊಡೆ ಮೇಲೆ ಕುಳಿತ ಬಾಲಕರಿಗೆ? ಅಪ್ರಬುದ್ಧರನ್ನು ಜಮೀನಿನ ಜೊತೆಗಿನ ಮರದಂತೆ ವರ್ಗಾವಣೆಗೆ ಅನುಮತಿ ನೀಡಿದರೆ, ನಾವು ಅನ್ಯಾಯ ಮಾಡಿದಂತೆ ಆಗಲಿದೆ. ಮತಾಂತರಕ್ಕೆ ಅನುಮತಿ ನೀಡಲು ಹಲವು ಸುಳ್ಳು

ವಾದ ಮಾಡಲಾಗುತ್ತದೆ. ಆಮಿಷವೊಡ್ಡಿ ನಡೆಸುವ ಮತಾಂತರಗಳನ್ನು ತಡೆಯುವಲ್ಲಿನ ನಮ್ಮ ವೈಫಲ್ಯವು ತೀವ್ರ ಅನ್ಯಾಯಕ್ಕೆ ಕಾರಣವಾಗಲಿದೆ. ನನಗೆ ನನ್ನ ಧರ್ಮವನ್ನು ಬದಲಿಸಲು ಹಕ್ಕು ಇದೆ. ನಾನು ದೇವರನ್ನು ನಂಬುತ್ತೇನೆ. ಆದರೆ, ಒಂದು ವೇಳೆ ದೇವರು ನಕಲಿ, ಆತ ಮನುಷ್ಯನ ಸೃಷ್ಟಿ ಎಂದು ಸ್ಪಷ್ಟವಾದರೆ, ನಾನು ನಾಸ್ತಿಕನಾಗಬಹುದು. ಹಿಂದೂ ಧರ್ಮವು ಪೊಳ್ಳು ಎನಿಸಿದಲ್ಲಿ ಬಿಳಿ ಕೂದಲು, ಉದುರಿದ ದಂತ ಪಂಕ್ತಿ ಹಾಗೂ ಹಣ್ಣು ವಯಸ್ಸಿನ ನಾನು, ವಿವೇಚನೆಯಂತೆ ನನ್ನ ಧರ್ಮವನ್ನು ಬದಲಿಸಬಹುದು. ಆದರೆ, ನನ್ನ ಸಣ್ಣ ವಯಸ್ಸಿನ ಮಗ ನಾನು ಹೇಳಿದ್ದನ್ನು ಪುನರಾವರ್ತಿಸಿದರೆ, ಆತನಿಗೆ ಧರ್ಮವನ್ನು ಬದಲಿಸಲು ನೀವು ಅನುಮತಿ ನೀಡುತ್ತೀರಾ? ಮಗ ಸ್ಥಿರಾಸ್ತಿಯನ್ನು ೧೦೦ ರೂ.ಗೆ ವರ್ಗಾಯಿಸಿದರೆ, ಆ ವ್ಯವಹಾರ ಕಾನೂನು ಸಮ್ಮತವಲ್ಲ ಎಂದು ಶ್ರೀ ಪುರುಷೋತ್ತಮ ದಾಸ್ ಟಂಡನ್ ಅವರು ಹೇಳಿದರು. ಅದೇ ರೀತಿ, ಸಣ್ಣ ವಯಸ್ಸಿನವರ ಮತಾಂತರ ಕೂಡ ಅನೂರ್ಜಿತವಲ್ಲವೇ? ಅಮಾಯಕ ಮಕ್ಕಳ ಮನಸ್ಸಿನ ಮೇಲೆ ಇದು ವಿಪರಿಣಾಮ ಬೀರುತ್ತದೆ. ಜನಸಂಖ್ಯೆಯನ್ನು ಹೆಚ್ಚಿಸುವ ಇಂಥ ಪ್ರಯತ್ನಗಳು ಧಾರ್ಮಿಕ ಅಸಹಿಷ್ಣುತೆ ಹೆಚ್ಚಲು ಕಾರಣವಾಗಿವೆ. ಕೋಮುವಾರು ಅನುಪಾತ ಬದಲಾಗಿದ್ದು, ನಾನಾ ಸಮುದಾಯಗಳ ಜನಸಂಖ್ಯೆಯನ್ನು ಮಾರ್ಪಾಡು ಮಾಡುವ ಮೂಲಕ ಬ್ರಿಟಿಷ್ ಅಧಿಕಾರಶಾಹಿ ತನ್ನ ಹಿಡಿತ ಬಲಗೊಳಿಸಿಕೊಂಡಿತು. ನಾನು ಇದನ್ನೆಲ್ಲ ಬುದ್ಧಿಪೂರ್ವಕವಾಗಿಯೇ ಹೇಳುತ್ತಿದ್ದು, ಯಾವುದೇ ನಿರ್ದಿಷ್ಟ ಧರ್ಮದ ವಿರುದ್ಧ ವಾಗ್ದಾಳಿ ನಡೆಸುತ್ತಿಲ್ಲ. ಸಮುದಾಯಗಳು ತಮ್ಮಲ್ಲೇ ಹೊಡೆದಾಡಿಕೊಳ್ಳುವಂತೆ ಮಾಡುತ್ತ, ತನ್ನ ಆಡಳಿತವನ್ನು ಬಲಗೊಳಿಸಿಕೊಳ್ಳಲು ಸರ್ಕಾರ ಜನಗಣತಿ ಎಂಬ ಭ್ರಮಾತ್ಮಕ ಬಲೆಯನ್ನು ಹೆಣೆದಿದೆ. ಸಮುದಾಯಗಳ ಜನಸಂಖ್ಯೆಯಲ್ಲಿ ಸಮತೋಲನ ಸಾಧಿಸಿ,ತನ್ನ ಆಡಳಿತವನ್ನು ಬಲಪಡಿಸಿಕೊಂಡಿತು. ಇಂಥ ಉದ್ದೇಶದ ವಿರುದ್ಧ ಶ್ರೀ ಮುನ್ಷಿಯವರ ತಿದ್ದುಪಡಿ ಇದೆ. ಇದಕ್ಕಿಂತ ಉತ್ತಮವಾದದ್ದು ಇರಲು ಸಾಧ್ಯವಿಲ್ಲ. ಹೀಗಾಗಿ, ನಾನು ತಿದ್ದುಪಡಿಯನ್ನು ಬೆಂಬಲಿಸುತ್ತೇನೆ.

ನನ್ನ ಪ್ರಕಾರ, ಬಹುಸಂಖ್ಯಾತ ಸಮುದಾಯ ಅಲ್ಪಸಂಖ್ಯಾತರನ್ನು ಶೋಷಿಸಬಾರದು. ನಾವು ಎಲ್ಲರನ್ನೂ ಗೌರವಿಸುತ್ತೇವೆ, ಮಾನ್ಯತೆ ನೀಡುತ್ತೇವೆ ಹಾಗೂ ಎಲ್ಲರಿಗೂ ಮತಪ್ರಚಾರಕ್ಕೆ ಅವಕಾಶ ನೀಡುತ್ತೇವೆ. ಆದರೆ, ಯಾರನ್ನು ಮತಾಂತರಿಸಬಹುದೋ ಅವರನ್ನು ಮಾತ್ರ ಮತಾಂತರಿಸಿ. ನಿಮ್ಮ ಧರ್ಮವನ್ನು ಒಪ್ಪುವವರನ್ನು ಮತಾಂತರಗೊಳಿಸಬಹುದು. ಆದರೆ, ಯಾರನ್ನು ಕಾನೂನುಬದ್ಧವಾಗಿ ಮತಾಂತರಿಸಬಹುದೋ ಅವರನ್ನು ಮಾತ್ರ ಮತಾಂತರಿಸಬೇಕು. ಅನುಚಿತ ಮತಾಂತರ ಸರಿಯಲ್ಲ. ವಸ್ತ್ರ, ತುಂಡು ಬ್ರೆಡ್ ಹಾಗೂ ಆಟದ ಬೊಂಬೆಯ ಆಮಿಷವೊಡ್ಡಿ,ನಿಮ್ಮ ತೊಡೆಯ ಮೇಲೆ ಕುಳಿತುಕೊಳ್ಳುವ ಸಣ್ಣ ಮಕ್ಕಳ ಬದುಕು ಹಾಳು ಮಾಡಬಾರದು. ಭವಿಷ್ಯದಲ್ಲಿ ಆ ಮಕ್ಕಳು ತಮ್ಮ ಆಯ್ಕೆಯ ಧರ್ಮ ತಮ್ಮದಾಗಲಿಲ್ಲ ಎಂದು ಪಶ್ಚಾತ್ತಾಪ ಪಡಬಹುದು. ನಾನು ನನ್ನ ಧರ್ಮವನ್ನು ಬದಲಿಸಲು ಸಿದ್ಧನಿದ್ದೇನೆ. ಆದರೆ, ನನ್ನ ಜೊತೆ ವಾದ ಮಾಡಿ, ನನ್ನ ನಿಲುವುಗಳನ್ನು ಬದಲಿಸಬೇಕು, ಬಳಿಕ ನನ್ನನ್ನು ಮತಾಂತರಿಸಿ. ಖಂಡಿತವಾಗಿಯೂ, ನಿರ್ದಿಷ್ಟ ವಯಸ್ಸಿಗಿಂತ ಸಣ್ಣ ಮಕ್ಕಳನ್ನು ಮತಾಂತರಗೊಳಿಸುವ ಹಕ್ಕು ನನಗೆ ಇರಬಾರದು, ೧೮ ವರ್ಷಕ್ಕಿಂತ ಕಡಿಮೆ ವಯಸ್ಸಿನವರನ್ನು ಅಪ್ರಬುದ್ಧರು ಎಂದು ಪರಿಗಣಿಸಬೇಕು.]*

**ಶ್ರೀ ಎಚ್.ವಿ. ಕಾಮತ್** : *[ಹದಿಹರೆಯದವರಲ್ಲಿ ೧೯ ವರ್ಷದವರೂ ಸೇರಿದ್ದಾರೆ]*

**ಶ್ರೀ ಅಲಘು ರಾಯ್ ಶಾಸ್ತ್ರಿ** : *[೧೯ ವರ್ಷವಾದರೆ, ಇನ್ನೂ ಒಳ್ಳೆಯದು. ಸಾಧ್ಯವಾದರೆ, ಇನ್ನೂ ಒಂದು ವರ್ಷ ಹೆಚ್ಚಿಸಿದರೆ ಒಳ್ಳೆಯದು. ಅಪ್ರಬುದ್ಧರು ಮತ್ತು ಪ್ರಬುದ್ಧರ ವಯೋಮಿತಿ ನಿಗದಿಯನ್ನು ಧಾರ್ಮಿಕ ವಿಷಯಕ್ಕೂ ಅನುಸರಿಸಬೇಕು. ಪೋಷಕರು ಮಕ್ಕಳನ್ನು ತೊರೆದಲ್ಲಿ ಮತಾಂತರಕ್ಕೆ ಪ್ರೋತ್ಸಾಹ ಸಿಗುವುದಿಲ್ಲ ಎಂದು ಕೇಳಿದ್ದೇನೆ. ಜಪಾನ್‌ನಲ್ಲಿ ತಂದೆ ಒಂದು ಧರ್ಮ ಹಾಗೂ ಮಗು ಇನ್ನೊಂದು ಧರ್ಮದಲ್ಲಿ ಇರುತ್ತಾರಂತೆ. ಧರ್ಮ ಎಂದರೇನು? ಮಗುವಿನ ಧರ್ಮ ಬದಲಾಗುತ್ತದೆ ಎಂದ ಮಾತ್ರಕ್ಕೆ

ತಾಯಿ ಹಾಲು ಕುಡಿಸುವುದಿಲ್ಲವೇ? ತಾಯಿಯ ಪ್ರೇಮ ನಿಜವಾಗಿದ್ದಲ್ಲಿ ಆಕೆ ಮಗುವಿಗೆ ಹಾಲುಣಿಸುತ್ತಾಳೆ. ತಾಯಿಯ ಹಾಲು ಧರ್ಮವನ್ನು ಬದಲಿಸುವುದೇ? ತಾಯಿಯ ತೆಕ್ಕೆಯಿಂದ ಮಗುವನ್ನು ಕಿತ್ತುಕೊಳ್ಳಲು ನಾವು ಇಚ್ಛಿಸುವುದಿಲ್ಲ. ಆದರೆ, ಜನಗಣತಿ ಹಾಗೂ ಇತರ ಸರ್ಕಾರಿ ದಾಖಲೆಗಳಲ್ಲಿ ಮಗುವಿನ ಮೂಲ ಧರ್ಮದ ಹೆಸರು ಇರಬೇಕು ಎಂದು ಬಯಸುತ್ತೇವೆ. ಆತ ಪ್ರಬುದ್ಧನಾಗಿ ತನ್ನ ಹೊಸ ಧರ್ಮ ಯಾವುದು ಎಂಬುದನ್ನು ಘೋಷಿಸುವವರೆಗೆ ಇದು ಅಗತ್ಯ. ಈ ತಿದ್ದುಪಡಿಯಲ್ಲಿ ನಾವು ಮಗುವಿಗೆ ಬೇಕಿದ್ದನ್ನು ನಿಜವಾಗಿಯೂ ಕೊಡುತ್ತೇವೆ. ಮಕ್ಕಳ ಸಹವಾಸ ಪೋಷಕರಿಗೆ ಬೇಕು. ಒಂದು ವೇಳೆ ಅವರು ತಮ್ಮ ಧರ್ಮವನ್ನು ವಿವೇಚನೆಯಿಂದ ಬದಲಿಸಿದ್ದರೆ, ಆ ಕುರಿತು ಮಕ್ಕಳಿಗೆ ತಿಳಿಸಿಕೊಡಲಿ. ಆದರೆ, ಮಕ್ಕಳ ಧರ್ಮ ಯಾವುದು ಎಂಬುದನ್ನು ಅವರು ಪ್ರಬುದ್ಧರಾದ ಬಳಿಕವಷ್ಟೇ ಪರಿಗಣಿಸಬೇಕು. ಈ ತಿದ್ದುಪಡಿಯ ಉದ್ದೇಶ ಇದು. ನಾನು ತಿದ್ದುಪಡಿಯನ್ನು ಬೆಂಬಲಿಸುತ್ತೇನೆ, ಮಗುವಿಗೆ ಇಂಥ ಹಕ್ಕು ಕೊಡಬಾರದು ಎಂಬುದನ್ನು ಬಲವಾಗಿ ವಿರೋಧಿಸುತ್ತೇನೆ]*

**ಶ್ರೀ ಜಗತ್ ನಾರಾಯಣ ಲಾಲ್** (ಬಿಹಾರ : ಸಾಮಾನ್ಯ): *[ಸಭಾಧ್ಯಕ್ಷರೇ, ೧೩ನೇ ಖಂಡವನ್ನು ಅಂಗೀಕರಿಸಿದ ಬಳಿಕ ಸದನದಲ್ಲಿರುವ ಅಲ್ಪಸಂಖ್ಯಾತ ಪ್ರತಿನಿಧಿಗಳಿಗೆ ಆಕ್ಷೇಪ ಎತ್ತಲು ಯಾವುದೇ ಕಾರಣ ಇರಲಿಲ್ಲ.

೧೩ನೇ ಖಂಡ ಹೇಳುತ್ತದೆ:

"ಎಲ್ಲರಿಗೂ ಸಮಾನವಾಗಿ ಆತ್ಮಸಾಕ್ಷಿಯ ಸ್ವಾತಂತ್ರ್ಯವಿದೆ ಹಾಗೂ ಧರ್ಮದ ಆಚರಣೆ, ಬೋಧನೆ ಮತ್ತು ಪ್ರಸಾರದ ಹಕ್ಕು ಇದೆ. ಸಾರ್ವಜನಿಕ ಸುವ್ಯವಸ್ಥೆ ನೈತಿಕತೆ ಇಲ್ಲವೇ ಆರೋಗ್ಯಕ್ಕೆ ಹಾಗೂ ಈ ಭಾಗದ ಇತರ ಪ್ರಸ್ತಾವಗಳಿಗೆ ಇದರಿಂದ ಯಾವುದೇ ಧಕ್ಕೆ ಆಗಬಾರದು".

ಇದು 'ಅತಿ ದೂರದ ಎಲ್ಲೆಕಟ್ಟು'ವರೆಗೆ ಹೋಗುತ್ತದೆ.

'ಆಧುನಿಕ' ಜಗತ್ತಿನ ಸಂವಿಧಾನಗಳನ್ನು ನೋಡಿದರೆ, ಧರ್ಮಪ್ರಸಾರದ ಹಕ್ಕನ್ನು ಎಲ್ಲಿಯೂ ಕೊಡಲಾಗಿಲ್ಲ. ಸ್ವಿಟ್ಜರ್ಲೆಂಡ್ ಒಕ್ಕೂಟದ ೫೦ನೇ

ವಿಧಿಯಲ್ಲಿ 'ಸಾರ್ವಜನಿಕ ಸುವ್ಯವಸ್ಥೆ ಮತ್ತು ಸದಾಚಾರಕ್ಕೆ ಅನುಗುಣವಾಗಿ ಧರ್ಮದ ಮುಕ್ತ ಆಚರಣೆಯನ್ನು ಖಾತ್ರಿ ಪಡಿಸಲಾಗಿದೆ' ಎನ್ನಲಾಗಿದೆ. ಇಷ್ಟು ಸಾಕು ಎನ್ನಿಸುತ್ತದೆ. ಐರ್ಲೆಂಡ್ ಸಂವಿಧಾನದ ವಿಧಿ ೪೪, ಉಪ ಖಂಡ (೨)೧ರಲ್ಲಿ,

'ಆತ್ಮ ಸಾಕ್ಷಿ ಹಾಗೂ ಧಾರ್ಮಿಕ ಆಚರಣೆಯ ಸ್ವಾತಂತ್ರ್ಯ ,ಧರ್ಮ ಪ್ರಚಾರವು ಸಾರ್ವಜನಿಕ ಸುವ್ಯವಸ್ಥೆ ಮತ್ತು ಸದಾಚಾರಕ್ಕೆ ಅನುಗುಣವಾಗಿರಬೇಕು'ಎನ್ನಲಾಗಿದೆ.

ಸೋವಿಯತ್ ಗಣರಾಜ್ಯದ ಸಂವಿಧಾನದ ೧೨೪ನೇ ವಿಧಿ ಹೇಳುತ್ತದೆ,

'ಜನರಿಗೆ ಆತ್ಮಸಾಕ್ಷಿಯ ಸ್ವಾತಂತ್ರ್ಯವನ್ನು ನೀಡಲು, ರಾಜ್ಯವನ್ನು ಚರ್ಚ್‌ನಿಂದ ಮತ್ತು ಶಾಲೆಯನ್ನು ಚರ್ಚ್‌ನಿಂದ ಪ್ರತ್ಯೇಕಿಸಲಾಗಿದೆ. ಧಾರ್ಮಿಕ ಆಚರಣೆಯ ಹಕ್ಕು ಮತ್ತು ಧರ್ಮವಿರೋಧ ಪ್ರಚಾರದ ಹಕ್ಕನ್ನು ಎಲ್ಲ ಪ್ರಜೆಗಳಿಗೂ ನೀಡಲಾಗಿದೆ'.

'ಧರ್ಮ ಪ್ರಸಾರದ ಹಕ್ಕು' ಕುರಿತ ಎಲ್ಲ ಕಾನೂನುಗಳನ್ನು ಹೇಳಿದರೆ, ನಿಮ್ಮ ತಾಳ್ಮೆ ನಶಿಸೀತು. ಈ ಸಂಬಂಧ ನಿಮ್ಮ ಸಮಯ ವ್ಯರ್ಥಗೊಳಿಸಲಾರೆ. ಅಲ್ಪಸಂಖ್ಯಾತರಿಗೆ ಸಂಬಂಧಿಸಿದಂತೆ,ಈ ಸದನ ಎಷ್ಟು ಸಾಧ್ಯವೋ ಅಷ್ಟು ದೂರ ಕ್ರಮಿಸಿದೆ, ದೇಶದಲ್ಲಿರುವ ಹಲವು ಅಲ್ಪಸಂಖ್ಯಾತರ ಧರ್ಮ ಪ್ರಸಾರ ದ ಹಕ್ಕುಗಳು ಹಲವು ಸಮಸ್ಯೆಗಳನ್ನು ಹುಟ್ಟು ಹಾಕಿದ್ದರೂ. ಈ ಕುರಿತ ವಿವರಗಳು ಬೇಡ. ಹಿಂದಿನ ಭಾಷಣಕಾರರು ಈ ಸಂಬಂಧ ಕೆಲವು ವಿಷಯಗಳನ್ನು ಉಲ್ಲೇಖಿಸಿದಾರೆ. ಅಷ್ಟು ಸಾಕು ಎಂದುಕೊಂಡಿದ್ದೇನೆ.

ಧರ್ಮ ಪ್ರಚಾರದ ಕುರಿತು ಶ್ರೀ ಟಂಡನ್ ಅವರು ಬಹುತೇಕ ಕಾಂಗ್ರೆಸಿಗರ ಮನಸಿನಲ್ಲಿ ಇದ್ದುದನ್ನು ಹೇಳಿದ್ದಾರೆ. 'ಮತಪ್ರಚಾರ' ದ ಹಕ್ಕು ಬೇಡ(ಲಿಖಿತ ಶಾಸನ ರೂಪದಲ್ಲಿ) ಎಂಬ ಅವರ ನಿಲುವು ನಮ್ಮ ಅಭಿಪ್ರಾಯವೂ ಆಗಿತ್ತು. ವಾಸ್ತವವೆಂದರೆ, ಅಲ್ಪಸಂಖ್ಯಾತರಿಗೆ ನೀಡಲಾದ ಹಕ್ಕುಗಳು ಮುಂದುವರಿಯುತ್ತವೆ, ಬಹುಸಂಖ್ಯಾತರ ತಾರ್ಕಿಕವಾದ ಮಿತಿಗಳಲ್ಲಿ. ನಾವು ಯಾವ ಕಾರಣಕ್ಕೂ ಅವರ ಹಕ್ಕುಗಳನ್ನು ಮೊಟಕು ಮಾಡುವುದಿಲ್ಲ. ಆದರೆ, ಧರ್ಮ ಪ್ರಚಾರದ ಹಕ್ಕನ್ನು ಕೊಡಲಾಗುವುದಿಲ್ಲ. ಅಲ್ಪಸಂಖ್ಯಾತರ ಪರವಾಗಿ ಮಾತನ್ನಾಡುವವರು ಹೆಚ್ಚು ಒತ್ತಾಯ ಮಾಡಬಾರದು ಎಂದು ಮನವಿ ಮಾಡುತ್ತೇನೆ. ಅವರು ಇಷ್ಟಕ್ಕೆ ತೃಪ್ತಿ ಪಡಬೇಕು. ಇದಕ್ಕಿಂತ ಹೆಚ್ಚು ಕೇಳಬಾರದು. ಇದರಿಂದ ಬಹುಸಂಖ್ಯಾತರ ಸೌಜನ್ಯದ ದುರುಪಯೋಗ ಆಗಲಿದೆ. ಆ ಮಿತಿಯವರೆಗೆ ಹೋಗುವುದು ನಮಗೆ ಕಷ್ಟ, ಅಷ್ಟೇಕೆ ಅಸಾಧ್ಯ. ಧರ್ಮಪ್ರಚಾರದ ಹಕ್ಕು ನೀಡಿದಲ್ಲಿ, ಶ್ರೀ ಮುನ್ಷಿಯವರು ಮಂಡಿಸಿದ ತಿದ್ದುಪಡಿಯು ಅತ್ಯಗತ್ಯವಾಗಲಿದೆ. ಹೀಗಾಗಿ, ಸದನ ಅದನ್ನು ಅಂಗೀಕರಿಸಬೇಕು. ಸದನದಲ್ಲಿ ನಾನಾ ವಾದವಿವಾದ ನಡೆದಿದ್ದು, ಅದರ ಬಗ್ಗೆ ವ್ಯಾಖ್ಯಾನ ಮಾಡಲಾರೆ. ಈ ಮಾತಿನೊಂದಿಗೆ ನಾನು ಶ್ರೀ ಮುನ್ಷಿ ಅವರನ್ನು ಬೆಂಬಲಿಸುತ್ತೇನೆ.]*

**ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯ ಸಭಾಧ್ಯಕ್ಷರೇ, ನಾನು ಮುನ್ಷಿಯವರು ಮಂಡಿಸಿದ ಅಪ್ರಬುದ್ಧ ವಯಸ್ಕರ ಮತಾಂತರ ಕುರಿತ ತಿದ್ದುಪಡಿ ಪರವಾಗಿ ಇಲ್ಲ. ಸಣ್ಣ ವಯಸ್ಸಿನ ಮಕ್ಕಳ ಮತಾಂತರಕ್ಕೆ ಸಂಬಂಧಿಸಿದಂತೆ ಮೂಲಭೂತ ಹಕ್ಕು ಸಮಿತಿ ಇಲ್ಲವೇ ಅಲ್ಪ ಸಂಖ್ಯಾತರ ಉಪಸಮಿತಿ ಅಥವಾ ಸಲಹಾ ಸಮಿತಿ ಪರಿಗಣಿಸಿಯೇ ಇಲ್ಲವೇನೋ ಎಂಬ ಅಭಿಪ್ರಾಯವನ್ನು ಈ ಖಂಡ ಮೂಡಿಸಿರಬಹುದು. ಈ ಪ್ರಶ್ನೆ ಕುರಿತು ಸಾಕಷ್ಟು ಚರ್ಚೆ ನಡೆದಿದೆ ಹಾಗೂ ಎಲ್ಲ ಆಯಾಮಗಳನ್ನೂ ಪರಿಗಣಿಸಲಾಗಿದೆ ಎಂದು ದೃಢಪಡಿಸುತ್ತೇನೆ. ಪ್ರಶ್ನೆಯ ಎಲ್ಲ ಮುಖಗಳನ್ನು ಪರಿಶೀಲಿಸಿ ಹಾಗೂ ಸಮಸ್ಯೆಗಳನ್ನು ಪರಿಗಣಿಸಿ ನಾವು ಎಂದರೆ ಸಲಹಾ ಸಮಿತಿ, ಈಗಿರುವಂತೆಯೇ ಖಂಡವನ್ನು ಪರಿಗಣಿಸಲು ನಿರ್ಧರಿಸಿತು.

ಮಾನ್ಯರೇ, ಸಮಸ್ಯೆ ಕ್ಲಿಷ್ಟವಾಗಿರುವುದರಿಂದ, ಬೇರೆ ಯಾವುದೇ ದಾರಿ ಇಲ್ಲದೆ ಶ್ರೀ ಮುನ್ಷಿಯವರು ತಿದ್ದುಪಡಿಯನ್ನು ಕೈಬಿಡಬೇಕೆಂದು ಕೋರುತ್ತೇನೆ. ಮಕ್ಕಳಿಗೆ ಸಂಬಂಧಿಸಿದಂತೆ ಮೂರು ಸಾಧ್ಯತೆಗಳನ್ನು ಚಿತ್ರೀಕರಿಸಬಹುದು. ಮೊದಲಿಗೆ, ಪೋಷಕರು ಹಾಗೂ ಸಂರಕ್ಷಕರಿರುವ ಮಕ್ಕಳು. ಎರಡನೆಯದಾಗಿ, ಕಾನೂನಿನ ದೃಷ್ಟಿಯಲ್ಲಿ ಪೋಷಕರು ಮತ್ತು ರಕ್ಷಕರಿಲ್ಲದ ಅನಾಥರು. ಒಂದು ವೇಳೆ ನೀವು ೧೮ ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಮತಾಂತರವನ್ನು ನಿಷೇಧಿಸಿದರೆ, ಈ ಅನಾಥ ಮಕ್ಕಳ ಕಥೆಯೇನು? ಅವರಿಗೆ ಧರ್ಮವೆಂಬುದು ಬೇಡವೇ? ಅವರ ಬಗೆಗೆ ಯಾರಾದರೂ ಆಸಕ್ತಿ ತೋರಿಸಿ, ಧಾರ್ಮಿಕ ಶಿಕ್ಷಣ ನೀಡಲು ಮುಂದಾದರೆ, ಅವರು ಅದಕ್ಕೆ ಹೊರತಾಗಬೇಕೇ? ಒಂದು ವೇಳೆ ಮುನ್ಷಿಯವರ ತಿದ್ದುಪಡಿಯನ್ನು ಅಂಗೀಕರಿಸಿದರೆ, ಅಂದರೆ, ೧೮ ವರ್ಷಕ್ಕಿಂತ ಕಡಿಮೆ ವಯಸ್ಸಿನವರನ್ನು ಮತಾಂತರಗೊಳಿಸಬಹುದು ಎಂದಾದಲ್ಲಿ ಕಾನೂನಿನ್ವಯ ಪೋಷಕರಿಲ್ಲದ ಅನಾಥ ಮಕ್ಕಳು ಧಾರ್ಮಿಕ ಶಿಕ್ಷಣ ಪಡೆಯುವುದು ಸಾಧ್ಯವಿಲ್ಲ. ಇದು ಸದನ ನಿರೀಕ್ಷಿಸಿದ್ದ, ಸಂತಸ ತರುವ ಫಲಿತಾಂಶವಲ್ಲ ಎಂದು ನನಗೆ ಖಾತ್ರಿ ಇದೆ. ಆದ್ದರಿಂದ ಈ ವರ್ಗದ ಪ್ರಜೆಗಳನ್ನು ಶ್ರೀ ಮುನ್ಷಿಯವರ ಉದ್ದೇಶಿತ ತಿದ್ದುಪಡಿಯಿಂದ ಹೊರಗಿಡಬೇಕು.

ಬಳಿಕ ಪೋಷಕರು ಮತ್ತು ಸಂರಕ್ಷಕರಿರುವ ಮಕ್ಕಳು. ಇವರಿಗೆ ಸಂಬಂಧಿಸಿದಂತೆ ೨ ವರ್ಗವಿದೆ. ಸ್ಪಷ್ಟತೆಗೆಂದು ಅವರ ಪ್ರಕರಣಗಳನ್ನು ಪ್ರತ್ಯೇಕವಾಗಿ ಪರಿಗಣಿಸೋಣ. ಮೊದಲಿನವರು ಪೋಷಕರು ಮತ್ತು ಸಂರಕ್ಷಕರ ಒಪ್ಪಿಗೆ ಮೇರೆಗೆ ಮತಾಂತರ ಹೊಂದಿದ ಮಕ್ಕಳು. ೨ನೆಯವರು ಮತಾಂತರ ಹೊಂದಿದವರ ಮಕ್ಕಳು.

ಮಕ್ಕಳ ಶಾಸನಾತ್ಮಕ ಸಂರಕ್ಷಕರ ಒಪ್ಪಿಗೆ ಪಡೆಯದೆ ಮತ್ತು ಅವರ ಅರಿವಿಗೆ ಬಾರದಂತೆ ನಡೆಯುವ ಮತಾಂತರದ ಮೇಲೆ ನಿಷೇಧ ಹೇರಬೇಕು ಎಂದು ನನಗೆ ಅನಿಸಿದೆ. ಇದು ಕಾನೂನು ಸಮ್ಮತ ಪ್ರಸ್ತಾವ.

ಕಾನೂನಿನ ಪ್ರಕಾರ, ವ್ಯಕ್ತಿಯೊಬ್ಬನ ಶಾಸನಬದ್ಧ ರಕ್ಷಣೆಯಲ್ಲಿ ಇರುವ ಮಗುವಿನ ಧಾರ್ಮಿಕ ನಂಬಿಕೆಯ ನಿಯಂತ್ರಣ ಮತ್ತು ಹತೋಟಿಯು ಆತನ ಕೈಯಲ್ಲಿ ಇರಲಿದ್ದು, ಆತನ ಗಮನಕ್ಕೆ ತಾರದೆ ಮತ್ತು ಅರಿವಿಗೆ ಬಾರದಂತೆ ಬೇರೊಂದು ಧರ್ಮಕ್ಕೆ ಮತಾಂತರಗೊಳಿಸಿದಲ್ಲಿ ಆತನ ಹಕ್ಕಿನ ಹರಣವಾಗುತ್ತದೆ. ಇದು, ನನ್ನ ಪ್ರಕಾರ ಸರಳ ಪ್ರಸ್ತಾವವಾಗಿದ್ದು, ಇದಕ್ಕೆ ಯಾರ ಆಕ್ಷೇಪವೂ ಇರಲಾರದು.

ಆದರೆ, ಇನ್ನೊಂದು ಪ್ರಕರಣಕ್ಕೆ ಬಂದರೆ, ಅಂದರೆ, ಒಂದೊಮ್ಮೆ ಪೋಷಕರು ಮತಾಂತರಗೊಂಡಿದ್ದಲ್ಲಿ, ಅವರ ಮಕ್ಕಳ ಕುರಿತ ಪ್ರಶ್ನೆಗೆ ಉತ್ತರ ಕಠಿಣವಾಗಿರಲಿದೆ. ಪೋಷಕರು ಪ್ರಬುದ್ಧರಾಗಿದ್ದು, ೧೮ ವರ್ಷ ದಾಟಿದ್ದಾರೆ. ಅವರ ಮಕ್ಕಳು ೧೮ ವರ್ಷ ದಾಟದ ಅಪ್ರಬುದ್ಧರಾಗಿದ್ದು, ಪೋಷಕರ ಜೊತೆಗೆ ಅವರ ಮತಾಂತರ ಕೂಡದು ಎಂದಾದಲ್ಲಿ ನಾವು ಆ ಮಕ್ಕಳನ್ನು ಏನು ಮಾಡುವುದು? ಉದಾಹರಣೆಗೆ, ಪೋಷಕರೊಬ್ಬರು ಕ್ರಿಶ್ಚಿಯನ್ನರಾಗಿ ಮತಾಂತರ ಹೊಂದಿದ್ದಾರೆ ಎಂದುಕೊಳ್ಳೋಣ. ಇಂಥ ಪೋಷಕರ ಮಗುವೊಂದು ಮೃತಪಟ್ಟಲ್ಲಿ, ಮಗುವನ್ನು ಕ್ರಿಶ್ಚಿಯನ್ ಸಂಪ್ರದಾಯದ ಪ್ರಕಾರ ಮಣ್ಣು ಮಾಡಲಾಗುತ್ತದೆ. ಇದನ್ನು ಕಾನೂನು ತಪ್ಪು ಎನ್ನುವುದೇ? ಇನ್ನೊಂದು ಪ್ರಕರಣವನ್ನು ಪರಿಗಣಿಸೋಣ. ಮತಾಂತರಗೊಂಡ ವ್ಯಕ್ತಿಗೆ ಮಗಳಿದ್ದಾಳೆ ಎಂದುಕೊಳ್ಳೋಣ. ಆಕೆಯ ಮದುವೆಯನ್ನು ಕ್ರಿಶ್ಚಿಯನ್ ಸಂಪ್ರದಾಯದಂತೆ ಮಾಡಲಾಗುತ್ತದೆ. ಈ ಮದುವೆಯ ಪರಿಣಾಮಗಳೇನು? ಈ ಮದುವೆ ಸಕ್ರಮವೇ ಅಥವಾ ಅಕ್ರಮವೇ?

ಒಂದು ವೇಳೆ ಮಕ್ಕಳು ಮತಾಂತರಗೊಳ್ಳಬಾರದು ಎಂದಾದಲ್ಲಿ, ಪೋಷಕರು ತಮ್ಮ ಮಕ್ಕಳ ಮೇಲೆ ತಮ್ಮ ಧಾರ್ಮಿಕ ನಂಬಿಕೆಗಳನ್ನು ಹೇರುವುದನ್ನು ತಡೆಯಲು ಹಾಗೂ ಪ್ರಭಾವ ಬೀರುವುದನ್ನು ತಪ್ಪಿಸಲು, ಪೋಷಕತ್ವ ಕುರಿತ ಬೇರೆಯದೇ ಆದ ಕಾನೂನು ರೂಪಿಸಬೇಕಾಗುತ್ತದೆ. ಮಾನ್ಯರೇ, ಉದಾಹರಣೆಗೆ, ೫ ವರ್ಷದ ಮಗುವೊಂದರ ತಂದೆ ತಾಯಿ ಬೇರೆ ಧರ್ಮಕ್ಕೆ ಮತಾಂತರಗೊಂಡಲ್ಲಿ ಪೋಷಕರು ಕ್ರಿಶ್ಚಿಯಾನಿಟಿ ಇಲ್ಲದೇ ಬೇರೆ ಧರ್ಮವನ್ನು ಅಂಗೀಕರಿಸಿದ್ದಾರೆ ಎಂಬ ಒಂದೇ ಕಾರಣಕ್ಕೆ ಮಗುವನ್ನು ಅವರಿಂದ ಅಗಲಿಸಬೇಕೇ? ಇದನ್ನೆಲ್ಲ ಏಕೆ ಹೇಳುತ್ತಿದ್ದೇನೆ ಎಂದರೆ ಮೂಲಭೂತ ಹಕ್ಕುಗಳ ಸಮಿತಿ, ಅಲ್ಪಸಂಖ್ಯಾತರ ಸಮಿತಿ ಹಾಗೂ ಸಲಹಾ ಸಮಿತಿಗಳು ಇದನ್ನೆಲ್ಲ ಪರಿಶೀಲಿಸಿಯೇ ಈ ಪ್ರಸ್ತಾವವನ್ನು ತಿರಸ್ಕರಿಸಿದ್ದವು. ಏಕೆಂದರೆ, ಈ ಪ್ರಸ್ತಾವವನ್ನು ಅಂಗೀಕರಿಸಿದರೆ, ಅಂದರೆ, ೧೮ಕ್ಕಿಂತ ಕಡಿಮೆ ವಯಸ್ಸಿನವರನ್ನು ಮತಾಂತರಿಸಬಾರದು ಎಂಬುದು ಹಲವು ಛಿದ್ರತೆ, ಹಲವು ಕೆಟ್ಟ ಪರಿಣಾಮಗಳಿಗೆ ಕಾರಣವಾಗಲಿದ್ದು, ಇದನ್ನು ಕೈ ಬಿಡುವುದೇ ಒಳಿತು ಎಂದು ನಿರ್ಧರಿಸಿದೆವು (ಕೇಳಿ, ಕೇಳಿ). ಮೂಲಭೂತ ಹಕ್ಕುಗಳ ಖಂಡ ೧೭ರಲ್ಲಿ ನಾವು ಈ ಕುರಿತು ಯಾವುದೇ ಪ್ರಸ್ತಾವ ಮಾಡಿಲ್ಲ ಎಂದ ಮಾತ್ರಕ್ಕೆ ಶಾಸಕಾಂಗವು ಆರಂಭಗೊಂಡ ಬಳಿಕ ಈ ವಿಷಯದ ನಿಯಂತ್ರಣಕ್ಕೆ ಬೇರೆ ಕಾನೂನು ಮಾಡಬಾರದು ಎಂದಿಲ್ಲ. ಈ ಖಂಡವನ್ನು ಬೇರೆ ಸಮಿತಿಗೆ ಮರುಪರಿಶೀಲನೆಗೆ ಕಳಿಸಿದರೆ, ಉತ್ತಮ ಫಲಿತಾಂಶ ಬರುತ್ತದೆ ಎಂದೇನೂ ಖಾತ್ರಿ ಇಲ್ಲ. ಆದರೆ, ಈ ಬಗ್ಗೆ ವಿಭಿನ್ನವಾಗಿ ಆಲೋಚಿಸುವವರಿಗೆ ಈ ಕುರಿತು ಪರಿಶೀಲಿಸುವಂತೆ ಹೇಳಲು ನನ್ನ ಅಭ್ಯಂತರವೇನೂ ಇಲ್ಲ. ಆದರೆ, ಮೂರು ಸಮಿತಿಗಳು ಈ ವಿಷಯಕ್ಕೆ ಹೆಚ್ಚು ಗಮವ ನೀಡಿವೆ ಎಂದು ಹೇಳಲು ಇಚ್ಛಿಸುತ್ತೇನೆ. ಈ ಹಿನ್ನೆಲೆಯಲ್ಲಿ ಈ ಪ್ರಕರಣದ ಎಲ್ಲ ಸನ್ನಿವೇಶಗಳನ್ನು ಪರಿಗಣಿಸಿದ ನಂತರ ನನ್ನ ನಿರ್ಧಾರ ಏನೆಂದರೆ, ಇಡೀ ಖಂಡವನ್ನೇ ಕೈಬಿಡುವುದು ಸೂಕ್ತ. ಕಾನೂನಿನಂತೆ ಪೋಷಕರ ಇರುವ ಮಕ್ಕಳನ್ನು ಪೋಷಕರ ಅರಿವು ಮತ್ತು ಗಮನಕ್ಕೆ ತಾರದೆ, ಮತಾಂತರಗೊಳಿಸಬಾರದು ಎಂಬ ಪ್ರಸ್ತಾವಕ್ಕೆ ನನ್ನ ಆಕ್ಷೇಪವಿಲ್ಲ. ಇಷ್ಟು ಸಾಕು ಎಂದುಕೊಳ್ಳುತ್ತೇನೆ.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯ್ ಪಟೇಲ್** : ಮಾನ್ಯರೇ, ಇದು ಸಮಸ್ಯೆಗಳಿಂದ ಕೂಡಿದ ವಿಷಯ. ಈ ವಾದಕ್ಕೆ ಭಾವೋದ್ರೇಕಗೊಳಿಸುವ ಅಂಶಗಳನ್ನು ಸೇರಿಸುವುದು ಬೇಡ. ದೇಶದಲ್ಲಿ ಸಾಮೂಹಿಕ ಮತಾಂತರ, ಬಲವಂತದ ಮತಾಂತರ, ಜುಲುಮೆ ಇಲ್ಲವೇ ಒತ್ತಡ ಹೇರಿ ಮತಾಂತರ ನಡೆಯುತ್ತಿದೆ.

ಮಕ್ಕಳ ಮತಾಂತರವೂ ನಡೆಯುತ್ತಿದೆ ಎಂಬುದನ್ನು ನಾವು ಮುಚ್ಚಿಡಲಾಗದು. ಪೋಷಕರ ಜತೆಗೆ ಮಕ್ಕಳು ಹಾಗೂ ಅನಾಥರ ಮತಾಂತರ ಕೂಡ ನಡೆಯುತ್ತಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಈಗ ಮತಾಂತರಕ್ಕೆ ಕಾರಣ ಇಲ್ಲವೇ ಇದರ ಹಿಂದಿನ ಶಕ್ತಿಗಳ ಬಗ್ಗೆ ಚರ್ಚೆ ನಡೆಸುವ ಬದಲು, ವಾಸ್ತವಾಂಶಗಳನ್ನು ಗುರುತಿಸಿ, ಈ ರಾಷ್ಟ್ರವನ್ನು ಕಟ್ಟಲು ಹಾಗೂ ಇಲ್ಲಿ ಬದುಕಲು, ಈ ವಿವಾದ ಬಗೆಹರಿಸಬೇಕೆಂದಿದ್ದರೆ ಅದಕ್ಕೆ ಭಾವೋದ್ವೇಗ ತುಂಬುವುದು ಬೇಡ. ಇಂಥ ಸನ್ನಿವೇಶದಲ್ಲಿ ಮಾಡಬಹುದಾದ ಉತ್ತಮ ಕಾರ್ಯವೇನು? ಈ ಬಗ್ಗೆ ಹಲವು ದೃಷ್ಟಿಕೋನ ಇರಬಹುದು. ಬೇರೆ ಬೇರೆ ಸಮುದಾಯಗಳು ಬೇರೆ ಬೇರೆ ಅಭಿಪ್ರಾಯ ಹೊಂದಿರಬಹುದು. ಆದರೆ, ಡಾ. ಅಂಬೇಡ್ಕರ್ ಅವರು ಹೇಳಿದಂತೆ ವಿಷಯ ಮೂರು ಸಮಿತಿಗಳಲ್ಲಿ ಪರಿಶೀಲಿಸಲ್ಪಟ್ಟಿದ್ದರೂ, ಎಲ್ಲರಿಗೂ ಸಮ್ಮತವಾದ ಪರಿಹಾರವನ್ನು ಕಂಡುಹಿಡಿಯಲು ಆಗಿಲ್ಲ. ಈಗ ಚರ್ಚೆಯನ್ನು ಮುಂದುವರಿಸದೆ, ಕೊನೆಯ ಪ್ರಯತ್ನ ಎಂಬಂತೆ ಇದನ್ನು ಸಲಹಾ ಸಮಿತಿಗೆ ಕಳಿಸೋಣ. ಇದರಿಂದ ಎಲ್ಲರಿಗೂ ತೃಪ್ತಿ ಆಗಬಹುದು. ಇನ್ನೊಂದು ಅವಕಾಶ ನೀಡೋಣ.

**ಮಾನ್ಯ ಸಭಾಧ್ಯಕ್ಷರು** : ಖಂಡವನ್ನು ಸಲಹಾ ಸಮಿತಿಗೆ ವಾಪಸ್ ಕಳಿಸಬೇಕೆಂಬುದು ಸದನದ ಇಚ್ಛೆ ಎಂದುಕೊಳ್ಳಲೇ?

ಖಂಡವನ್ನು ಸಲಹಾ ಸಮಿತಿಗೆ ವಾಪಸ್ ಕಳಿಸಲಾಯಿತು.

## ಖಂಡ ೧೮: ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕುಗಳು

**ಗೌರವಾನ್ವಿತ ಸರ್ದಾರ್ ವಲ್ಲಭಭಾಯ್ ಪಟೇಲ್** : ೧೮ ನೇ ಖಂಡವನ್ನು ಮಂಡಿಸುತ್ತಿದ್ದೇನೆ.

"೧. ಎಲ್ಲ ರಾಜ್ಯಗಳಲ್ಲೂ ಅಲ್ಪಸಂಖ್ಯಾತರ ಭಾಷೆ, ಸಂಸ್ಕೃತಿ ಹಾಗೂ ಲಿಪಿಯನ್ನು ಸಂರಕ್ಷಿಸಬೇಕು. ಇದಕ್ಕೆ ಸಂಬಂಧಿಸಿದಂತೆ ತಾರತಮ್ಯದ ಅಥವಾ ದಬ್ಬಾಳಿಕೆಯ ನಿಯಂತ್ರಣ ಇಲ್ಲವೇ ಕಾನೂನುಗಳನ್ನು ರೂಪಿಸಬಾರದು.

೨. ಧರ್ಮ, ಸಮುದಾಯ ಅಥವಾ ಭಾಷೆಯ ಆಧಾರದ ಮೇಲೆ ಯಾವ ಅಲ್ಪಸಂಖ್ಯಾತರಿಗೂ ರಾಜ್ಯದ ಶೈಕ್ಷಣಿಕ ಸಂಸ್ಥೆಗಳಲ್ಲಿ ಸೇರ್ಪಡೆಗೆ ತಾರತಮ್ಯ ಕೂಡದು ಹಾಗೂ ಅವರ ಮೇಲೆ ಧಾರ್ಮಿಕ ಶಿಕ್ಷಣವನ್ನು ಹೇರಕೂಡದು.

೩. (ಅ) ಎಲ್ಲ ಧರ್ಮ, ಸಮುದಾಯ ಅಥವಾ ಭಾಷಾ ಅಲ್ಪಸಂಖ್ಯಾತರು ಯಾವುದೇ ರಾಜ್ಯದಲ್ಲಿ ತಮ್ಮದೇ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸುವ ಹಾಗೂ ನಿರ್ವಹಿಸುವ ಸ್ವಾತಂತ್ರ್ಯ ಹೊಂದಿದ್ದಾರೆ.

(ಆ) ಧರ್ಮ, ಸಮುದಾಯ ಇಲ್ಲವೇ ಭಾಷೆಯನ್ನು ಆಧರಿಸಿದ ಅಲ್ಪಸಂಖ್ಯಾತರ ಶಾಲೆಗಳಿಗೆ ಅನುದಾನ ನೀಡುವಲ್ಲಿ ರಾಜ್ಯ ತಾರತಮ್ಯ ಮಾಡಕೂಡದು.

ಈ ಖಂಡವನ್ನು ಸದನದ ಒಪ್ಪಿಗೆಗಾಗಿ ಮಂಡಿಸುತ್ತಿದ್ದೇನೆ.

**ಶ್ರೀ ಮೋಹನ್‌ಲಾಲ್ ಸಕ್ಸೇನಾ** (ಯುಪಿ: ಸಾಮಾನ್ಯ): ಮಾನ್ಯರೇ, ನಿಮ್ಮ ಅನುಮತಿಯೊಂದಿಗೆ ಈ ಖಂಡವನ್ನು ಸಲಹಾ ಸಮಿತಿಗೆ ಮರು ಪರಿಶೀಲನೆಗೆ ವಾಪಸ್ ಮಾಡಬೇಕೆಂದು ಕೋರುತ್ತೇನೆ. ಕೆಲ ವಿಷಯಗಳಿದ್ದು, ಅವುಗಳನ್ನು ಮರುಪರಿಶೀಲಿಸಬೇಕಿದೆ. ಒಟ್ಟಾರೆಯಾಗಿ ಇಡೀ ಖಂಡವನ್ನು ಮರು ಪರಿಶೀಲನೆಗೆ ಕಳಿಸುವುದು ಸೂಕ್ತವೆಂದು ನನ್ನ ಆಲೋಚನೆ.

**ಮಾನ್ಯ ಸಭಾಧ್ಯಕ್ಷರು** : ಶ್ರೀ ಸಕ್ಸೇನಾ ಅವರು ಈ ಖಂಡವನ್ನು ಸಲಹಾ ಸಮಿತಿಗೆ ವಾಪಸ್ ಮಾಡಬೇಕೆಂದು ಕೋರುತ್ತಿದ್ದಾರೆ.

**ಶ್ರೀ ಡಿ.ಎನ್ ದತ್ತ** : ಮಾನ್ಯ ಅಧ್ಯಕ್ಷರೇ, ಖಂಡ ೧೮ರ ಉಪ ಖಂಡ (೧)ರಲ್ಲಿ 'ಅಲ್ಪಸಂಖ್ಯಾತರ ಭಾಷೆ, ಸಂಸ್ಕೃತಿ ಹಾಗೂ ಲಿಪಿಯನ್ನು ಸಂರಕ್ಷಿಸಬೇಕು. ಇದಕ್ಕೆ ಸಂಬಂಧಿಸಿದಂತೆ ತಾರತಮ್ಯದ

ಅಥವಾ ದಬ್ಬಾಳಿಕೆಯ ನಿಯಂತ್ರಣ ಇಲ್ಲವೇ ಕಾನೂನುಗಳನ್ನು ರೂಪಿಸಬಾರದು' ಎನ್ನಲಾಗಿದೆ. ನಾನು ಅಂಶವೊಂದನ್ನು ವಿಷದಪಡಿಸುತ್ತಿದ್ದೇನೆ. ಒಂದು ವೇಳೆ ರಾಜ್ಯವೊಂದು....

**ಮಾನ್ಯ ಸಭಾಧ್ಯಕ್ಷರು :** ನೀವು ಖಂಡದ ಅರ್ಹತೆ ಬಗ್ಗೆ ಮಾತಾಡುತ್ತಿದ್ದೀರಿ.

**ಶ್ರೀ ಡಿ.ಎನ್. ದತ್ತ :** ಇಲ್ಲ. ನಾನು ಅರ್ಹತೆ ಬಗ್ಗೆ ಹೇಳುತ್ತಿಲ್ಲ. ನನಗೆ ಸ್ಪಷ್ಟನೆ ಬೇಕಿದೆ.

**ಶ್ರೀ ಕೆ.ಎಂ. ಮುನ್ಷಿ :** ನಾನು ತಿದ್ದುಪಡಿಯೊಂದನ್ನು ಮಂಡಿಸಬೇಕಿದೆ.

**ಮಾನ್ಯ ಸಭಾಧ್ಯಕ್ಷರು :** ಶ್ರೀ ಮೋಹನ್‌ಲಾಲ್ ಸಕ್ಸೇನಾ ಅವರು ಪ್ರಸ್ತಾವವೊಂದನ್ನು ಮಂಡಿಸಿದ್ದಾರೆ. ಅವರು ಖಂಡವನ್ನು ಸಲಹಾ ಸಮಿತಿಗೆ ವಾಪಸ್ ಕಳಿಸಬೇಕು ಎನ್ನುತ್ತಿದ್ದಾರೆ. ಒಂದು ವೇಳೆ ಅದನ್ನು ಅಂಗೀಕರಿಸಿದಲ್ಲಿ, ತಿದ್ದುಪಡಿಯ ಮಂಡನೆ ಅಗತ್ಯವಿಲ್ಲ .

**ಶ್ರೀ ಡಿ.ಎನ್.ದತ್ತ :** ಒಂದು ವೇಳೆ ಸಲಹಾ ಸಮಿತಿಗೆ ವಾಪಸ್ ಕಳಿಸಿದರೂ, ಸ್ಪಷ್ಟನೆ ಕೋರಿ ಸಲ್ಲಿಸಿದ ನನ್ನ ಮನವಿಯನ್ನು ಪುರಸ್ಕರಿಸಿದಂತೆ ಆಗುವುದೇ ಎಂಬುದು ನನಗೆ ಗೊತ್ತಿಲ್ಲ. ನೀವು ಮಾತನ್ನಾಡಲು ನನಗೆ ಅನುಮತಿ ನೀಡಿದಲ್ಲಿ...

**ಮಾನ್ಯ ಸಭಾಧ್ಯಕ್ಷರು :** ಒಂದು ವೇಳೆ ಸದನವು ಖಂಡವನ್ನು ಸಲಹಾ ಸಮಿತಿಗೆ ಕಳಿಸಲು ನಿರ್ಧರಿಸಿದಲ್ಲಿ, ಚರ್ಚೆಯಿಂದ ಯಾವುದೇ ಪ್ರಯೋಜನವಿಲ್ಲ.

**ಶ್ರೀ ಡಿ.ಎನ್.ದತ್ತ :** ಒಂದು ವೇಳೆ ಖಂಡವನ್ನು ಸಲಹಾ ಸಮಿತಿಗೆ ವಾಪಸ್ ಮಾಡಿದಲ್ಲಿ, ನಾನು ಮಾತಾಡುವುದಿಲ್ಲ. ಯಾವ ತಿದ್ದುಪಡಿಯನ್ನೂ ಮಂಡಿಸುವುದಿಲ್ಲ.

**ಶ್ರೀ ಕೆ.ಎಂ. ಮುನ್ಷಿ :** ಶ್ರೀ ಸಕ್ಸೇನಾ ಅವರ ಸಲಹೆಯನ್ನು ಪರಿಗಣಿಸಿದಲ್ಲಿ, ತಿದ್ದುಪಡಿಗಳ ಅಗತ್ಯವಿದೆಯೇ? ಒಂದು ವೇಳೆ ಅದನ್ನು ಮಂಡಿಸಿದಲ್ಲಿ ಯಾವುದೇ ತಿದ್ದುಪಡಿಗಳ ಅಗತ್ಯ ಇರುವುದಿಲ್ಲ.

**ಆಚಾರ್ಯ ಜೆ.ಬಿ. ಕೃಪಲಾನಿ** (ಯುಪಿ : ಸಾಮಾನ್ಯ) : ಚರ್ಚೆ ಬಳಿಕ ಖಂಡದಲ್ಲಿ ಗಂಭೀರ ಸಮಸ್ಯೆಗಳಿರುವುದು ಕಂಡುಬಂದಲ್ಲಿ, ಅದನ್ನು ಸಲಹಾ ಸಮಿತಿಗೆ ಕಳಿಸಬಹುದು. ಒಂದು ವೇಳೆ ಗಂಭೀರ ಸಮಸ್ಯೆ ಇಲ್ಲವಾಗಿದ್ದಲ್ಲಿ ಹಾಗೂ ಸದನ ಒಗ್ಗಟ್ಟಾಗಿದ್ದಲ್ಲಿ ನೀವು ಮುಂದುವರಿಯಬಹುದು.

**ಹಲವು ಗೌರವಾನ್ವಿತ ಸದಸ್ಯರು :** ಅದು ಸರಿ.

**ಮಾನ್ಯ ಸಭಾಧ್ಯಕ್ಷರು :** ಸದನ ಈ ಖಂಡದ ಬಗ್ಗೆ ಚರ್ಚಿಸಲು ಇಚ್ಛಿಸಿದೆ ಎಂದು ಪರಿಗಣಿಸಿದ್ದೇನೆ. ತಿದ್ದುಪಡಿಗಳನ್ನು ಮಂಡಿಸಲಾಗುವುದು. ಶ್ರೀ ಮೋಹನ್‌ಲಾಲ್ ಸಕ್ಸೇನಾ ಅವರ ಸಲಹೆಯನ್ನು ನಂತರ ಪರಿಗಣಿಸಬಹುದು.

**ಶ್ರೀ ಕೆ.ಎಂ. ಮುನ್ಷಿ :** ಖಂಡ ೧೮ರ ಉಪ ಖಂಡ (೨)ನ್ನು ಸಲಹಾ ಸಮಿತಿಗೆ ಕಳಿಸಬೇಕೆಂದು ಮಂಡಿಸುತ್ತಿದ್ದೇನೆ. ಬಹುಪಾಲು ಸದಸ್ಯರು ಇದೇ ಅಭಿಪ್ರಾಯ ಹೊಂದಿದ್ದು, ನಡೆದ ಚರ್ಚೆಗಳ ಹಿನ್ನೆಲೆಯಲ್ಲಿ ಖಂಡವನ್ನು ಮರುಪರಿಶೀಲನೆಗೆ ಕಳಿಸಲು ನಿರ್ಧರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :** ಹಲವು ತಿದ್ದುಪಡಿಗಳಿದ್ದು, ನನಗೆ ಸೂಚನೆ ಕೊಡಲಾಗಿದೆ. ಗೌರವಾನ್ವಿತ ಸದಸ್ಯರು ತಿದ್ದುಪಡಿಗಳನ್ನು ಮಂಡಿಸಬಹುದು.

**ಶ್ರೀ ವಿ.ಸಿ. ಕೇಶವ ರಾವ್** (ಮದ್ರಾಸ್ : ಸಾಮಾನ್ಯ): ನಾನು ನನ್ನ ತಿದ್ದುಪಡಿಯನ್ನು ಮಂಡಿಸುತ್ತಿಲ್ಲ(ಪೂರಕ ಪಟ್ಟಿ ೨ರ ೭೬ನೇ ತಿದ್ದುಪಡಿ).

**ಡಾ. ಸುರೇಶ್ ಚಂದ್ರ ಬ್ಯಾನರ್ಜಿ** (ಬಂಗಾಳ : ಸಾಮಾನ್ಯ): ಉಪ ಖಂಡ (೨)ನ್ನು ಸಲಹೆ ಸಮಿತಿಗೆ ವಾಪಸ್ ಮಾಡಬೇಕೆಂಬ ತಿದ್ದುಪಡಿಯ ಹಿನ್ನೆಲೆಯಲ್ಲಿ, ನಾನು ನನ್ನ ತಿದ್ದುಪಡಿಯನ್ನು ಮಂಡಿಸುವುದರಲ್ಲಿ ಯಾವುದೇ ಉದ್ದೇಶ ಕಾಣುತ್ತಿಲ್ಲ. ಆದ್ದರಿಂದ ನಾನು ತಿದ್ದುಪಡಿ ಮಂಡಿಸುವುದಿಲ್ಲ.

**ಶ್ರೀ ಆರ್. ಸಂತಾನಂ :** ನಾನು ನನ್ನ ತಿದ್ದುಪಡಿಯನ್ನು ಮಂಡಿಸುತ್ತಿಲ್ಲ (ಪೂರಕಪಟ್ಟಿ ೨ರ ೭೮ನೇ ತಿದ್ದುಪಡಿ)

**ಶ್ರೀ ಫೂಲ್ ಸಿಂಗ್ :** ನಾನು ಕೂಡಾ ನನ್ನ ತಿದ್ದುಪಡಿಯನ್ನು ಮಂಡಿಸುತ್ತಿಲ್ಲ (ಪೂರಕಪಟ್ಟಿ ೨ರ ೮೦ನೇ ತಿದ್ದುಪಡಿ).

**ಶ್ರೀ ಅಲಘು ರಾಯ್ ಶಾಸ್ತ್ರಿ :** *[ನಾನು ಕೂಡಾ ತಿದ್ದುಪಡಿಯನ್ನು ಮಂಡಿಸುತ್ತಿಲ್ಲ]*

**ಡಾ ಸುರೇಶ್ ಚಂದ್ರ ಬ್ಯಾನರ್ಜಿ :** ಶ್ರೀ ಮುನ್ಷಿಯವರ ಆಶ್ವಾಸನೆ ಮೇರೆಗೆ ನಾನು ಪಟ್ಟಿಯಲ್ಲಿರುವ ತಿದ್ದುಪಡಿ ೭೨ನ್ನು ಮಂಡಿಸುತ್ತಿಲ್ಲ.

**ಗೌರವಾನ್ವಿತ ಜಗಜೀವನ ರಾಂ :** ಪೂರಕ ಪಟ್ಟಿ ೨ರ ೮೩ನೇ ತಿದ್ದುಪಡಿಯನ್ನು ಮಂಡಿಸುತ್ತಿಲ್ಲ.

**ಶ್ರೀ ಆರ್.ಕೆ. ಸಿಧ್ವಾ :** ನನ್ನ ತಿದ್ದುಪಡಿ, ಅಂದರೆ ೮೪, ಹೊಸ ಖಂಡ. ಬಳಿಕ ಅದನ್ನು ಪರಿಗಣಿಸಬಹುದು.

**ಶ್ರೀ ಡಿ.ಎನ್ ದತ್ತ :** ತಿದ್ದುಪಡಿ ೮೫ ಹೊಸ ಖಂಡಗಳನ್ನು ಪರಿಚಯಿಸುತ್ತದೆ. ಅದನ್ನು ನಂತರ ತೆಗೆದುಕೊಳ್ಳಬಹುದು.

**ಮಾನ್ಯ ಸಭಾಧ್ಯಕ್ಷರು :** ನಾನು ಸೂಚನೆ ಸ್ವೀಕರಿಸಿದ ಎಲ್ಲ ತಿದ್ದುಪಡಿಗಳನ್ನು ಕೈಬಿಡಲಾಗಿದೆ. ಶ್ರೀ ಮುನ್ಷಿಯವರ ತಿದ್ದುಪಡಿ ಹಾಗೂ ಖಂಡವನ್ನು ಚರ್ಚೆಗೆ ಮುಕ್ತಗೊಳಿಸಲಾಗಿದೆ. ಇಡೀ ಖಂಡವನ್ನು ಹಾಗೂ ಉಪ ಖಂಡ (೨)ನ್ನು ಸಲಹೆ ಸಮಿತಿಗೆ ವಾಪಸ್ ಕಳಿಸಬೇಕು ಎಂಬ ಸಲಹೆ ಬಂದಿದೆ.

**ಶ್ರೀ ಮಹಾವೀರ್ ತ್ಯಾಗಿ :** ಶ್ರೀ ಮೋಹನ್‌ಲಾಲ್ ಸಕ್ಸೇನಾ ಅವರ ನಿರ್ಣಯವನ್ನು ಬೆಂಬಲಿಸುತ್ತಿದ್ದೇನೆ. ಅವರು ಉದ್ದೇಶಿತ ಖಂಡವನ್ನು ಸಲಹಾ ಸಮಿತಿಗೆ ವಾಪಸ್ ಕಳಿಸಬೇಕೆಂದು ಪ್ರಸ್ತಾಪಿಸಿದ್ದಾರೆ. ಮಾನ್ಯರೇ, ವಿಷಯವನ್ನು ಹಗುರವಾಗಿ ಪರಿಗಣಿಸಲಾಗಿದೆ ಎಂಬುದು ನನ್ನ ಭಾವನೆ. ಇಂಥ ವಿಷಯಗಳಲ್ಲಿ ಅಂದರೆ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಹಕ್ಕುಗಳಿಗೆ ಸಂಬಂಧಿಸಿದಂತೆ ವೈಯಕ್ತಿಕವಾಗಿ ವಿವರಿಸಬಹುದಷ್ಟೆ ಹಾಗೂ ಅಲ್ಪಸಂಖ್ಯಾತರ ಪ್ರಶ್ನೆಯನ್ನು ಭವಿಷ್ಯದ ಸರ್ಕಾರಕ್ಕೆ ಬಿಡೋಣ. ನಾವು ಮುಂದಿನ ಸರ್ಕಾರಗಳ ಕೈಕಟ್ಟುವ ಕೆಲಸ ಮಾಡುತ್ತಿದ್ದೇವೆ ಎಂಬುದು ನನ್ನ ಭಾವನೆ. ಆಗಿನ ಕಾಲ ಹಾಗೂ ಪರಿಸ್ಥಿತಿಗೆ ಅನುಗುಣವಾಗಿ ನಿರ್ಧಾರ ತೆಗೆದುಕೊಳ್ಳುವ ಸ್ವಾತಂತ್ರ್ಯ ನೀಡೋಣ.

ಈಗ ಮಾನ್ಯರೇ, ಸಾಂಸ್ಕೃತಿಕ ಹಾಗೂ ಶಿಕ್ಷಣಕ್ಕೆ ಸಂಬಂಧಿಸಿದಂತೆ ಅಲ್ಪಸಂಖ್ಯಾತರಿಗೆ ಸವಲತ್ತುಗಳನ್ನು ಖಾತ್ರಿ ಪಡಿಸುವ ಪ್ರಶ್ನೆ ಇದೆ. ಭವಿಷ್ಯದಲ್ಲಿ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಹಕ್ಕುಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ನಾನಾ ರಾಜ್ಯ ಸರ್ಕಾರಗಳ ಜತೆ ಸಂಧಾನ ಮಾಡಬೇಕಾಗಿ ಬರುತ್ತದೆ ಹಾಗೂ ಒಕ್ಕೂಟಕ್ಕೆ ಸೇರ್ಪಡೆಗೊಳ್ಳದ ರಾಜ್ಯಗಳಲ್ಲಿ ಅಲ್ಪಸಂಖ್ಯಾತರ ಸ್ಥಿತಿ ಹೇಗಿದೆ ಎಂದು ತಿಳಿದುಕೊಳ್ಳಬೇಕಾಗುತ್ತದೆ. ಈಗ ಒಕ್ಕೂಟಕ್ಕೆ ಸೇರಿದ ರಾಜ್ಯಗಳ ಸರ್ಕಾರಗಳು ಖಂಡ ೧೮ರ ಅನ್ವಯ ಅಲ್ಪಸಂಖ್ಯಾತರಿಗೆ ಸಂಬಂಧಿಸಿದಂತೆ ನಿರ್ದಿಷ್ಟ ಕಾರ್ಯ ನೀತಿಯನ್ನು ರೂಪಿಸಿದಲ್ಲಿ, ಒಕ್ಕೂಟವನ್ನು ಸೇರಿದ ರಾಜ್ಯಗಳು ಹಾಗೂ ಪಾಕಿಸ್ತಾನದಲ್ಲಿ ಅಥವಾ ಒಕ್ಕೂಟದಲ್ಲಿ ಸೇರದೆ ಪ್ರತ್ಯೇಕ ಗುಂಪು ರಚಿಸಿಗೊಂಡ ರಾಜ್ಯಗಳಲ್ಲಿ ಏನಾಗುತ್ತದೆ ಎಂಬುದನ್ನು ತಿಳಿದುಕೊಳ್ಳಬೇಕು ಎಂದು ಜನರಿಗೆ ಅನ್ನಿಸಬಹುದು. ಅಲ್ಪಸಂಖ್ಯಾತರಿಗೆ ಸಂಬಂಧಿಸಿದಂತೆ ಯಾವುದೇ ನಿರ್ಧಾರ ಇಲ್ಲಿ ತೆಗೆದುಕೊಳ್ಳುವುದು ಬೇಡ ಎಂಬುದು ನನ್ನ ಅನಿಸಿಕೆ. ದೇಶ ಅಖಂಡವಾಗಿ ಉಳಿಯಲಿದೆಯೇ ಅಥವಾ ಎರಡು ಭಾಗವಾಗಿ ಹೋಳಾಗಲಿದೆಯೇ ಎಂಬುದು ಖಾತ್ರಿಯಾದ ಬಳಿಕ ಈ ಕುರಿತು ನಿರ್ಧರಿಸೋಣ. ಒಂದು ವೇಳೆ ಭಾರತ ಇಬ್ಭಾಗವಾದರೆ, ಗಡಿಯಾಚೆ ಮತ್ತು ಬೇರೆ ರಾಜ್ಯಗಳಲ್ಲಿ ಅಲ್ಪಸಂಖ್ಯಾತರಿಗೆ ಏನಾಗುತ್ತಿದೆ ಎಂಬುದನ್ನು ತಿಳಿದುಕೊಳ್ಳೋಣ. ಆದ್ದರಿಂದ ಈ ಪ್ರಶ್ನೆಯನ್ನು ಈಗ ಬಗೆಹರಿಸುವುದು ಕಷ್ಟ. ಭಾರತದ ಅಂತಿಮ ಸ್ವರೂಪ ಹೇಗಿರಲಿದೆ ಮತ್ತು ರಾಜ್ಯಗಳು ಅಲ್ಪಸಂಖ್ಯಾತರನ್ನು ಹೇಗೆ ನೋಡಿಕೊಳ್ಳುತ್ತಿವೆ ಎಂಬುದು ಗೊತ್ತಾಗುವವರೆಗೆ ಈ ಪ್ರಶ್ನೆ ಹಾಗೆಯೇ ಇರಲಿ ಎಂಬ ನನ್ನ ಸಲಹೆಗೆ ಸದನದ ಬೆಂಬಲವಿದೆ ಎಂದುಕೊಂಡಿದ್ದೇನೆ. ಆದ್ದರಿಂದ ನಾನು ಖಂಡವನ್ನು ಕೈ ಬಿಡಬೇಕೆಂಬ ಸಕ್ಸೇನಾ ಅವರ ನಿರ್ಣಯವನ್ನು ಬೆಂಬಲಿಸುತ್ತೇನೆ.

**ಶ್ರೀ ಸೇಠ್ ಗೋವಿಂದ ದಾಸ್** (ಸಿಪಿ ಮತ್ತು ಬೇರಾರ್ : ಸಾಮಾನ್ಯ) : *(ಮಾನ್ಯರೇ, ನಮ್ಮ

ಮುಂದಿರುವ ಖಂಡದಲ್ಲಿ ವಿವಾದಾತ್ಮಕ ಎನ್ನಬಹುದಾದ ಯಾವುದೇ ಅಂಶ ಇಲ್ಲ. ದೇಶ ಅಖಂಡವಾಗಿ ಉಳಿಯುವುದೋ ಅಥವಾ ವಿಭಾಗಗೊಳ್ಳುವುದೋ ಎಂಬುದು ನಮಗೆ ಗೊತ್ತಿಲ್ಲ ಎಂದು ಶ್ರೀ ಮಹಾವೀರ ತ್ಯಾಗಿ ಹೇಳಿದರು. ಯಾವ ಕಾರಣದಿಂದ ಅವರು ಸಲಹಾ ಸಮಿತಿಗೆ ಕಳಿಸುವ ಬಗೆಗೆ ಆಲೋಚಿಸಿದರೋ ಅದೇ ಕಾರಣಕ್ಕೆ ಇಂದೇ ನಿಲುವಳಿಯನ್ನು ಅಂಗೀಕರಿಸಬೇಕು. ಅಖಂಡ ಹಿಂದೂಸ್ತಾನ ಅಥವಾ ಪಾಕಿಸ್ತಾನ ಅಥವಾ ವಿಭಜಿತ ಇಲ್ಲವೇ ಅವಿಭಜಿತ ಭಾರತ ಯಾವುದೇ ಆಗಲಿ, ಇಂಥ ಯೋಚನೆ ಒಮ್ಮೆ ಬಂದರೆ ಬಳಿಕ ಎಲ್ಲ ಸಮಸ್ಯೆಗಳನ್ನು ಅದೇ ದೃಷ್ಟಿಯಲ್ಲಿ ನೋಡುತ್ತೇವೆ.

ಪಂಡಿತ್ ಜವಹರಲಾಲ್ ನೆಹರು ಅವರ ಪ್ರಸ್ತಾವವನ್ನು ಬೆಂಬಲಿಸುತ್ತ ನಾನು ಹೇಳಿದ್ದೆ, ಮುಸ್ಲಿಂ ಲೀಗ್‌ನ ಗೆಳೆಯರು ನಮ್ಮೊಡನೆ ಸೇರುತ್ತಾರಾ ಇಲ್ಲವಾ ಎಂಬ ಬಗ್ಗೆ ನಾವು ತಲೆ ಕೆಡಿಸಿಕೊಳ್ಳಬಾರದು ಎಂದು. ಅದೇ ರೀತಿ ದೇಶ ಅಖಂಡವಾಗಿ ಉಳಿಯುತ್ತದೋ ಇಲ್ಲವೋ ಎಂಬ ಬಗ್ಗೆಯೂ ತಲೆ ಕೆಡಿಸಿಕೊಳ್ಳ ಬಾರದು. ನಮಗೆ ಬೇಕಿರುವುದು ಅಖಂಡ ಭಾರತ. ನಮಗೆ ಅದು ಒಂದಾಗಿ ಉಳಿಯಬೇಕು. ಅದಕ್ಕಾಗಿ ನಾವು ಮಾಡುವ ಪ್ರಯತ್ನ ನಿಲ್ಲಿಸಬಾರದು. ನಾನು ಶ್ರೀ ಮುನ್ಷಿಯವರ ತಿದ್ದುಪಡಿ ವಿರುದ್ಧ ಇದ್ದೇನೆ. ಏಕೆಂದರೆ, ಅದು ಯಾವುದೇ ಧರ್ಮ ಅಥವಾ ಜಾತಿ ವಿರುದ್ಧ ಇಲ್ಲ. ಈಗಾಗಲೇ ಹೇಳಿದಂತೆ ಭವಿಷ್ಯದಲ್ಲಿ ಭಾರತಕ್ಕೆ ಏನಾಗಲಿದೆ ಎಂಬ ಬಗೆಗೆ ಆಲೋಚಿಸದೆ, ನಾವು ನಮ್ಮ ಕರ್ತವ್ಯ ಏನು ಹಾಗೂ ಈ ಸದನದಲ್ಲಿ ಏನು ಮಾಡಬೇಕು ಎಂಬುದನ್ನು ಮಾತ್ರ ಪರಿಗಣಿಸಿ, ಈ ನಿರ್ಣಯವನ್ನು ಅಂಗೀಕರಿಸಬೇಕು]*

**ಶ್ರೀ ಡಿ.ಎನ್ ದತ್ತ :** ಮಾನ್ಯ ಸಭಾಧ್ಯಕ್ಷರೇ, ಖಂಡ ೧೮, ಉಪ ಖಂಡ (೧)ರ ಪ್ರಕಾರ,

"ಅಲ್ಪಸಂಖ್ಯಾತರ ಭಾಷೆ, ಸಂಸ್ಕೃತಿ ಹಾಗೂ ಲಿಪಿಯನ್ನು ಸಂರಕ್ಷಿಸಬೇಕು. ಇದಕ್ಕೆ ಸಂಬಂಧಿಸಿದಂತೆ ತಾರತಮ್ಯದ ಅಥವಾ ದಬ್ಬಾಳಿಕೆಯ ನಿಯಂತ್ರಣ ಇಲ್ಲವೇ ಕಾನೂನುಗಳನ್ನು ರೂಪಿಸಬಾರದು'.

ಒಂದು ಉದಾಹರಣೆ ನೋಡೋಣ: ರಾಜ್ಯವೊಂದರಲ್ಲಿ ಹಲವು ಸಮುದಾಯಗಳು ನೆಲೆಸಿದ್ದು, ಬೇರೆ ಬೇರೆ ಲಿಪಿಯನ್ನು ಬಳಸುತ್ತಿವೆ ಎಂದುಕೊಳ್ಳೋಣ. ಒಂದೇ ಒಂದು ಲಿಪಿ ಇರಬೇಕು ಎಂದು ಕಾನೂನು ಹೊರಡಿಸಲು ರಾಜ್ಯಕ್ಕೆ ಮೂಲಭೂತ ಹಕ್ಕುಗಳಡಿ ಅವಕಾಶವಿಲ್ಲದ ಕಾರಣ ರಾಜ್ಯದ ಹಿತಕ್ಕೆ ಧಕ್ಕೆಯಾಗಲಿದೆ. ಇಂಥ ಕಾನೂನುಗಳನ್ನು ರೂಪಿಸುವ ಖಂಡದ ಭಾಷೆ ಯಾವುದಾಗಿರಬೇಕು ಎಂದು ನಾನು ಸಲಹೆ ನೀಡಲಾರೆ. ಇದು ಅತ್ಯಂತ ಮೂಲಭೂತ ವಿಷಯವಾದ್ದರಿಂದ, ಇದನ್ನು ಮೂಲಭೂತ ಹಕ್ಕುಗಳ ಉಪ ಸಮಿತಿಯ ಕರಡು ಸಮಿತಿಗೆ ಕಳಿಸಬೇಕು. ಅಲ್ಪಸಂಖ್ಯಾತರಿಗೆ ಹಕ್ಕುಗಳು ಇರಬೇಕು, ನಿಜ. ಆದರೆ, ಅದೇ ಹೊತ್ತಿನಲ್ಲಿ ರಾಜ್ಯ–ಪ್ರಾಂತ್ಯಕ್ಕೆ ಯಾವ ಲಿಪಿ ಇರಬೇಕೆಂಬುದನ್ನು ನಿರ್ಧರಿಸುವ ಕಾನೂನು ರೂಪಿಸುವ ಹಕ್ಕು ಇರಬೇಕು. ಆದ್ದರಿಂದ ಸರ್ದಾರ್‌ಜಿ ಇಲ್ಲವೇ ಮೂಲಭೂತ ಹಕ್ಕುಗಳ ಉಪ ಸಮಿತಿ ಈ ವಿಷಯವನ್ನು ಪರಿಗಣಿಸಬೇಕು ಎಂಬುದು ನನ್ನ ಸಲಹೆ.

**ಶ್ರೀಜುತ್ ರೋಹಿಣಿ ಕುಮಾರ್ ಚೌಧರಿ :** ಮಾನ್ಯ ಸಭಾಧ್ಯಕ್ಷರೇ, ಉಪ ಖಂಡ (೨)ರ ಬಗ್ಗೆ ಗಮನ ಸೆಳೆಯುತ್ತಿದ್ದೇನೆ:

"ಧರ್ಮ, ಸಮುದಾಯ ಅಥವಾ ಭಾಷೆಯ ಆಧಾರದ ಮೇಲೆ ಯಾವ ಅಲ್ಪಸಂಖ್ಯಾತರಿಗೂ ರಾಜ್ಯದ ಶೈಕ್ಷಣಿಕ ಸಂಸ್ಥೆಗಳಲ್ಲಿ ಸೇರ್ಪಡೆಗೆ ತಾರತಮ್ಯ ಕೂಡದು ಹಾಗೂ ಅವರ ಮೇಲೆ ಧಾರ್ಮಿಕ ಶಿಕ್ಷಣವನ್ನು ಹೇರಕೂಡದು'.

ಇದು ಧಾರ್ಮಿಕ ಶಿಕ್ಷಣದ ಕಡ್ಡಾಯ ಕುರಿತ ಖಂಡ. ಶಾಲೆಗಳಲ್ಲಿ ಧಾರ್ಮಿಕ ಶಿಕ್ಷಣದಲ್ಲಿ ಪಾಲ್ಗೊಳ್ಳುವುದನ್ನು ಕಡ್ಡಾಯಗೊಳಿಸುವ ಕುರಿತ ಖಂಡ ೧೬ನ್ನು ಗೌರವಾನ್ವಿತ ಸದನವು ಸಲಹಾ ಸಮಿತಿಗೆ ಕಳಿಸಿದೆ. ಈ ಖಂಡವನ್ನೂ ಅದೇ ಸಲಹಾ ಸಮಿತಿಗೆ ಕಳಿಸಬೇಕು.

ಮಾನ್ಯರೇ, ಖಂಡದ ಇನ್ನೊಂದು ಉಪ ಖಂಡ ಕೂಡ ಅಡಚಣೆ ಮತ್ತು ಸಮಸ್ಯೆಯಿಂದ ಹೊರತಾಗಿಲ್ಲ.

ಉದಾಹರಣೆಗೆ, ಉಪ ಖಂಡ (೧) ಲಿಪಿಗಳ ಬಗ್ಗೆ ಹೇಳುತ್ತದೆ. ನಮ್ಮ ಪ್ರಾಂತ್ಯದ ಬಹುತೇಕ ಆದಿವಾಸಿಗಳು ಮೂಲಲಿಪಿಯನ್ನು ಕಳೆದುಕೊಂಡಿದ್ದಾರೆ. ಕೆಲವರು ಅಸ್ಸಾಮಿ ಭಾಷೆ ಹಾಗೂ ಲಿಪಿಯನ್ನು ಬಳಸುತ್ತಿದ್ದು, ಇತ್ತೀಚೆಗೆ ಅವರ ಮೇಲೆ ರೋಮನ್ ಲಿಪಿಯನ್ನು ಹೇರಲಾಗಿದೆ. ಅವರು ಹಿಂದಿ ಲಿಪಿಯನ್ನು ಒಪ್ಪಲು ಸಿದ್ಧವಿದ್ದು, ಈ ಉಪ ಖಂಡದನ್ವಯ ಅದು ಸಾಧ್ಯವಾಗುವುದಿಲ್ಲ. ಉಪ ಖಂಡ (೩)(ಬಿ) ಈಗಿರುವಂತೆ ಅನುದಾನದ ಸೂಕ್ತ ಹಂಚಿಕೆಯಲ್ಲಿ ಹಸ್ತಕ್ಷೇಪ ಮಾಡುತ್ತದೆ. ಆದ್ದರಿಂದ ನನ್ನ ಪ್ರಕಾರ ಉಪ ಖಂಡವನ್ನು ಸಲಹಾ ಸಮಿತಿಗೆ ಕಳಿಸುವ ಬದಲು, ಸಂಪೂರ್ಣ ಖಂಡ ೧೮ನ್ನು ಪರಿಶೀಲನೆಗೆ ಕಳಿಸಬೇಕು.

**ಶ್ರೀ ರಾಜಕೃಷ್ಣ ಬೋಸ್** (ಒರಿಸ್ಸಾ : ಸಾಮಾನ್ಯ) : ಮಾನ್ಯರೇ, ನನ್ನ ಸಲಹೆ ಏನೆಂದರೆ, ಸರ್ದಾರ್ ಪಟೇಲರು ಮಂಡಿಸಿದ ಖಂಡ ೧೮ ಹಾಗೂ ಮುನ್ಷಿ ಯವರ ತಿದ್ದುಪಡಿಯನ್ನು ಸದನ ಚರ್ಚೆಗೆ ಎತ್ತಿಕೊಂಡು, ಒಂದು ನಿರ್ಧಾರಕ್ಕೆ ಬರಬೇಕು. ಇಂಥ ಖಂಡಗಳನ್ನು ಸಲಹಾ ಮಂಡಳಿಗೆ ವಾಪಸ್ ಕಳಿಸುವ ಪ್ರವೃತ್ತಿ ಬೆಳೆದಿದ್ದು, ಅದು ಆಕರ್ಷಣೀಯ ಎನ್ನಿಸಿದೆ. ಹೀಗಾಗಿ, ನಾವು ಸಲಹಾ ಸಮಿತಿಗೆ ಕಳಿಸುವುದನ್ನು ಬಿಟ್ಟು ಬೇರೇನೂ ಮಾಡುವಂತಿಲ್ಲ ಎಂದಾಗಿದೆ. ಈ ಖಂಡಗಳು ಸಮಿತಿಗಳ ಮೂಲಕ ಅಲ್ಲದೆ, ಅಲ್ಪಸಂಖ್ಯಾತರ ಹಕ್ಕುಗಳ ಉಪ ಸಮಿತಿ ಹಾಗೂ ಮೂಲಭೂತ ಹಕ್ಕುಗಳ ಉಪ ಸಮಿತಿ ಮೂಲಕ ಹಾದು ಬಂದಿವೆ ಎಂಬುದನ್ನು ಮರೆಯಬಾರದು. ನಾವು ಪರಿಗಣಿಸುತ್ತಿರುವ ೧೮ನೇ ಖಂಡ ಸರಳ ಹಾಗೂ ದೋಷರಹಿತವಾಗಿದ್ದು, ಅದನ್ನು ಮತ್ತೊಮ್ಮೆ ಸಲಹಾ ಸಮಿತಿಗೆ ಕಳಿಸುವ ಅಗತ್ಯವಿಲ್ಲ. ಇದಕ್ಕೆ ಮೂರು ಉಪ ಖಂಡಗಳು ಸೇರಿಕೊಂಡಿದ್ದು, ಭಾಷೆ, ಲಿಪಿ ಮತ್ತು ಸಂಸ್ಕೃತಿಗೆ ಸಂಬಂಧಿಸಿದ್ದನ್ನು ಉಳಿಸಿಕೊಳ್ಳಬೇಕು ಮತ್ತು ಇವುಗಳ ಮೇಲೆ ತಾರತಮ್ಯ ಇಲ್ಲವೇ ಜುಲುಮೆ ಹೇರುವ ಕಾನೂನುಗಳು ಮತ್ತು ನಿಯಂತ್ರಣಗಳನ್ನು ಹೇರಬಾರದು. ಶ್ರೀ ದತ್ತ ಅವರು ಹೇಳಿದಂತೆ, ನಾವು ಒಂದು ಲಿಪಿಯನ್ನು ಮಾತ್ರವೇ ಉಳಿಸಿಕೊಳ್ಳಬೇಕು ಎಂಬುದು ಬಿಕ್ಕಟ್ಟು ಸೃಷ್ಟಿಸುತ್ತದೆ ಹಾಗೂ ರಾಜ್ಯವೊಂದು ಸಾಮಾನ್ಯ ಲಿಪಿಯೊಂದನ್ನು ಬಳಸಲು ಉಪ ಖಂಡದಿಂದ ಸಮಸ್ಯೆ ಆಗಲಿದೆ.

ಈ ಉಪಖಂಡವನ್ನು ಇದ್ದಂತೆಯೇ ಉಳಿಸಿಕೊಳ್ಳುವುದು ಒಳಿತು ಎಂಬುದು ನನ್ನ ನಿಲುವು. ಏಕೆಂದರೆ, ನಾವು ಮೊದಲ ಸ್ವತಂತ್ರ ಸಂವಿಧಾನವನ್ನು ರೂಪಿಸುತ್ತಿದ್ದು, ಭಾಷೆ ಇಲ್ಲವೇ ಲಿಪಿಯನ್ನು ಅಳಿಸುವ ಪ್ರಶ್ನೆಯನ್ನು ಎತ್ತಿದಲ್ಲಿ ಇನ್ನಷ್ಟು ತೊಡಕು ಮತ್ತು ಸಮಸ್ಯೆಗಳಲ್ಲದೆ, ಅಪಾರ್ಥಕ್ಕೂ ಕಾರಣರಾಗುತ್ತೇವೆ. ಈಗಾಗಲೇ ನಾವು ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದು, ಮತ್ತಷ್ಟನ್ನು ಆಹ್ವಾನಿಸುವುದು ಬೇಡ. ಇದು ನಮಗೆ ಅಗತ್ಯವಿಲ್ಲ. ಹೀಗಾಗಿ ನಾವು ಮೊದಲ ಉಪ ಖಂಡವನ್ನು ಹಾಗೆಯೇ ಉಳಿಸಿಕೊಳ್ಳೋಣ.

ಉಪ ಖಂಡ (೩)(ಎ)ಹೇಳುತ್ತದೆ:

"ಎಲ್ಲ ಧರ್ಮ, ಸಮುದಾಯ ಅಥವಾ ಭಾಷಾ ಅಲ್ಪಸಂಖ್ಯಾತರು ಯಾವುದೇ ರಾಜ್ಯದಲ್ಲಿ ತಮ್ಮದೇ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸುವ ಹಾಗೂ ನಿರ್ವಹಿಸುವ ಸ್ವಾತಂತ್ರ್ಯ ಹೊಂದಿದ್ದಾರೆ'.

ಇದು ಕೂಡಾ ಒಂದು ಸರಳ ಪ್ರಶ್ನೆ. ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರು ಯಾವುದೇ ರಾಜ್ಯ ಇಲ್ಲವೇ ಒಕ್ಕೂಟದ ಯಾವುದೇ ಭಾಗದಲ್ಲಿ ಶಾಲೆಯನ್ನು ಪ್ರಾರಂಭಿಸಲು ಮುಂದಾದರೆ, ಯಾರೂ ಅವರನ್ನು ತಡೆಯುವುದಿಲ್ಲ ಅಥವಾ ಅದನ್ನು ನಿರ್ಬಂಧಿಸುವ ಕಾನೂನು ರಚಿಸುವುದಿಲ್ಲ. ಹಾಗೇನಾದರೂ ಮಾಡಿದಲ್ಲಿ ಅಲ್ಪಸಂಖ್ಯಾತರ ರಕ್ಷಣೆ ಎಂಬ ಘೋಷಣೆ ವಿಡಂಬನೆ ಆಗಲಿದೆ. ಹೀಗಾಗಿ, ಈ ಸರಳ ಉಪ ಖಂಡವನ್ನು ಇತರ ಉಪ ಖಂಡಗಳ ಜೊತೆಗೆ ಏಕೆ ಸಲಹಾ ಸಮಿತಿಗೆ ಕಳಿಸಬೇಕು ಎಂಬುದು ನನಗೆ ಅರ್ಥವಾಗುತ್ತಿಲ್ಲ. ಪಾಕಿಸ್ತಾನದ ಪ್ರಜೆಗಳ ಮನೋಭಾವ ತಿಳಿದುಕೊಳ್ಳುವವರೆಗೆ ಹಾಗೂ ಅವರು ಅಲ್ಪಸಂಖ್ಯಾತರಿಗೆ ಯಾವ ಹಕ್ಕು ಕೊಡಮಾಡುತ್ತಾರೆ ಎಂಬುದು ಗೊತ್ತಾಗುವವರೆಗೆ ಈ ಬಗ್ಗೆ ನಿರ್ಧರಿಸುವುದು ಬೇಡ ಎಂದು ಸದಸ್ಯರೊಬ್ಬರು ಹೇಳಿದರು. ಮಾನ್ಯರೇ, ಮುಸ್ಲಿಂ ಲೀಗ್ ಸೇರಿದಂತೆ ಹಲವರು ದೇಶಕ್ಕೆ ಸ್ವಾತಂತ್ರ್ಯ ಬರುವುದನ್ನು ತಡ

ಮಾಡಲು ಸಕಲ ಪ್ರಯತ್ನ ಮಾಡುತ್ತಿದ್ದಾರೆ. ಪ್ರಳಯ ಆಗುವವರೆಗೆ ಇಲ್ಲವೇ ಅವರು ನಿರ್ಧಾರ ತೆಗೆದು ಕೊಳ್ಳುವವರೆಗೆ ನಾವು ಅನಿರ್ದಿಷ್ಟ ಕಾಲ ಕಾಯಬೇಕಾಗುತ್ತದೆ. ಉದಾಹರಣೆಗೆ, ಅವರು ನಿರ್ಧಾರಕ್ಕೆ ಬದಲು ಜೂನ್ ೧೯೪೮ ರ ನಂತರವೂ ಕಾಯ್ದರೆ, ಇಂಥ ಸರಳ ಮತ್ತು ಸಾಮಾನ್ಯ ವಿಷಯದ ಬಗೆಗೆ ನಿರ್ಧಾರಕ್ಕೆ ಬರಲು ನಾವು ಕೂಡ ಅಲ್ಲಿಯವರೆಗೆ ಕಾಯುತ್ತಿರಬೇಕೇ? ನನ್ನ ಪ್ರಕಾರ, ಮಾನ್ಯರೇ, ನಿರ್ಧಾರ ತೆಗೆದುಕೊಳ್ಳಲು ಕಾಯುತ್ತ ಕೂರುವುದು ಮೂರ್ಖತನ. ಆದ್ದರಿಂದ, ಸರ್ದಾರ್ ಪಟೇಲ್ ಅವರು ಮಂಡಿಸಿದ ಖಂಡ ಹಾಗೂ ಮುನ್ಷಿಯವರ ತಿದ್ದುಪಡಿಯನ್ನು ಸಭೆ ಅಂಗೀಕರಿಸಬೇಕು.

ಡಾ. ಬಿ.ಆರ್. ಅಂಬೇಡ್ಕರ್ : ಮಾನ್ಯ ಸಭಾಧ್ಯಕ್ಷರೇ, ಶ್ರೀಯುತರಾದ ಮುನ್ಷಿ ಹಾಗೂ ತ್ಯಾಗಿಯವರ ತಿದ್ದುಪಡಿಗಳು ನನ್ನಲ್ಲಿ ಅಶ್ಚರ್ಯ ಮೂಡಿಸಿವೆ ಎಂದು ನಿವೇದಿಸಿಕೊಳ್ಳುತ್ತೇನೆ. ೧೮ನೇ ಖಂಡವನ್ನು ಸಲಹಾ ಸಮಿತಿಗೆ ಏಕೆ ವಾಪಸ್ ಕಳಿಸಬಾರದೆಂದು ಅವರು ಕಾರಣ ನೀಡಿಲ್ಲ. ಈ ಪ್ರಸ್ತಾವಕ್ಕೆ ಬೆಂಬಲ ನೀಡಲು ಇರುವ ಕಾರಣವೆಂದರೆ, ಅಲ್ಪಸಂಖ್ಯಾತರ ಹಕ್ಕುಗಳು ಸಾಪೇಕ್ಷವಾಗಿರಬೇಕು ಎಂದು. ಅಂದರೆ, ಪಾಕಿಸ್ತಾನದ ಶಾಸಕಾಂಗವು ಅಲ್ಪಸಂಖ್ಯಾತರಿಗೆ ಯಾವ ಹಕ್ಕು ಕೊಡುತ್ತದೆ ಎಂಬುದನ್ನು ನೋಡಿಕೊಂಡು, ಇಲ್ಲಿ ಯಾವ ಹಕ್ಕು ನೀಡಬೇಕೆಂದು ನಿರ್ಧರಿಸೋಣ ಎಂಬ ನಿಲುವು ನೀತಿ ಭ್ರಷ್ಟತೆ ಆಗಲಿದೆ. ಅಲ್ಪ ಸಂಖ್ಯಾತರ ಹಕ್ಕುಗಳು ನಿರ್ಬಂಧರಹಿತ ಹಕ್ಕುಗಳಾಗಿರಬೇಕು. ಬೇರೊಂದು ಪಕ್ಷ ತನ್ನ ವ್ಯಾಪ್ತಿಯಲ್ಲಿ ಏನು ಮಾಡಲಿದೆ ಎಂಬುದನ್ನು ಅದು ಆಧರಿಸಿರ ಬಾರದು. ಬೇರೊಂದು ರಾಜ್ಯ ತನ್ನ ವ್ಯಾಪ್ತಿಯಲ್ಲಿನ ಅಲ್ಪ ಸಂಖ್ಯಾತರಿಗೆ ಸಮಾನ ಹಕ್ಕುಗಳನ್ನು ನೀಡದಿದ್ದಲ್ಲಿ, ರಾಜತಾಂತ್ರಿಕ ವಿಧಾನಗಳ ಮೂಲಕ ತಪ್ಪನ್ನು ಸರಿಪಡಿಸಬೇಕು. ಬೇರೆಯವರು ಏನೇ ಮಾಡಲಿ, ನಾವು ನಮ್ಮ ತೀರ್ಪು ಮತ್ತು ವ್ಯಕ್ತಿತ್ವಕ್ಕೆ ತಕ್ಕಂತೆ ಸರಿಯಾದದ್ದನ್ನು ಮಾಡಬೇಕು. ಖಂಡ ೧೮ರಲ್ಲಿ ನೀಡಲಾದ ಹಕ್ಕುಗಳನ್ನು ಯಾವುದೇ ಅಲ್ಪಸಂಖ್ಯಾತರಿಗಾಗಲಿ, ಬೇರಾವುದೇ ಸಂಗತಿಗಳನ್ನು ಪರಿಗಣಿಸದೆ, ನೀಡಬೇಕು. ತಮ್ಮದೇ ಭಾಷೆ, ಲಿಪಿ ಹಾಗೂ ಸಂಸ್ಕೃತಿಯನ್ನು ಉಳಿಸಿಕೊಳ್ಳುವ ಮೊದಲ ಹಕ್ಕನ್ನು ಕೊಡಲಾಗಿದೆ. 'ಭಾಷೆ, ಲಿಪಿ, ಧರ್ಮ ಇತ್ಯಾದಿಗೆ ಸಂಬಂಧಿಸಿದಂತೆ, ತಾರತಮ್ಯ ಕೂಡದು' ಎಂದಿದ್ದೇವೆ. "ಅಲ್ಪಸಂಖ್ಯಾತರು ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಬಹುದು' ಎನ್ನಲಾಗಿದೆ. ರಾಜ್ಯವೊಂದು ಅಲ್ಪಸಂಖ್ಯಾತರ ಶಾಲೆ ಇಲ್ಲವೇ ಶೈಕ್ಷಣಿಕ ಸಂಸ್ಥೆಗಳಿಗೆ ಅನುದಾನ ನೀಡಲು ನಿರ್ಧರಿಸಿದಲ್ಲಿ, "ಧರ್ಮ, ಸಮುದಾಯ ಇಲ್ಲವೇ ಭಾಷೆಯನ್ನು ಆಧರಿಸಿ, ಶೈಕ್ಷಣಿಕ ಸಂಸ್ಥೆಗಳಿಗೆ ಅನುದಾನ ನೀಡುವಿಕೆಯಲ್ಲಿ ತಾರತಮ್ಯ ಕೂಡದು' ಎಂದಿದ್ದೇವೆ.

ಮಾನ್ಯರೇ, ಖಂಡ ೧೮ಕ್ಕೆ ಸಂಬಂಧಿಸಿದಂತೆ ಸದಸ್ಯರ ಆಕ್ಷೇಪಗಳಿಗೆ ಕಾರಣ ಏನು ಎಂಬುದು ನನಗೆ ಅರ್ಥವಾಗಿಲ್ಲ. ಖಂಡ ೧೮ನ್ನು ಸಲಹಾ ಸಮಿತಿಗೆ ವಾಪಸ್ ಮಾಡಬೇಕು ಎನ್ನುವವರು ಸೂಕ್ತವಾದ ಕಾರಣವನ್ನು ಕೊಟ್ಟಿಲ್ಲ. ಅಲ್ಪಸಂಖ್ಯಾತರಿಗೆ ಕೊಡುತ್ತಿರುವ ಹಕ್ಕುಗಳು ಹೆಚ್ಚಾದವೇ ಅಥವಾ ಕಡಿಮೆಯಾದವೇ ಎಂಬುದನ್ನು ವಿವರಿಸಿಲ್ಲ. ಕೆಲ ಕಾರಣಗಳಿಂದಾಗಿ ಸದಸ್ಯರು ಖಂಡವನ್ನು ಸಮಿತಿಗೆ ವಾಪಸ್ ಕಳಿಸಬೇಕೆಂದು ಹೇಳಿದರೆಂದು ವಾಪಸ್ ಕಳಿಸಿದರೆ, ಈ ಖಂಡವನ್ನು ರೂಪಿಸಲು ಶ್ರಮಿಸಿದ ೩ ಸಮಿತಿಗಳ ಶ್ರಮ ವ್ಯರ್ಥವಾಗಲಿದೆ. ಉಪಖಂಡ (೨)ಕ್ಕೆ ಸ್ನೇಹಿತರಾದ ಮುನ್ಷಿಯವರ ಆಕ್ಷೇಪ ಏಕೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಆದರೆ, ಉಪ ಖಂಡವನ್ನು ಸಲಹಾ ಸಮಿತಿಗೆ ಕಳಿಸಲೇ ಬೇಕು ಎಂದಾದಲ್ಲಿ ಅದಕ್ಕೆ ನಾನು ಆಕ್ಷೇಪಿಸಲಾರೆ. ಆ ಉಪ ಖಂಡದಲ್ಲಿ ರಾಜ್ಯಗಳ ಶೈಕ್ಷಣಿಕ ಸಂಸ್ಥೆಗಳ ಬಗ್ಗೆ ಉಲ್ಲೇಖಿಸಿದ್ದೇವೆಯೇ ಹೊರತು ರಾಜ್ಯದಿಂದ ಅನುವಾದ ಪಡೆಯುವ ಸಂಸ್ಥೆಗಳ ಬಗ್ಗೆ ಹೇಳದೆ ಇರುವುದರಿಂದ, ಅದನ್ನು ಸಲಹಾ ಸಮಿತಿಗೆ ಕಳುಹಿಸಬಹುದು. ಒಂದು ವೇಳೆ ಆ ಅಂಶದ ಬಗ್ಗೆ ಸ್ಪಷ್ಟೀಕರಣ ಬೇಕು ಎಂದಾದಲ್ಲಿ ಮಾತ್ರ ಅದನ್ನು ವಾಪಸ್ ಕಳಿಸಬೇಕು. ಆದರೆ, ಇದೇ ತರ್ಕವನ್ನು ಇಡೀ ಖಂಡಕ್ಕೆ ಅನ್ವಯಿಸಲಾಗದು. ಆದ್ದರಿಂದ ಉಪ ಖಂಡ (೨)ನ್ನು ಹೊರತುಪಡಿಸಿ, ಅಗತ್ಯವೆನಿಸಿದರೆ ಅದನ್ನು ಸಮಿತಿಗೆ ಕಳಿಸಬಹುದು, ಇಡೀ ಖಂಡವನ್ನು ಅಂಗೀಕರಿಸಬೇಕು.

**ಶ್ರೀ ಲಕ್ಷ್ಮೀನಾರಾಯಣ ಸಾಹು :** ಸಭಾಧ್ಯಕ್ಷರೇ, ಸ್ವಲ್ಪ ಹೊತ್ತಿನ ಹಿಂದೆ ಮಾತನ್ನಾಡುತ್ತ ಖಂಡ ೧೮ ಮೂಲಭೂತ ಹಕ್ಕುಗಳಲ್ಲಿ ಇರುವುದನ್ನು ಸ್ವಾಗತಿಸಿದ್ದೆ. ಏಕೆಂದರೆ, ಇದೇ ಮೊದಲ ಬಾರಿಗೆ ತಾವು ಕೆಲವು ನಿರ್ದಿಷ್ಟ ಹಕ್ಕುಗಳನ್ನು ಪಡೆದಿರುವ ಬಗ್ಗೆ ಅಲ್ಪಸಂಖ್ಯಾತರು ಸಂತಸ ಪಡಬಹುದಾಗಿದೆ. ಆದರೆ, ಅಲ್ಪಸಂಖ್ಯಾತರು ಯಾರು ಎಂಬ ಕುರಿತು ಸಂದೇಹಗಳಿವೆ. ಆದರೆ, ಸಂಶಯಗಳು ಚರ್ಚೆ ವೇಳೆ ಪರಿಹಾರ ಆಗಲಿವೆ ಎಂದು ಕೊಂಡಿದ್ದೇನೆ. ಆದರೆ, ಒಟ್ಟಾರೆ ಈ ಖಂಡವನ್ನು ನಾನು ಸ್ವಾಗತಿಸುತ್ತೇನೆ. ಮಿಡ್ನಾಪುರ ಜಿಲ್ಲೆಯಲ್ಲಿ ಒರಿಯಾಗಳ ಜನಸಂಖ್ಯೆ ತೀವ್ರವಾಗಿ ಕುಸಿದಿದ್ದು, ಇಂದು ಜನಗಣತಿಯಲ್ಲಿ ಅವರ ಉಲ್ಲೇಖ ಇಲ್ಲವಾಗಿದೆ. ಜನಸಂಖ್ಯೆ ೧೮೯೧ರಲ್ಲಿ ೩ ಲಕ್ಷ, ೧೯೧೧ ರಲ್ಲಿ ೩ ಲಕ್ಷಕ್ಕಿಂತ ಕಡಿಮೆ, ೧೯೨೧ರಲ್ಲಿ ೧.೪ ಲಕ್ಷ ಹಾಗೂ ೧೯೩೧ ರಲ್ಲಿ ಕೇವಲ ೪೫,೦೦೦ ಇದೆ.

ಒರಿಸ್ಸಾದ ದಕ್ಷಿಣ ಪ್ರಾಂತ್ಯದಲ್ಲೂ ಇದೇ ಸ್ಥಿತಿಯಿದೆ. ಬೇರೆ ಪ್ರಾಂತ್ಯದಲ್ಲಿ ಒರಿಯನ್ನರಿಗೆ ರಕ್ಷಣೆ ಇಲ್ಲದ ಕಾರಣ ಉತ್ಕಲ್ ಒಕ್ಕೂಟ ಸಮಿತಿ ೪೦ ವರ್ಷ ಹೋರಾಟ ನಡೆಸಿ, ಪ್ರತ್ಯೇಕ ಪ್ರಾಂತ್ಯವನ್ನು ಪಡೆಯಿತು. ಪ್ರತ್ಯೇಕ ಪ್ರಾಂತ್ಯ ರಚನೆ ಬಳಿಕ ಅವರೆಲ್ಲರೂ ಸಂಭ್ರಮಿಸಿದರು. ಆದರೆ, ಈಗ ಭಾಷೆಯ ಪ್ರಶ್ನೆ ಉದ್ಭವವಾಗಿದೆ. ಒಂದು ಜಿಲ್ಲೆಯನ್ನು ಮಾತ್ರ ಉಲ್ಲೇಖಿಸುತ್ತಿದ್ದು, ಒರಿಸ್ಸಾದ ಆರು ಜಿಲ್ಲೆಗಳಲ್ಲಿ ಒಂದಾದ ಗಂಜಾಂನಲ್ಲಿ ಭಾಷೆ ಕುರಿತು ಭಾರಿ ಸಮಸ್ಯೆ ಇದೆ. ೧೯೦೭ರ ವಿಶಾಖಪಟ್ಟಣಂನ ಜಿಲ್ಲಾ ಗೆಜೆಟಿಯರ್ ಹೇಳುತ್ತದೆ:

> 'ಜಿಲ್ಲೆಯಲ್ಲಿ ಭಾಷೆಯದು ಗೊಂದಲದ ಸಾಮ್ರಾಜ್ಯ. ಗಂಜಾಂನ ೧೦೦೦ ಜನರಲ್ಲಿ ೯೪೦ ಮಂದಿ ಮನೆಯಲ್ಲಿ ತೆಲುಗು, ೧೪ ಮಂದಿ ಒರಿಯ, ೯ ಮಂದಿ ಖೊಂಡ್, ೭ ಮಂದಿ ಗಡಬ ಹಾಗೂ ೫ ಮಂದಿ ಹಿಂದೂಸ್ತಾನಿ ಮಾತನ್ನಾಡುತ್ತಾರೆ. ಆದರೆ, ಸಿಬ್ಬಂದಿಗಳಲ್ಲಿ ೪೫೧ ಮಂದಿ ಒರಿಯ, ೨೦೪ ಮಂದಿ ಕೊಂಡ್, ೧೮೦ ಮಂದಿ ತೆಲುಗು, ೫೬ ಮಂದಿ ಸವರಾ, ೩೦ ಮಂದಿ ಪೊರೋಜ, ೨೩ ಮಂದಿ ಗಡಬ, ೧೧ ಮಂದಿ ಕೋಯಾ, ೩ ಮಂದಿ ಹಿಂದೂಸ್ತಾನಿ, ೩ ಮಂದಿ ಗೊಂಡ್ ಹಾಗೂ ೫ ಮಂದಿ ಇತರ ಸ್ಥಳೀಯ ಭಾಷೆಗಳಾದ ಲಬಡಿ, ಬಸ್ತಾರಿ, ಚತಿಸ್ಕಾರಿ, ಮತಚಾರ ಸೇರಿದಂತೆ ಇನ್ನಿತರ ಭಾಷೆ ಮಾತನ್ನಾಡುತ್ತಾರೆ.'

"ನಮ್ಮ ಪ್ರಾಂತ್ಯದಲ್ಲಿ ಭಾಷೆ ಸಮಸ್ಯೆ ಕ್ಲಿಷ್ಟವಾಗಲು, ಆಂಧ್ರ ಮೂಲದ ಜನ ತಮ್ಮ ಮಾತೃ ಭಾಷೆಯಲ್ಲೇ ಕಾಲೇಜಿನ ಹಂತದವರೆಗೆ ಮಕ್ಕಳಿಗೆ ಶಿಕ್ಷಣ ದೊರೆಯಬೇಕು ಎಂದು ಹೇಳುತ್ತಿರುವುದು ಕಾರಣ. ಇದನ್ನು ಸ್ಪಷ್ಟವಾಗಿ ನಿರ್ಧರಿಸಬೇಕು. ಈ ಖಂಡದಿಂದಾಗಿ ಸಮಸ್ಯೆಗಳು ಪರಿಹಾರಗೊಳ್ಳಲಿದ್ದು, ಪ್ರಾಂತ್ಯದಿಂದ ಹೊರಗಿರುವ ಒರಿಯನ್ನರು ತಮ್ಮ ಸಂಸ್ಕೃತಿಯನ್ನು ಉಳಿಸಿಕೊಳ್ಳುತ್ತಾರೆ. ಜತೆಗೆ. ಒರಿಸ್ಸಾ ಪ್ರಾಂತ್ಯದಲ್ಲಿ ನೆಲೆಸಿರುವ ಬೇರೆ ಜನರ ಸಂಸ್ಕೃತಿಯನ್ನೂ ಸಂರಕ್ಷಿಸಬಹುದು. ಆದರೆ, ಒರಿಸ್ಸಾ ಪ್ರಾಂತ್ಯದ ಭಾಷೆ ಯಾವುದಿರಬೇಕು ಹಾಗೂ ಮೂಲವಾಸಿಗಳ ಭಾಷೆ ಯಾವುದಿರಬೇಕು ಎಂದು ತಿಳಿಯಲು ಇಚ್ಛಿಸುತ್ತೇನೆ. ಕೆಲ ಮೂಲ ನಿವಾಸಿ ಕೆಲಸಗಾರರು ತಮ್ಮ ಭಾಷೆಯನ್ನು ಮನ್ನಿಸಬೇಕು ಎನ್ನುತ್ತಿದ್ದಾರೆ. ಒಂದು ವೇಳೆ ಒರಿಸ್ಸಾದಲ್ಲಿರುವ ಎಲ್ಲ ಭಾಷೆಗಳನ್ನು ಮನ್ನಿಸಿದರೆ, ಪ್ರಾಂತೀಯ ಸರ್ಕಾರಕ್ಕೆ ಆಡಳಿತ ನಿರ್ವಹಣೆ ಕಷ್ಟಕರವಾಗಲಿದೆ.

ಮೇಲಿನ ಸಮಸ್ಯೆಗಳನ್ನು ರಾಜ್ಯಗಳು ಪರಿಹರಿಸಿಕೊಳ್ಳಬಹುದಾಗಿದ್ದು, ನಮ್ಮ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಹಕ್ಕುಗಳನ್ನು ರಕ್ಷಿಸುವ ೧೮ ನೇ ಖಂಡ ವನ್ನು ನಾನು ಸ್ವಾಗತಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಎರಡು ತಿದ್ದುಪಡಿಗಳಿವೆ. ಒಂದು ಮೋಹನ್‌ಲಾಲ್ ಸಕ್ಸೇನಾ ಅವರದ್ದು.

**ಶ್ರೀ ಮೋಹನ್‌ಲಾಲ್ ಸಕ್ಸೇನಾ :** ಮಾನ್ಯರೇ, ನನ್ನ ತಿದ್ದುಪಡಿಯನ್ನು ಹಿಂಪಡೆಯುತ್ತಿದ್ದೇನೆ.

ಸದನ ತಿದ್ದುಪಡಿಯನ್ನು ಹಿಂಪಡೆಯಿತು.

**ಮಾನ್ಯ ಸಭಾಧ್ಯಕ್ಷರು :** ಉಪ ಖಂಡ (೨)ನ್ನು ಪರಿಶೀಲನೆ ಸಮಿತಿಗೆ ಕಳಿಸಬೇಕೆಂಬ ಶ್ರೀ ಮುನ್ಷಿ ಅವರ ತಿದ್ದುಪಡಿ.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯ್ ಪಟೇಲ್ :** ನಾನು ಅಂಗೀಕರಿಸುತ್ತೇನೆ.

ಶ್ರೀ ಮುನ್ಷಿಯವರ ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :** ಖಂಡ ೧೮ರ ಉಪ ಖಂಡ (೧), (೩)(ಎ) ಮತ್ತು(ಬಿ)ಯನ್ನು ಉಳಿಸಿಕೊಂಡು, (೨)ನ್ನು ಹೊರತುಪಡಿಸಿದ ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ.

೧೮ನೇ ಖಂಡವನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :** ಈಗ ಸಮಯ ೧೨.೩೦ರ ಸಮೀಪ ಇದೆ. ಇಂದಿಗೆ ಕಲಾಪ ಮುಕ್ತಾಯಗೊಳಿಸಿ, ನಾಳೆ ಬೆಳಗ್ಗೆ ೯ಕ್ಕೆ ಕೆಲಸವನ್ನು ಮತ್ತೆ ಪ್ರಾರಂಭಿಸೋಣ.

ಮೇ ೩, ೧೯೪೭ರ ಶುಕ್ರವಾರ ೯ ಗಂಟೆವರೆಗೆ ಸದನವನ್ನು ಮುಂದೂಡಲಾಯಿತು.

*[ಹಿಂದೂಸ್ತಾನಿ ಭಾಷಣದ ಇಂಗ್ಲಿಷ್ ಭಾಷಾಂತರ]*